ದುಡಿಯುವ ಜನರ ಪ್ರಾಣಮಿತ್ರ

ಜನಶಕ್ತಿ

ಕನ್ನಡ ವಾರಪತ್ರಿಕೆ

ಸಂಪುಟ 14 | ಸಂಚಿಕೆ 4 | ಜನವರಿ 20–26, 2020 | ಪುಟ 16 | ರೂ.10/-

Web : www.janashakthi.co.in, e-mail : js_weekly@yahoo.com



ಆರ್ಥಿಕ ಸಂಕಟಗಳ ಜತೆಗೆ ಈಗ ಬೆಲೆಯೇರಿಕೆಯ ಹೊರೆ



ಫ್ರೆಂಚ್ ಕಾರ್ಮಿಕರ ಪಿಂಚಣಿ ರಕ್ಷಣೆ ಹೋರಾಟ



ಸರ್ಕಾರ ಸತ್ತಿದೆ ; ಪೊಲೀಸರು ಹೆಣ ಕಾಯುತ್ತಿದ್ದಾರೆ !

ಜನವರಿ 8 ಮಹಾಮುಷ್ಕರ ಕರ್ನಾಟಕದ ಕಾರ್ಮಿಕರಿಗೆ ಸಿಐಟಿಯು ಅಭಿನಂದನೆ

ಸಿಎಎ, ಖಾಸಗೀಕರಣ, ನಿರುದ್ಯೋಗ ಮತ್ತು ಪ್ರಜಾಪ್ರಭುತ್ವದ ಮೇಲೆ ದಾಳಿಯ ವಿರುದ್ಧ ಜನವರಿ 30 ರಂದು ಮಾನವ ಸರಪಳಿ- ಜನ ಏಕತಾ ಜನ ಅಧಿಕಾರ ಆಂದೋಲನದ ಕರೆ

ಜನ ಏಕತಾ ಜನ ಅಧಿಕಾರ ಆಂದೋಲನ (ಜೆಇಜೆಎ)ದ ಕಾರ್ಯಕಾರಿ ಗುಂಪಿನ ಸಭೆ ಜನವರಿ 15ರಂದು ನವದೆಹಲಿಯಲ್ಲಿ ನಡೆಯಿತು. ಸಿಎಎ/ ಎನ್‌ಪಿಆರ್/ಎನ್‌ಆರ್‌ಸಿ ಮೂಲಕ ಸಂವಿಧಾನ ಮತ್ತು ಪ್ರಜಾಪ್ರಭುತ್ವದ ಮೇಲೆ ದಾಳಿಯ ವಿರುದ್ಧ ನಡೆಯುತ್ತಿರುವ ಚಳುವಳಿಗಳನ್ನು ತೀವ್ರಗೊಳಿಸಬೇಕು ಎಂದು ಎಲ್ಲ ಜನವಿಭಾಗಗಳಿಗೆ ಅದು ಕರೆ ನೀಡಿದೆ. ಪ್ರಚಾರಾಂದೋಲನ ಮತ್ತು ಜನಗಳ ಅಣಿನೆರಿಕೆ ಈ ನಾಲ್ಕು ಪ್ರಶ್ನೆಗಳ ಮೇಲೆ ನಡೆಯಬೇಕು ಎಂದು ಅದು ಹೇಳಿದೆ:

1. ಸಂವಿಧಾನ-ವಿರೋಧಿ ಪೌರತ್ವ ತಿದ್ದುಪಡಿ ಕಾಯ್ದೆಯನ್ನು, ರಾಷ್ಟ್ರೀಯ ಜನಸಂಖ್ಯಾ ರಿಜಿಸ್ಟರ್ ಮತ್ತು ದೇಶಾದ್ಯಂತ ರಾಷ್ಟ್ರೀಯ ನಾಗರಿಕರ ರಿಜಿಸ್ಟರ್ ಯೋಜನೆಯನ್ನು ರದ್ದು ಮಾಡಬೇಕು.
2. ರೈಲ್ವೆ, ರಕ್ಷಣೆ ಮತ್ತು ವಿದ್ಯುತ್ ವಲಯವೂ ಸೇರಿದಂತೆ ಸಾರ್ವಜನಿಕ ವಲಯದ ಉದ್ದಿಮೆಗಳ ಖಾಸಗೀಕರಣವನ್ನು ನಿಲ್ಲಿಸಬೇಕು
3. ಹೆಚ್ಚುತ್ತಿರುವ ನಿರುದ್ಯೋಗದ ವಿರುದ್ಧ
4. ವಿಶ್ವವಿದ್ಯಾಲಯಗಳ ಕ್ಯಾಂಪಸ್‌ಗಳ ಮೇಲೆ ಪ್ರಾಯೋಜಿತ ದಾಳಿಗಳು ಮತ್ತು ಶಿಕ್ಷಣದ ವ್ಯಾಪಾರೀಕರಣದ ವಿರುದ್ಧ

ದೇಶದ ಜಾತ್ಯತೀತ ಹಂದರವನ್ನು ಕಾಪಾಡಿಕೊಳ್ಳಲು ಹಿಂದೂರಾಷ್ಟ್ರದ ಕೋಮುವಾದಿ ಆರೆಸ್ಸೆಸ್ ಅಜೆಂಡಾವನ್ನು ಬಯಲಿಗೆಳೆಯಲು, ಮಹಾತ್ಮ ಗಾಂಧಿಯ 72ನೇ ಹುತಾತ್ಮ ದಿನಾಚರಣೆಯ ಜನವರಿ 30, 2020ರಂದು ದೇಶಾದ್ಯಂತ ಮಾನವ ಸರಪಳಿಗಳನ್ನು ಸಂಘಟಿಸುವುದಾಗಿ ಜೆಇಜೆಎ ನಿರ್ಧರಿಸಿದೆ. ಸಮಯ ಮತ್ತು ಸ್ಥಳವನ್ನು ಈ ಸಂಘಟನೆಯ ಅಂಗ ಸಂಘಟನೆಗಳ ರಾಜ್ಯ ಮುಖಂಡರು ನಿರ್ಧರಿಸುತ್ತಾರೆ. ರಾಜ್ಯಗಳ ಮತ್ತು ಜಿಲ್ಲೆಗಳ ಮಟ್ಟದಲ್ಲಿ ಇವು ನಡೆಯುತ್ತವೆ ಎಂದು ಅದು ಹೇಳಿದೆ.

ಇದಕ್ಕೆ ಮೊದಲು **ಜನವರಿ 23ರಂದು ನೇತಾಜಿ ಸುಭಾಷ್ ಚಂದ್ರ ಬೋಸ್‌ರವರ ಜನ್ಮದಿನವನ್ನು 'ಪ್ರಜಾಪ್ರಭುತ್ವ ರಕ್ಷಿಸಿ' ದಿನವಾಗಿ ಬ್ಲಾಕ್ ಮಟ್ಟಗಳಲ್ಲಿ ಆಚರಿಸಲಾಗುವುದು.**

ಜನವರಿ 26, 2020ರ ಪ್ರಜಾಪ್ರಭುತ್ವ ದಿನವನ್ನು 'ಸಂವಿಧಾನ ರಕ್ಷಿಸಿ' ದಿನವಾಗಿ ಆಚರಿಸಲಾಗುವುದು. ಅಂದು ಜಿಲ್ಲಾ ಮಟ್ಟಗಳಲ್ಲಿ ಸಂವಿಧಾನದ ಪೀಠಿಕೆಯನ್ನು ಸಾಮೂಹಿಕ ಸಭೆಗಳಲ್ಲಿ ಓದಲಾಗುವುದು.

ಜೆಇಜೆಎ ಕಾರ್ಮಿಕರು, ರೈತರು, ವಿದ್ಯಾರ್ಥಿಗಳು, ಯುವಜನರು, ಮಹಿಳೆಯರು, ಆದಿವಾಸಿಗಳು, ದಲಿತರು, ಅಲ್ಪಸಂಖ್ಯಾತರು , ಸಾಂಸ್ಕೃತಿಕ ಕಾರ್ಯಕರ್ತರು , ಬುದ್ಧಿಜೀವಿಗಳ ಸಾಮೂಹಿಕ, ವರ್ಗ ಮತ್ತು ಸಾಮಾಜಿಕ ಸಂಘಟನೆಗಳ 20 ಕೋಟಿಗೂ ಹೆಚ್ಚು ಸದಸ್ಯರನ್ನು ಒಳಗೊಂಡಿರುವ ಒಂದು ವೇದಿಕೆ. ಇದರ ಸದಸ್ಯರು ಎಲ್ಲ ಸಮಾನ ಮನಸ್ಕ ಸಂಘಟನೆಗಳು ಮತ್ತು ವ್ಯಕ್ತಿಗಳನ್ನು ಸಂಪರ್ಕಿಸಿ ಈ ಬೃಹತ್ ಪ್ರಚಾರಾಂದೋಲನದಲ್ಲಿ ಮತ್ತು ಮತ್ತು ಹೋರಾಟದಲ್ಲಿ ಒಂದುಗೂಡಿಸಲು ಪ್ರಯತ್ನಿಸುತ್ತಾರೆ, ನರೇಂದ್ರ ಮೋದಿ ಸರಕಾರ ಈ ಸಿಎಎ, ಎನ್‌ಪಿಆರ್, ಎನ್‌ಆರ್‌ಸಿಯನ್ನು ಹಿಂತೆಗೆದುಕೊಳ್ಳುವಂತೆ ಮಾಡಲು, ಖಾಸಗೀಕರಣ, ನಿರುದ್ಯೋಗ ಮತ್ತು ಪ್ರಜಾಪ್ರಭುತ್ವದ ಮೇಲೆ ದಾಳಿಗೆ ಅನುವು ಮಾಡಿ ಕೊಡುವ ಜನ-ವಿರೋಧಿ ತಪ್ಪು ಧೋರಣೆಗಳನ್ನು ಕೈಬಿಡುವಂತೆ ಮಾಡಲು ಗರಿಷ್ಠ ಐಕ್ಯತೆಯನ್ನು ಬೆಸೆಯಲು ಪ್ರಯತ್ನಿಸುತ್ತಾರೆ ಎಂದು ಜೆಇಜೆಎ ಹೇಳಿದೆ.

"ಗೋ ಬ್ಯಾಕ್ ಬೊಲ್ಸೊನಾರೊ"-ಜನವರಿ 25 ರಂದು ಪ್ರತಿಭಟನೆ

ಜನವರಿ 18 ರಿಂದ ಪ್ರಚಾರಾಂದೋಲನ: ಅಖಿಲ ಭಾರತ ಕಬ್ಬು ರೈತರ ಒಕ್ಕೂಟದ ಕರೆ

ನರೇಂದ್ರ ಮೋದಿ ಸರಕಾರ ಈ ವರ್ಷದ ಪ್ರಜಾಪ್ರಭುತ್ವ ದಿನಾಚರಣೆಗೆ ಮುಖ್ಯ ಅತಿಥಿಯಾಗಿ ಬ್ರೆಝಿಲ್‌ನ ಅಧ್ಯಕ್ಷ ಜೈರ್ ಮೆಸಿಯಾಸ್ ಬೊಲ್ಸೊನಾರೊ ರವರನ್ನು ಆಹ್ವಾನಿಸಿದೆ. ಇದನ್ನು ಅಖಿಲ ಭಾರತ ಕಿಸಾನ್ ಸಭಾಕ್ಕೆ ಸಂಯೋಜಿತವಾಗಿರುವ ಅಖಿಲ ಭಾರತ ಕಬ್ಬು ರೈತರ ಒಕ್ಕೂಟ ಖಂಡಿಸಿದೆ. ಭಾರತದ 5 ಕೋಟಿ ಕಬ್ಬು ಬೆಳೆಗಾರರು ಮತ್ತು 5 ಲಕ್ಷ ಸಕ್ಕರೆ ಉದ್ದಿಮೆಯ ಕಾರ್ಮಿಕರ ಹಿತಗಳಿಗೆ ಬಾಧಕವಾಗುವ ಕ್ರಮ ಕೈಗೊಂಡಿರುವ ಮತ್ತು ತನ್ನ ದೇಶದಲ್ಲೂ ಭ್ರಷ್ಟಾಚಾರ ಮತ್ತು ದಮನದಿಂದಾಗಿ ತೀವ್ರ ಜನ ಪ್ರತಿಭಟನೆಗಳನ್ನು ಎದುರಿಸುತ್ತಿರುವ ಈ ವ್ಯಕ್ತಿ ಹಿಂದಿರುಗಿ ಹೋಗಬೇಕು ಎಂದು ಆಗ್ರಹಿಸುವ ಪ್ರಚಾರಾಂದೋಲನವನ್ನು ಜನವರಿ 18ರಿಂದ ನಡೆಸಲು ಮತ್ತು ಪ್ರಜಾಪ್ರಭುತ್ವ ದಿನಾಚರಣೆಯ ಮುನ್ನಾದಿನ ದೇಶಾದ್ಯಂತ ಪ್ರತಿಭಟನೆ ನಡೆಸಲು ಒಕ್ಕೂಟ ಕರೆ ನೀಡಿದೆ.

ಭಾರತ ಸರಕಾರ ದೇಶದ ಕಬ್ಬು ರೈತರಿಗೆಂದು ಇರುವ "ನ್ಯಾಯಯುತ ಮತ್ತು ಫಲದಾಯಕ ಬೆಲೆ"(ಎಫ್‌ಆರ್‌ಪಿ) ಮತ್ತು 'ಪ್ರಭುತ್ವ ಸಲಹೆ ಮಾಡುವ ಬೆಲೆ' (ಎಸ್‌ಎಪಿ) ಇವೆರಡೂ, ಜತೆಗೆ ಸಬ್ಸಿಡಿಗಳು ವಿಶ್ವ ವ್ಯಾಪಾರ ಸಂಘಟನೆ(ಡಬ್ಲ್ಯುಟಿಒ) ವಿಧಿಸಿರುವ ಮಿತಿಯನ್ನು ದಾಟುತ್ತವೆ ಎಂದು ಬ್ರೆಝಿಲ್ ದೂರು ಸಲ್ಲಿಸಿದೆ. ವಾಸ್ತವವಾಗಿ ಇದು ಆ ಮಿತಿಗಳನ್ನೂ ದಾಟುವುದಿಲ್ಲ, ಏಕೆಂದರೆ ಡಬ್ಲ್ಯುಟಿಒದ ಕೃಷಿ ಕುರಿತ ಒಪ್ಪಂದ ಇನ್ನೂ 1986-87ರ ಬೆಲೆಗಳನ್ನೇ ಆಧರಿಸಿರುವುದರಿಂದ ರೂಪಾಯಿ ಮೌಲ್ಯದಲ್ಲಿ ಆಗಿರುವ ಬದಲಾವಣೆಯನ್ನು ಅದು ಗಮನಕ್ಕೆ ತಗೊಳ್ಳುವುದಿಲ್ಲ. ಇದಲ್ಲದೆ, ಈ ಎರಡೂ ಕ್ರಮಗಳ ಪ್ರಯೋಜನ ಬಹುಪಾಲು ಕಬ್ಬು ಬೆಳೆಗಾರರಿಗೆ ಸಿಗುತ್ತಲೂ ಇಲ್ಲ. ಸುಮಾರು 24 ಸಾವಿರ ಕೋಟಿ ರೂ.ಗಳಷ್ಟು ಕಬ್ಬು ಬೆಳೆಗಾರರಿಗೆ ಸಿಗಬೇಕಾದ ಹಣ ಪಾವತಿಯಾಗದೇ ಬಾಕಿಯಿದೆ.

ಅತ್ತ ಬಲಪಂಥೀಯ ಧೋರಣೆಗಳನ್ನು ಅನುಸರಿಸುತ್ತಿರುವ ಈತನ ಸರ್ವಾಧಿಕಾರಶಾಹಿ ಮತ್ತು ನವ-ಉದಾರವಾದೀ ಧೋರಣೆಗಳ ವಿರುದ್ಧ ಅಲ್ಲಿನ ಕಾರ್ಮಿಕರು, ರೈತರು, ವಿದ್ಯಾರ್ಥಿಗಳು, ಯುವಜನರು ಮತ್ತು ಸ್ಥಳೀಯ ಸಮುದಾಯಗಳವರು ತೀವ್ರ ಪ್ರತಿಭಟನೆಗಳನ್ನು ನಡೆಸುತ್ತಿದ್ದಾರೆ.

ಒಂದು ವೇಳೆ ಬ್ರೆಝಿಲ್‌ನ ಒತ್ತಡದಿಂದ ಡಬ್ಲ್ಯುಟಿಒ ಭಾರತದ ವಿರುದ್ಧ ನಿರ್ಧರಿಸಿದರೆ ಭಾರತದ ಕಬ್ಬು ಬೆಳೆಗಾರರಿಗೆ ಸಿಗುವ ಅಲ್ಪ-ಸ್ವಲ್ಪ ಸರಕಾರೀ ಬೆಂಬಲವೂ ಇಲ್ಲವಾಗುತ್ತದೆ. ಕಾರ್ಪೊರೇಟ್ ಲೂಟಿಯಿಂದ ರಕ್ಷಣೆ ಇಲ್ಲವಾಗುತ್ತದೆ. ಇಂತಹ ಸನ್ನಿವೇಶದಲ್ಲಿ ದೇಶದ ಬೃಹತ್ ಸಕ್ಕರೆ ಮಾರುಕಟ್ಟೆಯ ಕಾರ್ಪೊರೇಟ್ ಲೂಟಿಯ ಮೇಲೆ ಬ್ರೆಝಿಲ್ ಕಣ್ಣಿಟ್ಟಿದೆ, ನರೇಂದ್ರ ಮೋದಿ ಸರಕಾರ ಭಾರತದ ರೈತರ ಹಿತಗಳನ್ನು ರಕ್ಷಿಸುವ ಬದಲು ಅವರ ಜೀವನಾಧಾರವನ್ನೇ ನಾಶ ಮಾಡಬಯಸುವ ವ್ಯಕ್ತಿಗೆ ಸುಸ್ವಾಗತ ಕೋರುತ್ತಿದೆ ಎಂದಿರುವ ಕಬ್ಬು ರೈತರ ಒಕ್ಕೂಟ, ಈ ಹಿನ್ನೆಲೆಯಲ್ಲಿ ಜನವರಿ 18ರಿಂದ ಪ್ರಚಾರಾಂದೋಲನಕ್ಕೆ ಮತ್ತು ಕೊನೆಯ ದಿನ, ಜನವರಿ 25ರಂದು ಪ್ರತಿಭಟನಾ ಕಾರ್ಯಾಚರಣೆ ನಡೆಸಲು ನಿರ್ಧರಿಸಿದೆ. ಕಬ್ಬು ಬೆಳೆಯುವ ಪ್ರದೇಶಗಳಲ್ಲಿ ಒಕ್ಕೂಟದ ಎಲ್ಲ ಘಟಕಗಳು 'ಗೋಬ್ಯಾಕ್ ಬೊಲ್ಸೊನಾರೋ' ಎಂಬ ಬ್ಯಾನರುಗಳೊಂದಿಗೆ ಕಪ್ಪುಬಾವುಟಗಳ ಪ್ರದರ್ಶನ ನಡೆಸುತ್ತವೆ ಎಂದು ಹೇಳಿದೆ.

ಇದು ಈತನ ಭ್ರಷ್ಟಾಚಾರಪೂರ್ಣ ಮತ್ತು ದಮನಕಾರೀ ಆಳ್ವಿಕೆಯ ವಿರುದ್ಧ ಬ್ರೆಝಿಲ್ ಜನತೆಯ ಹೋರಾಟದೊಂದಿಗೆ ನಮ್ಮ ಸೌಹಾರ್ದದ ಒಂದು ಕಾರ್ಯಾಚರಣೆ ಕೂಡ ಆಗಿದೆ ಎಂದು ಅಖಿಲ ಭಾರತ ಕಬ್ಬು ರೈತರ ಒಕ್ಕೂಟ ಹೇಳಿದೆ.

ಸಿಎಎ-ಎನ್‌ಪಿಆರ್-ಎನ್‌ಆರ್‌ಸಿ ವಿರುದ್ಧ ಆಂದೋಲನವನ್ನು ಒಂದುಗೂಡಿ ಮುಂದಕ್ಕೆ ಒಯ್ಯೋಣ -ಎಲ್ಲ ಜಾತ್ಯತೀತ ಮತ್ತು ಜನವಾದಿ ಶಕ್ತಿಗಳಿಗೆ ಸಿಪಿಐ(ಎಂ) ಪೊಲಿಟ್‌ಬ್ಯುರೊ ಕರೆ

ಎನ್‌ಆರ್‌ಸಿಯನ್ನು ಒಪ್ಪುವುದಿಲ್ಲ ಎಂದು ಪ್ರಕಟಿಸಿರುವ ಮುಖ್ಯಮಂತ್ರಿಗಳು ತಮ್ಮ ರಾಜ್ಯಗಳಲ್ಲಿ ಎನ್‌ಪಿಆರ್ ಪ್ರಕ್ರಿಯೆಗೆ ತಡೆ ಹಾಕಬೇಕು ಹೀಗೆ ಮಾಡುವ ಮೂಲಕ ಮಾತ್ರವೇ ಅವರು ಎನ್‌ಆರ್‌ಸಿ ಜಾರಿಯಾಗದಂತೆ ನಿಲ್ಲಿಸಲು ಸಾಧ್ಯ. ಸಿಎಎ-ಎನ್‌ಪಿಆರ್-ಎನ್‌ಆರ್‌ಸಿ ವಿರುದ್ಧ ದೇಶಾದ್ಯಂತ ಶಾಂತಿಯುತ ಪ್ರತಿಭಟನಾ ಚಳುವಳಿ ಬೆಳೆಯುತ್ತಿದ್ದು, ಈ ಆಂದೋಲನವನ್ನು ಒಂದುಗೂಡಿ ಮುಂದಕ್ಕೆ ಒಯ್ಯೋಣ ಎಂದು ಎಲ್ಲ ಜಾತ್ಯತೀತ ಮತ್ತು ಜನವಾದಿ ಶಕ್ತಿಗಳಿಗೆ ಸಿಪಿಐ(ಎಂ) ಪೊಲಿಟ್‌ಬ್ಯುರೊ ಕರೆ ನೀಡಿದೆ.

ಜನವರಿ 11 ಮತ್ತು 12ರಂದು ದಿಲ್ಲಿಯಲ್ಲಿ ಸಭೆ ಸೇರಿದ ಪೊಲಿಟ್‌ಬ್ಯುರೊ ಸಭೆಯ ನಂತರ ಪ್ರಕಟಿಸಿರುವ ಹೇಳಿಕೆಯಲ್ಲಿ ಈ ಕರೆಯನ್ನು ನೀಡಿದೆ.

ಪೌರತ್ವ ತಿದ್ದುಪಡಿ ಕಾಯ್ದೆ(ಸಿಎಎ) ವಿರುದ್ಧ ಪ್ರತಿಭಟನೆಗಳು ಮತ್ತು ಸಂವಿಧಾನ ಹಾಗೂ ಜಾತ್ಯತೀತತೆಯ ರಕ್ಷಣೆಗಾಗಿ ಚಳುವಳಿ ಬೆಳೆಯುತ್ತಿರುವುದರ ಬಗ್ಗೆ ಅದು ಹರ್ಷ ವ್ಯಕ್ತಪಡಿಸಿದೆ. ಸಿಎಎ ಒಂದು ಮತೀಯ ಮಾನದಂಡವನ್ನು ಸೇರಿಸುವುದರ ಮೂಲಕ ಸಂವಿಧಾನದಲ್ಲಿ ಪ್ರತಿಷ್ಠಾಪಿತಗೊಂಡಿರುವ ಪೌರತ್ವದ ಜಾತ್ಯತೀತ ಪರಿಕಲ್ಪನೆಯನ್ನು ಶಿಥಿಲಗೊಳಿಸುತ್ತದೆ ಎಂದು ಅದು ಪುನರುಚ್ಚರಿಸಿದೆ.

ಸಿಎಎ-ಎನ್‌ಪಿಆರ್-ಎನ್‌ಆರ್‌ಸಿ ವಿರುದ್ಧ ಸಾಮೂಹಿಕ ಆಂದೋಲನದಲ್ಲಿ ವಿದ್ಯಾರ್ಥಿಗಳು, ಯುವಜನರು ಮತ್ತು ಸಾಮಾನ್ಯ ನಾಗರಿಕರು ಇದ್ದಾರೆ. ಇವರಿಗೆ ಸಂವಿಧಾನ ಮತ್ತು ಅದರ ಜನವಾದಿ-ಜಾತ್ಯತೀತ ಮೌಲ್ಯಗಳಿಗೆ ಇದರಿಂದ ಬೆದರಿಕೆ ಬಂದಿರುವುದು ಸ್ಪಷ್ಟವಾಗಿ ಕಾಣುತ್ತಿದೆ. ಕಳೆದ ಒಂದು ತಿಂಗಳಲ್ಲಿ ದೇಶದ ಎಲ್ಲ ಭಾಗಗಳಲ್ಲೂ ಪ್ರತಿದಿನ ಪ್ರತಿಭಟನೆಗಳು ನಡೆಯುತ್ತಿವೆ.

*** ಜಮ್ಮು ಮತ್ತು ಕಾಶ್ಮೀರದಲ್ಲಿ ನಿರ್ಬಂಧಗಳನ್ನು ತೆಗೆಯಬೇಕು**
*** ಜೆಎನ್‌ಯು ಮೇಲೆ ದಾಳಿ-ತನಿಖೆಯಲ್ಲಿ ದಿಲ್ಲಿ ಪೋಲೀಸರ ಪಕ್ಷಪಾತ**
*** ಜನವರಿ 8 ಮುಷ್ಕರ -ಮೋದಿ ಸರಕಾರಕ್ಕೆ ಎಚ್ಚರಿಕೆ**
*** ಬೆಲೆಯೇರಿಕೆಯನ್ನು ತಡೆಗಟ್ಟಲು ತಕ್ಷಣ ಕ್ರಮಗಳನ್ನು ಕೈಗೊಳ್ಳಬೇಕು**
*** ಕೇರಳದ ವಿರುದ್ಧ ತಾರತಮ್ಯ ನಿಲುವನ್ನು ಕೇಂದ್ರ ಕೊನೆಗೊಳಿಸಬೇಕು**

ಜಾಮಿಯ ಮಿಲಿಯ ಮತ್ತು ಅಲಿಘಡ್ ಮುಸ್ಲಿಂ ವಿಶ್ವವಿದ್ಯಾಲಯ ಕ್ಯಾಂಪಸ್‌ಗಳಲ್ಲಿ ಶಾಂತಿಯುತ ಪ್ರತಿಭಟನೆಗಳ ಮೇಲೆ ಹರಿಯಬಿಟ್ಟ ಪಾಶವೀ ದಮನ ಮತ್ತು ಪೋಲೀಸ್ ಅತ್ಯಾಚಾರಗಳನ್ನು ಪೊಲಿಟ್‌ಬ್ಯುರೊ ಬಲವಾಗಿ ಖಂಡಿಸಿದೆ. ಸರಕಾರ ಪ್ರತಿಭಟನಾಕಾರರ ಮೇಲೆ ಹೇರಿರುವ ಸುಳ್ಳು ಕೇಸುಗಳನ್ನೆಲ್ಲ ಹಿಂತೆಗೆದುಕೊಳ್ಳಬೇಕು, ಬಂಧಿಸಿರುವವರನ್ನು, ಜೈಲಿನಲ್ಲಿರುವವರನ್ನು ಎಲ್ಲರನ್ನು ಬಿಡುಗಡೆ ಮಾಡಬೇಕು ಎಂದು ಆಗ್ರಹಿಸಿದೆ.

ಉತ್ತರಪ್ರದೇಶದಲ್ಲಿ ಅತ್ಯಂತ ಪಾಶವೀ ದಮನವನ್ನು ಶಾಂತಿಯುತ ಪ್ರತಿಭಟನಾಕಾರರ ಮೇಲೆ, ನಿರ್ದಿಷ್ಟವಾಗಿ ಮುಸ್ಲಿಂ ಸಮುದಾಯಕ್ಕೆ ಸೇರಿದವರ ಮೇಲೆ ಹರಿಯಬಿಡಲಾಗಿದೆ. ಪೋಲೀಸ್ ಗೋಲೀಬಾರ್‌ನಿಂದ 20 ಮಂದಿ ಸತ್ತಿದ್ದಾರೆ, ನೂರಾರು ಮನಗಳಲ್ಲಿ ದಾಂಧಲೆ ನಡೆಸಲಾಗಿದೆ ಮತ್ತು ದಂಡಗಳನ್ನು ವಿಧಿಸಲಾಗಿದೆ. ಇವೆಲ್ಲವೂ ಮುಖ್ಯಮಂತ್ರಿ ಆದಿತ್ಯನಾಥರ ನೇರ ಕುಮ್ಮಕ್ಕಿನಿಂದ ನಡೆಯುತ್ತಿವೆ.

ಸಿಎಎ ಮತ್ತು ಎನ್‌ಆರ್‌ಸಿಯನ್ನು ಜತೆ-ಜತೆಯಾಗಿ ನೋಡಬೇಕಾಗುತ್ತದೆ. ಪೌರತ್ವ(ನೋಂದಣಿ ಮತ್ತು ರಾಷ್ಟ್ರೀಯ ಪರಿಚಯ ಪತ್ರ ನೀಡಿಕೆ) ನಿಯಮಗಳು, 2003ರ ಪ್ರಕಾರ ಒಂದು ರಾಷ್ಟ್ರೀಯ ಜನಸಂಖ್ಯಾ ರಿಜಿಸ್ಟರ್(ಎನ್‌ಪಿಆರ್) ನ್ನು ಕಲೆ ಹಾಕಲಾಗುತ್ತದೆ, ಅದು ಎನ್‌ಆರ್‌ಸಿ(ರಾಷ್ಟ್ರೀಯ ಪೌರರ ರಿಜಿಸ್ಟರ್)ಗೆ ಆಧಾರವಾಗುತ್ತದೆ. ಸರಕಾರದ ಅಧಿಸೂಚನೆಯ ಪ್ರಕಾರ ಎನ್‌ಪಿಆರ್ ಪ್ರಕ್ರಿಯೆ ಎಪ್ರಿಲ್ 1ರಿಂದ ಸಪ್ಟಂಬರ್ 30, 2020ರ ನಡುವೆ ನಡೆಯುತ್ತದೆ. ಎನ್‌ಪಿಆರ್-ಎನ್‌ಆರ್‌ಸಿ ಪ್ರಕ್ರಿಯೆ ಲಕ್ಷಾಂತರ ಬಡಜನಗಳನ್ನು, ಅಂಚಿಗೆ ತಳ್ಳಲ್ಪಟ್ಟ ಜನಗಳನ್ನು ಬಾಧಿಸುತ್ತದೆ, ಮತ್ತು ಅಲ್ಪಸಂಖ್ಯಾತ ಸಮುದಾಯದ ಮೇಲೆ ಗುರಿಯಿಟ್ಟಿದೆ. ಸಿಎಎ ಯನ್ನು ಹಿಂತೆಗೆದುಕೊಳ್ಳಬೇಕು ಎಂಬ ತನ್ನ ಕರೆಯನ್ನು ಪೊಲಿಟ್‌ಬ್ಯುರೊ ಪುನರುಚ್ಚರಿಸಿದೆ. ಮೋದಿ ಸರಕಾರ ಅಧಿಸೂಚಿಸಿರುವಂತೆ ಎನ್‌ಪಿಆರ್‌ನ್ನು ನಡೆಸಬಾರದು ಎಂದು ಅದು ಆಗ್ರಹಿಸಿದೆ.

ಎನ್‌ಆರ್‌ಸಿಯನ್ನು ಒಪ್ಪುವುದಿಲ್ಲ ಎಂದು ಪ್ರಕಟಿಸಿರುವ ಮುಖ್ಯಮಂತ್ರಿಗಳು ತಮ್ಮ ರಾಜ್ಯಗಳಲ್ಲಿ ಎನ್‌ಪಿಆರ್ ಪ್ರಕ್ರಿಯೆಗೆ ತಡೆ ಹಾಕಬೇಕು ಎಂದು ಪೊಲಿಟ್‌ಬ್ಯುರೊ ಮನವಿ ಪುಟ 12 ಕ್ಕೆ

ಸಂಪಾದಕೀಯ

ಸರ್ಕಾರ ಸತ್ತಿದೆ ; ಪೊಲೀಸರು ಹೆಣ ಕಾಯುತ್ತಿದ್ದಾರೆ !

ಕೇಂದ್ರದಲ್ಲಿ ಬಿಜೆಪಿ ಸರ್ಕಾರ! ಕರ್ನಾಟಕದಲ್ಲಿಯೂ ಬಿಜೆಪಿ ಸರ್ಕಾರ ಇದು ಕರ್ನಾಟಕ್ಕೆ ಒದಗಿ ಬಂದ ಸೌಭಾಗ್ಯ ಎನ್ನಲಾಗಿತ್ತು. ಆದರೆ ಜನ ಒಳ್ಳೆಯ ದಿನಗಳ ಭರವಸೆಗಳನ್ನು ತಿಂದು ತೃಪ್ತಿ ಪಟ್ಟು ಕೊಳ್ಳಬೇಕಾಗಿದೆ.

ಪ್ರಧಾನಿ ಮೋದಿಯವರು ತುಮಕೂರಿನಲ್ಲಿ ಏರ್ಪಡಿಸಲಾದ ರೈತರ ಸಮಾವೇಶದಲ್ಲಿ ಪಾಲ್ಗೊಂಡಿದ್ದರು. ಆಶಯ ಭಾಷಣ ಮಾಡಿದ ಮುಖ್ಯ ಮಂತ್ರಿ ಯಡಿಯೂರಪ್ಪನವರು ರಾಜ್ಯದಲ್ಲಿ ಸಂಭವಿಸಿದ ಹಿಂದೆಂದೂ ಕಾಣದ ಪ್ರವಾಹದಿಂದ ಕೊಚ್ಚಿ ಹೋದ ಬದುಕನ್ನು ಕಟ್ಟಿಕೊಡಲು ನೆರವಿಗೆ ಬನ್ನಿ ಎಂದು ಪ್ರಧಾನಿ ಮೋದಿಯವರಲ್ಲಿ ಸ್ಪಷ್ಟವಾಗಿ ಮನವಿ ಮಾಡಿದ್ದರು. ಲಿಂಬೆಹಣ್ಣು ಮಾರುತ್ತಾ ಶಾಲೆ ಕಲಿತು ಬೆಳೆದ ಯಡಿಯೂರಪ್ಪ ಇಷ್ಟೊಂದು ಧೈರ್ಯಮಾಡಿ ತನ್ನ ಪಕ್ಷದವರೇ ಆಗಿರುವ ಚಹ ಮಾರಾಟ ಮಾಡಿ ಬೆಳೆದು ಪ್ರಧಾನಿಯಾದ ಮೋದಿಯವರಿಗೆ ರಾಜ್ಯದ ನೆರೆ ಸಂತ್ರಸ್ತರಿಗೆ ಕೇಂದ್ರದಿಂದ ಬರಬೇಕಾಗಿದ್ದ ಪರಿಹಾರ ಇದುವರೆಗೂ ತಲುಪಲಿಲ್ಲ ಎಂದು ಗೋಗುರೆದರು. ಆದರೆ ಕನಿಷ್ಠ ಮಾನವೀಯತೆಯೂ ಇಲ್ಲದ ನರೇಂದ್ರ ಮೋದಿಯವರು ಮೌನ ವಹಿಸಿದ್ದರು. ಯಡಿಯೂರಪ್ಪನವರ ಬೇಡಿಕೆಗೆ ಮನ್ನಣೆ ಸಿಗಲಿಲ್ಲ ಮಾತ್ರವಲ್ಲ ಸಂಪುಟ ವಿಸ್ತರಣೆಗೆ ಹಸಿರು ನಿಶಾನಿ ದೊರೆಯಲಿಲ್ಲ. ಇದರಿಂದ ಕೇಂದ್ರ ಹಾಗೂ ರಾಜ್ಯದಲ್ಲಿ ಬಿಜೆಪಿ ಸರ್ಕಾರ ಇದ್ದರೆ ರಾಜ್ಯದ ಜನತೆಗೆ ಪ್ರಯೋಜನವಾಗುತ್ತದೆ ಎಂಬ ಮಾತು ಸುಳ್ಳಾಗಿದೆ.

ನರೇಂದ್ರ ಮೋದಿ ಹಾಗೂ ಅಮಿತ್ ಶಾ ಮುಖ್ಯಮಂತ್ರಿ ಯಡಿಯೂರಪ್ಪಗೆ ಭೇಟಿಗೆ ಅವಕಾಶ ನೀಡುತ್ತಿಲ್ಲ. ಇದರಿಂದಾಗಿ ಅರ್ಹರಾಗಿರುವ ಅನರ್ಹ ಶಾಸಕರು ಸಚಿವ ಸ್ಥಾನ ಪ್ರಾಪ್ತವಾಗುವುದು ಮುಂದಕ್ಕೆ ಹೋಗುತ್ತಿದೆ. ಮುಖ್ಯಮಂತ್ರಿ ಮೇಲೆ ಅವರ ಒತ್ತಡ ಹೆಚ್ಚಾಗುತ್ತದೆ. ಇದರಿಂದ ತಲೆ ಬಿಸಿಮಾಡಿಕೊಂಡಿರುವ ಯಡಿಯೂರಪ್ಪ ವಿದೇಶಕ್ಕೆ ಹೋಗುವ ಕಾರ್ಯಕ್ರಮವನ್ನೆ ರದ್ದುಗೊಳಿಸಲು ಮುಂದಾಗಿದ್ದಾರೆ.

ಈ ನಡುವೆ ರಾಜ್ಯದಲ್ಲಿ ಬಡತನ ಮತ್ತು ನಿರುದ್ಯೋಗಕ್ಕೆ ಕಂಗೆಟ್ಟ ಜನ ಪ್ರತಿದಿನ ಸರಾಸರಿ 10 ರಂತೆ ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ. ಬೆಲೆಗಳು ಏರುತ್ತಿವೆ. ನಿರುದ್ಯೋಗ ಉಲ್ಬಣಗೊಳ್ಳುತ್ತಿದೆ. ಜನರ ಕೊಳ್ಳುವ ಶಕ್ತಿ ಕುಸಿಯುತ್ತಿದೆ.

ಇದೇ ಸಮಯದಲ್ಲಿ ರಾಜ್ಯದಾದ್ಯಂತ ಪೌರತ್ವ ತಿದ್ದುಪಡಿ ಕಾಯ್ದೆ ವಿರುದ್ಧ ವ್ಯಾಪಕ ಪ್ರತಿಭಟನೆಗಳು ಸ್ವಯಂ ಪ್ರೇರಣೆಯಿಂದ ನಡೆಯುತ್ತಿವೆ. ನಮ್ಮ ಸಂವಿಧಾನದ ಆಶಯಗಳನ್ನು ಕಾಪಾಡಲು ಬದ್ಧರಿರುವ ಭಾರತೀಯರು, ಜಾತಿ ಮತ, ಧರ್ಮಗಳ ಬೇದವಿಲ್ಲದೆ ಬೀದಿಗೆ ಇಳಿಯುತ್ತಿದ್ದಾರೆ. ನಮ್ಮ ದೇಶದ ಸರ್ವಧರ್ಮಗಳ ಜನರ ಐಕ್ಯತೆಯನ್ನು ಬಲಪಡಿಸಲು ಅವರು ಎಲ್ಲ ತ್ಯಾಗಕ್ಕೂ ಸಿದ್ಧರಾಗುತ್ತಿದ್ದಾರೆ. ಜನಗಳ ಈ ದೇಶಪ್ರೇಮಿ ಹೋರಾಟವನ್ನು ಮುರಿಯಲು ಅತ್ತ ಕೇಂದ್ರ ಸರ್ಕಾರ, ಇತ್ತ ರಾಜ್ಯ ಸರ್ಕಾರಗಳು ತಂತ್ರಗಳನ್ನು ಹೂಡುತ್ತಿವೆ. ಸುಳ್ಳುಗಳನ್ನು ಹರಡಿ ಜನರ ದಾರಿ ತಪ್ಪಿಸುತ್ತಿದ್ದಾರೆ. ನಿರುದ್ಯೋಗ, ತಾರತಮ್ಯ, ಅಸ್ಪೃಶ್ಯತೆ, ಮತೀಯ ದ್ವೇಶದಿಂದ ಬಿಡುಗಡೆ ಬಯಸುವವರನ್ನು ದೇಶದ್ರೋಹಿಗಳೆಂದು ಆರೋಪಿಸುತ್ತಾರೆ. ಪೊಲೀಸರ ಮೂಲಕ ಕ್ರೂರವಾದ ಹಿಂಸೆಯನ್ನು ಹರಿಬಿಡುತ್ತಿದ್ದಾರೆ. ಯುವಜನರು, ವಿದ್ಯಾರ್ಥಿಗಳು ಪೊಲೀಸರ ಗುಂಡಿಗೆ ಧೈರ್ಯದಿಂದ ಎದೆಯೊಡ್ಡುತ್ತಾರೆ. ಹುತಾತ್ಮರಾಗುತ್ತಾರೆ. ಇಲ್ಲಿ ಸರ್ಕಾರ ಸತ್ತು ನಾರುತ್ತಿದೆ. ಪೊಲೀಸ ಅನಿವಾರ್ಯವಾಗಿ ಹೆಣ ಕಾಯುತ್ತಿದ್ದಾರೆ. ಕರ್ನಾಟಕದ ಈಗ ಅಕ್ಷರಶಃ ಪೊಲೀಸ್ ರಾಜ್ಯವಾಗಿದೆ. ಇಲ್ಲಿ ಶಾಂತಿಯುತವಾಗಿ ಪ್ರತಿಭಟನೆ ಮಾಡಲು ಬಿಡುವುದಿಲ್ಲ. ಪ್ರತಿಭಟನಾ ಮೆರವಣಿಗೆಗಳಿಗೆ ಅನುಮತಿ ನೀಡುವುದಿಲ್ಲ. ಧರಣಿ ಮಾಡುವಂತಿಲ್ಲ. ಘೋಷಣೆ ಹಾಕುವಂತಿಲ್ಲ. ಪೌರತ್ವ ತಿದ್ದುಪಡಿ ಕಾಯ್ದೆ ವಿರುದ್ಧ ಪ್ರಚಾರ ಮಾಡುವಂತಿಲ್ಲ. ಇಡೀ ರಾಜ್ಯವೇ ಜೈಲಾಗಿದೆ. ಸರ್ಕಾರ ಅಸ್ತಿತ್ವದಲ್ಲಿದ್ದಂತೆ ಕಾಣುವುದಿಲ್ಲ. ಶಾಸಕರಾದವರಿಗೆ ಮಂತ್ರಿಗಳಾಗುವ ಕನಸು. ಜನರ ಪ್ರಶ್ನೆಗಳಿಗಿಲ್ಲ ಕಾಳಜಿ. ತಮ್ಮ ಕ್ಷೇತ್ರಗಳತ್ತ ಹೋಗುವುದನ್ನೇ ಕೈಬಿಟ್ಟಿದ್ದಾರೆ. ಆದ್ದರಿಂದ ಈ ಸರ್ಕಾರದ ಧೋರಣೆ ಬದಲಾಗಬೇಕು ಇಲ್ಲವೆ ಈ ಸರ್ಕಾರ ತೊಲಗಬೇಕು.

ಮಾನವ ಸರಪಳಿ ಕಾರ್ಯಕ್ರಮ: ಜನವರಿ 30, 2020

ಪೌರತ್ವ ತಿದ್ದುಪಡಿ ಕಾಯ್ದೆ ಹಾಗೂ ರಾಷ್ಟ್ರೀಯ ಪೌರತ್ವ ನೊಂದಣಿಯನ್ನು ಪ್ರತಿರೋಧಿಸಿ, ಸೌಹಾರ್ದ ಭಾರತ– ಬಲಿಷ್ಠ ಭಾರತಕ್ಕಾಗಿ ಒತ್ತಾಯಿಸಿ, ಸೌಹಾರ್ದ ಕರ್ನಾಟಕ ಸಮಿತಿಯು ರಾಜ್ಯದಾದ್ಯಂತ ಎಲ್ಲಾ ತಾಲೂಕುಗಳಲ್ಲಿ ಮಾನವ ಸರಪಳಿ ಕಾರ್ಯಕ್ರಮವನ್ನು ಜನವರಿ, 30, 2020 ರಂದು ಆಯೋಜಿಸಿದೆ. ಇದನ್ನು ಪಕ್ಷ ಬೆಂಬಲಿಸಲು ನಿರ್ಧರಿಸಿದ್ದು ಈ ಕಾರ್ಯಕ್ರಮದಲ್ಲಿ ಪಾಲುಗೊಳ್ಳಲು ಕರ್ನಾಟಕದ ಜನತೆಗೆ ಮತ್ತು ಅದರ ಯಶಸ್ವಿಗೆ ಅಗತ್ಯ ಕ್ರಮವಹಿಸಲು ತನ್ನ ಘಟಕಗಳಿಗೆ ಸಿಪಿಐ(ಎಂ) ಕರ್ನಾಟಕ ರಾಜ್ಯ ಸಮಿತಿ ಕರೆ ನೀಡಿದೆ.

ಕಲಬುರಗಿ ಸಿಎಎ–ವಿರೋಧಿ ಸಮಾವೇಶ : ಜನವರಿ 21

ಕಲಬುರಗಿಯಲ್ಲಿ ದಿನಾಂಕ ಜನವರಿ 21 ರಂದು ಸಿಪಿಐ(ಎಂ) ಸೇರಿದಂತೆ ವಿವಿಧ ರಾಜಕೀಯ ಪಕ್ಷಗಳು ಮತ್ತು ಕಲಬುರಗಿ ಪೀಪಲ್ಸ್ ಫೋರಂ ನೇತೃತ್ವದಲ್ಲಿ ಪೌರತ್ವ ತಿದ್ದುಪಡಿ ಕಾಯ್ದೆ ಹಾಗೂ ರಾಷ್ಟ್ರೀಯ ಪೌರತ್ವ ನೊಂದಣಿಯನ್ನು ವಿರೋಧಿಸಿ ಹೈದ್ರಾಬಾದ್ ಪ್ರದೇಶ ವ್ಯಾಪ್ತಿಯ ಬೃಹತ್ ಪ್ರತಿಭಟನಾ ಬಹಿರಂಗ ಸಮಾವೇಶವನ್ನು ಆಯೋಜಿಸಿವೆ. ಈ ಬಹಿರಂಗ ಸಮಾವೇಶದಲ್ಲಿ ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿಗಳಾದ ಕಾಂ.ಸೀತಾರಾಂ ಯಚೂರಿಯವರು ಪಾಲ್ಗೊಳ್ಳಲಿದ್ದಾರೆ. ಅದೇ ರೀತಿ ಇನ್ನು ಹಲವು ರಾಜಕೀಯ ಮುಖಂಡರು ಪಾಲ್ಗೊಳ್ಳಲಿದ್ದಾರೆ. ಲಕ್ಷಾಂತರ ಜನ ಪಾಲ್ಗೊಳ್ಳುವರೆಂಬ ನಿರೀಕ್ಷೆ ಇದೆ. ಆದ್ದರಿಂದ ಹೈದ್ರಾಬಾದ್ ಕರ್ನಾಟಕ ಪ್ರದೇಶದ ಪ್ರತಿ ಜಿಲ್ಲೆಯಿಂದಲೂ ಸಾವಿರಾರು ಸಂಖ್ಯೆಯಲ್ಲಿ ಪಾಲುಗೊಳ್ಳಲು ಜನತೆಗೆ ಮತ್ತು ಪಕ್ಷದ ಘಟಕಗಳಿಗೆ ಸಮಾವೇಶವನ್ನು ಯಶಸ್ವಿಗೊಳಿಸಲು ಅಗತ್ಯ ಕ್ರಮ ವಹಿಸುವಂತೆ ಸಿಪಿಐ(ಎಂ) ಕರ್ನಾಟಕ ರಾಜ್ಯ ಸಮಿತಿ ಕರೆ ನೀಡಿದೆ.

ಫೆಬ್ರುವರಿ 2–6 ಕಾರವಾರ ರಾಜ್ಯ ಶಾಲೆಗೆ ಶಿಬಿರಾರ್ಥಿಗಳಿಗೆ ಸೂಚನೆಗಳು

ಪಕ್ಷದ ರಾಜ್ಯ ಮಟ್ಟದ ಶಾಲೆಯು ಫೆಬ್ರವರಿ 02 ರಿಂದ 06, 2020 ರವರೆಗೆ ಉತ್ತರ ಕನ್ನಡ ಜಿಲ್ಲೆಯ ಕಾರವಾರದಲ್ಲಿ ನಡೆಯಲಿದೆ. ಹಾಜರಿರಬೇಕಾದ ಶಿಬಿರಾರ್ಥಿಗಳು ಫೆಬ್ರವರಿ 02 ರಂದು ಬೆಳಿಗ್ಗೆ 8.00 ಘಂಟೆಯೊಳಗೆ ಶಿಬಿರದ ಸ್ಥಳವನ್ನು ತಲುಪುವಂತೆ ಅಗತ್ಯ ವ್ಯವಸ್ಥೆ ಮಾಡಿಕೊಳ್ಳಬೇಕು. ಕಾರವಾರದ ಸುತ್ತಲಿನ ಜಿಲ್ಲೆಗಳ ಸಂಗಾತಿಗಳು ಕೂಡಾ ಸಮಯಕ್ಕೆ ಹಾಜರಿರಬೇಕು. ಈಗಾಗಲೇ ಸೂಚಿಸಿದಂತೆ, ಶಿಬಿರವು ಬೆಳಿಗ್ಗೆ ಬೇಗನೆ ಉದ್ಘಾಟನೆಗೊಂಡು, ಆ ದಿನ ಎರಡು ಉಪನ್ಯಾಸಗಳನ್ನು ಪಡೆಯ ಬೇಕಿದೆ. ಆದ್ದರಿಂದ ಸಮಯ ಪಾಲನೆ ಅಗತ್ಯವಿದೆ. 5 ದಿನಗಳ ಕಾಲ ನಡೆಯುವ ಈ ಶಿಬಿರದಲ್ಲಿ ಉಪನ್ಯಾಸಕರಾಗಿ ಕೇಂದ್ರದಿಂದ. ಕಾಂ. ಸೀತಾರಾಂ ಎಚೂರಿ, ಕಾಂ. ಎಂ.ಎ ಬೇಬಿ, ಕಾಂ. ರಾಘವುಲು ಮತ್ತು ಕಾಂ.ವೈ. ಕರೀಂ ಪಾಲ್ಗೊಳ್ಳಲಿದ್ದಾರೆ. ಶಿಬಿರಾರ್ಥಿ ಶುಲ್ಕ ಈ ಹಿಂದೆ ನಿರ್ಧರಿಸಿದಂತೆ ತಲಾ 500 ರೂಗಳನ್ನು ಕಡ್ಡಾಯವಾಗಿ ನೀಡಬೇಕು.

ಬೈಂದೂರು: ಬಿಜೂರು, ಬವಲಾಡಿ ಕಟ್ಟಡ ಕಾರ್ಮಿಕರ ಸಂಘ ಉದ್ಘಾಟನೆ

ಅಖಿಲ ಭಾರತ ನಿರ್ಮಾಣ ಕಾರ್ಮಿಕರ ಫೆಡರೇಷನ್ (CWFI) ನವದೆಹಲಿ ಗೆ ಸಂಯೋಜಿಸಲ್ಪಟ್ಟ, ಬೈಂದೂರು ತಾಲೂಕು ಕಟ್ಟಡ ಮತ್ತು ಇತರೆ ನಿರ್ಮಾಣ ಸಂಘದ ನೇತೃತ್ವದಲ್ಲಿ ಬಿಜೂರು, ಬವಲಾಡಿ ಪ್ರದೇಶದ ಕಟ್ಟಡ ಕಾರ್ಮಿಕರ ಬೃಹತ್ ಸಮಾವೇಶವು 11 ಜನವರಿ 2020 ರಂದು ಬವಲಾಡಿಯ ಮಕ್ಕಿದೇವಸ್ಥಾನದ ಮಹಾಲಿಂಗೇಶ್ವರ ವಿಶ್ವ ಪೀಠಂ ಮಹಾದೇವ ರಂಗ ಮಂದಿರ ಸಭಾಂಗಣದಲ್ಲಿ ಯಶಸ್ವಿಯಾಗಿ ಜರಗಿತು. ಸಿಐಟಿಯು ಕಾರ್ಮಿಕ ಸಂಘದ ಬೈಂದೂರು ತಾಲೂಕು ಮುಖಂಡ ವೆಂಕಟೇಶ ಕೋಣಿ ಕಾರ್ಮಿಕರ ಸಮಾವೇಶವನ್ನು ಉದ್ಘಾಟಿಸಿ ಮಾತನಾಡುತ್ತಾ, ಸ್ವಾತಂತ್ರ್ಯ ಪೂರ್ವ 1926 ರಿಂದ ಕಾರ್ಮಿಕ ಸಂಘಗಳ ಸಂಘಟಿತ ಹೋರಾಟದಿಂದ ರಚನೆಗೊಂಡ ಕಾರ್ಮಿಕ ಕಾಯಿದೆ, ಕಾನೂನಿಂದಾಗಿ ವಿವಿಧ ಸೌಲಭ್ಯವನ್ನು ನಿರಂತರವಾಗಿ ಪಡೆಯುತ್ತಾ ಬಂದಿರುವ ಕಾರ್ಮಿಕರ ಹಕ್ಕನ್ನು ಇದೀಗ ಒಂದೊಂದಾಗಿ ಕಸಿದು ಕೊಳ್ಳುತ್ತಿರುವ ಕೇಂದ್ರ ಸರಕಾರದ ಕಾರ್ಮಿಕ ವಿರೋಧಿ ನೀತಿಯನ್ನು ಪ್ರತಿಭಟಿಸಲು ಸಂಘಟಿತ ಹೋರಾಟಕ್ಕೆ ಕಾರ್ಮಿಕ ವರ್ಗ ಮುಂದಾಗಬೇಕು ಎಂದು ಕರೆ ನೀಡಿದರು.

ಪುಟ 10 ಕ್ಕೆ



ಪೌರತ್ವ ತಿದ್ದುಪಡಿ ಮಸೂದೆಯಿಂದ ದಲಿತ ಆದಿವಾಸಿ ಸಮುದಾಯಗಳ ಬದುಕಿಗೆ ಅತಂತ್ರ

– ರವಿಚಂದ್ರ ಕೊಂಚಾಡಿ



ದೇಶವನ್ನು ಆಳುತ್ತಿರುವ ಜನವಿರೋಧಿ ಬಿಜೆಪಿ ನೇತೃತ್ವದ ನರೇಂದ್ರ ಮೋದಿ ಸರಕಾರವು ದಲಿತ ಆದಿವಾಸಿ ಸಮುದಾಯದ ಬದುಕಿನ ಮೇಲೆ ನಿರಂತರ ಕುದುರೆ ಸವಾರಿ ಮಾಡುತ್ತಿದ್ದು ಪ್ರಸ್ತುತ ಪೌರತ್ವ ತಿದ್ದುಪಡಿ ಮಸೂದೆಯಿಂದ ಈ ದೇಶದ ಮೂಲ ನಿವಾಸಿಗಳಾದ ದಲಿತ ಆದಿವಾಸಿ ಬುಡಕಟ್ಟು ಸಮುದಾಯಗಳ ಬದುಕು ಅತಂತ್ರವಾದಂತೆ ಎಂದು ರವಿಚಂದ್ರ ಕೊಪ್ಪಲಕಾಡು ಹೇಳಿದರು. ಅವರು ದಲಿತ ಹಕ್ಕುಗಳ ಸಮಿತಿಯ ಕೊಂಚಾಡಿ ಘಟಕ ಸಮಾವೇಶವನ್ನು ಉದ್ದೇಶಿಸಿ ಭಾಷಣ ಮಾಡುತ್ತಿದ್ದರು.

ಸರ್ವ ಜನಾಂಗದ ಶಾಂತಿಯ ತೋಟ ಆಗಿರುವ ಭಾರತವನ್ನು ಮತ ಧರ್ಮಗಳ ಆಧಾರದ ಮೇಲೆ ವಿಘಟನೆ ಮಾಡುವ ಸಂಘ ಪರಿವಾರದ ಕುತಂತ್ರವನ್ನು ಈ ಮಣ್ಣಿನ ಮೂಲ ನಿವಾಸಿಗಳಾದ ದಲಿತರು ಆದಿವಾಸಿಗಳು ಸೋಲಿಸಬೇಕೆಂದು ಕರೆ ನೀಡಿದರು. ಬಿಜೆಪಿ ಆಳ್ವಿಕೆ ಪ್ರಾರಂಭವಾದ ಮೇಲೆ ದಲಿತರ ಮೇಲೆ ದೌರ್ಜನ್ಯದ ಘಟನೆಗಳು ಆತಂಕಕಾರಿ ಪ್ರಮಾಣದಲ್ಲಿ ಹೆಚ್ಚಾಗಿದೆ ಎಂದು ಹೇಳಿದರು.

ಸಭೆಯಲ್ಲಿ ಮುಖ್ಯ ಅತಿಥಿಗಳಾಗಿ ದಲಿತ ಹಕ್ಕುಗಳ ಸಮಿತಿಯ ಜಿಲ್ಲಾಧ್ಯಕ್ಷರಾದ ತಿಮ್ಮಯ್ಯ ಕೊಂಚಾಡಿ, ನಗರ ಕಾರ್ಯದರ್ಶಿ ಕೃಷ್ಣ ತಣ್ಣೀರುಬಾವಿ, ಡಿವೈಎಫ್ಐ ನಗರಾಧ್ಯಕ್ಷರಾದ ನವೀನ್ ಬೊಲ್ಪುಗುಡ್ಡೆ, ಚಂದ್ರಹಾಸ್, ದಯಾನಂದ ಶೆಟ್ಟಿಗಾರ್, ಶಶಿಕುಮಾರ್ ಗುಂಡಳಿಕೆ ಮಾತನಾಡಿದರು.

ಗತ ವರ್ಷದ ವರದಿಯನ್ನು ಡಿಎಚ್ಎಸ್ ನಗರ ಸಮಿತಿ ಸದಸ್ಯರಾದ ಪ್ರವೀಣ್ ಕೊಂಚಾಡಿ ಮಂಡಿಸಿದರು. ಸಭೆಯ ಅಧ್ಯಕ್ಷತೆಯನ್ನು ಕಾವೂರು ವ್ಯವಸಾಯ ಸೇವಾ ಸಹಕಾರಿ ಬ್ಯಾಂಕ್‌ನ ನಿರ್ದೇಶಕರಾದ ನಾರಾಯಣ ಕೊಂಚಾಡಿ ವಹಿಸಿದರು. ಪ್ರಾರಂಭದಲ್ಲಿ ಪಾಂಡುರಂಗ ಕೆ. ಸ್ವಾಗತಿಸಿ ಕಾರ್ಯಕ್ರಮ ನಿರ್ವಹಿಸಿದರು. ಕೊನೆಯಲ್ಲಿ ನೂತನ ಕಾರ್ಯದರ್ಶಿ ದೊಂಬಯ್ಯ ಕೆ. ವಂದಿಸಿದರು.

ವರದಿ: ದೊಂಬಯ್ಯ ಕೆ

ಸಾವಿತ್ರಿಬಾಯಿ ಪುಲೆ ಜನ್ಮ ದಿನಾಚರಣೆ

ವರದಿ: ಗೌಡಗೆರೆ ಮಾಯುಶ್ರೀ



ಶೋಷಿತ ಸಮುದಾಯದ ಹೆಣ್ಣು ಮಕ್ಕಳನ್ನು ಸುಶಿಕ್ಷಿತರನ್ನಾಗಿ ಮಾಡುವಲ್ಲಿ ತಮ್ಮ ಜೀವನವನ್ನು ಮುಡುಪಾಗಿಟ್ಟ ಸಾವಿತ್ರಿ ಬಾಯಿ ಪುಲೆ ರವರ ಆದರ್ಶಯುತ ಬದುಕಿನ ವಿಚಾರಧಾರೆಗಳನ್ನು ಇಂದಿನ ಪಠ್ಯಕ್ರಮಗಳಲ್ಲಿ ಅಳವಡಿಸುವ ಅಗತ್ಯವಿದೆ ಎಂದು ಸಾಹಿತಿ ಹಾಗೂ ಕನ್ನಡ ಪುಸ್ತಕ ಪ್ರಾಧಿಕಾರದ ನಿಕಟಪೂರ್ವ ಅಧ್ಯಕ್ಷರಾದ ಡಾ॥ ವಸುಂಧರ ಭೂಪತಿಯವರು ಅಭಿಪ್ರಾಯಪಟ್ಟರು.

ದಲಿತ ಹಕ್ಕುಗಳ ಸಮಿತಿ, ಬೆಂಗಳೂರು ಉತ್ತರ ಜಿಲ್ಲಾ ಸಮಿತಿಯು ಕಮಲಾನಗರದ ಅಂಬೇಡ್ಕರ್ ಭವನದಲ್ಲಿ ಹಮ್ಮಿಕೊಂಡಿದ್ದ ಸಾವಿತ್ರಿಬಾಯಿ ಪುಲೆ ರವರ ಜನ್ಮ ದಿನಾಚರಣೆ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದ್ದರು.

ಭಾರತದ ಭೂಮಿಯಲ್ಲಿ ಸಾಮಾಜಿಕ ಹೋರಾಟದ ಬೀಜ ಬಿತ್ತಿದ ಫೂಲೆ ದಂಪತಿಗಳು ಸ್ತ್ರೀಯರಿಗೆ ಶಿಕ್ಷಣವನ್ನು ನಿರಾಕರಿಸಿ ಮೌಢ್ಯತೆಯನ್ನು ಸಂರಕ್ಷಿಸಿಕೊಂಡಿದ್ದ ಸನಾತನವಾದಿಗಳ ಲಿಂಗ ಅಸಮಾನತೆ, ಜಾತಿ ಅಸಮಾನತೆಯಂತ ಯತಾಸ್ಥಿತಿವಾದವನ್ನು ಹೋಗಲಾಡಿಸಿ ಮಹಿಳೆಯರಲ್ಲಿ ಓದಿನ ಅಭಿರುಚಿಯನ್ನು ಬೆಳೆಸಿದ್ದಲ್ಲದೆ 18 ಶಾಲೆಗಳನ್ನು ಸ್ವತ: ತೆರೆದು ಅಕ್ಷರಾಭ್ಯಾಸ ಮಾಡಿಸಿದ್ದಲ್ಲದೆ ಆಶ್ರಮ ಶಾಲೆಗಳನ್ನು ತೆರೆಯುವ ಮೂಲಕ ವಿಧವೆಯರ ಬದುಕಿನಲ್ಲೂ ಭರವಸೆ ತುಂಬಿ ಭಾರತೀಯ ಸಮಾಜದಲ್ಲಿ ಹೆಣ್ಣು ಮಕ್ಕಳ ಘನತೆ ಮತ್ತು ಸ್ವಾವಲಂಬಿ ಬದುಕಿಗೆ ಮುನ್ನುಡಿ ಬರೆದವರು ಎಂದು ಬಣ್ಣಿಸಿದರು. ಜಾತಿ ವ್ಯವಸ್ಥೆಯಿಂದ ನೊಂದ ದಲಿತ ಸಮುದಾಯದವರಿಗಾಗಿ ತಮ್ಮ ಮನೆಯ ಆವರಣದಲ್ಲೇ ಬಾವಿ ತೆಗೆಸಿ ಕುಡಿಯುವ ನೀರನ್ನು ಒದಗಿಸಿಕೊಟ್ಟ ಪುಲೆ ದಂಪತಿಗಳು ನುಡಿದಂತೆ ನಡೆದು ಬದ್ಧತೆಯನ್ನು ತೋರಿಸಿಕೊಟ್ಟರೆಂದು ಸ್ಮರಿಸಿದ ಅವರು ಸಾವಿತ್ರಿಬಾಯಿ ಪುಲೆ ಒಬ್ಬ ಕವಯತ್ರಿಯಾಗಿ, ಮೌಢ್ಯತೆಯನ್ನು ನಿರಾಕರಿಸಿ ಸಾಮಾಜಿಕ ಪರಿವರ್ತನೆಯ ಹಾದಿಗೆ ಬೆಳಕು ನೀಡಿದ ಮಹಾನ್ ಚೇತನ ಎಂದು ಬಣ್ಣಿಸಿದ ಅವರು ಶೇಕಡಾ 33% ಒಳ ಮೀಸಲಾತಿಯನ್ನು ಒದಗಿಸುವ ಮೂಲಕ ಮಹಿಳೆಯರಿಗೆ ಸಾಮಾಜಿಕ, ರಾಜಕೀಯ ಸ್ಥಾನಮಾನ ದೊರಕಿಸಿಕೊಡಬೇಕಾಗಿದೆ ಎಂದು ಅಭಿಪ್ರಾಯಪಟ್ಟರು.

ಕಾರ್ಯಕ್ರಮದ ಮುಖ್ಯ ಅತಿಥಿಯಾಗಿದ್ದ ಡಿಎಸ್ಎಂಎಂನ ರಾಷ್ಟ್ರೀಯ ಸಮಿತಿ ಸದಸ್ಯರಾದ ಶ್ರೀ ನಾಗರಾಜ್ ನಂಜುಂಡಯ್ಯ ರವರು ಮಾತನಾಡುತ್ತಾ ಮೇಲ್ಜಾತಿ ಮೇಲ್ವರ್ಗದವರ ಕಿರುಕುಳ ದೌರ್ಜನ್ಯಕ್ಕೆ ಎದೆಗುಂದದೆ ಅಕ್ಷರ ವಂಚಿತ ಶೋಷಿತ ಸಮುದಾಯದ ಹೆಣ್ಣು ಮಕ್ಕಳ ವಿದ್ಯಾಭ್ಯಾಸದ ಅಗತ್ಯವನ್ನು ಮನಗಂಡು ಅಕ್ಷರಾಭ್ಯಾಸ ಮಾಡಿಸಿ 'ಅಕ್ಷರದವ್ವ' ಎಂಬ ಖ್ಯಾತಿಗೆ ಪಾತ್ರರಾದ ಸಾವಿತ್ರಿಬಾಯಿ ಪುಲೆಯವರ ಆದರ್ಶಯುತ ಬದುಕು ನಮ್ಮದಾಗಬೇಕಿದೆ ಎಂದು ಅಭಿಪ್ರಾಯಪಟ್ಟ ಅವರು ಮೌಢತೆ, ಯತಾಸ್ಥಿತಿವಾದ, ಅಸ್ಪೃಶ್ಯತೆಯನ್ನು ತೊಡೆದು ಹಾಕುವಲ್ಲಿ ಶ್ರಮಿಸಿದ ಪುಲೆ ದಂಪತಿಗಳು ನಿಜಕ್ಕೂ ನಮ್ಮ ದೇಶದ ಚರಿತ್ರೆಯಲ್ಲಿ ವಿಶಿಷ್ಟ ಮನ್ನಣೆ ಗಳಿಸಿದ್ದಾರೆಂದು ಅಭಿಪ್ರಾಯಪಟ್ಟರು.

ಸಾವಿತ್ರಿಬಾಯಿ ಫೂಲೆ ಜನ್ಮದಿನಾಚರಣೆ ನಿಮಿತ್ತ ಗಂಗಾಧರೇಶ್ವರ ಶಿಕ್ಷಣ ಸಂಸ್ಥೆಯ ಶ್ರೀ ಡಿ.ಎಸ್. ಲಕ್ಷ್ಮಣ್, ಶ್ರೀಮತಿ ಎಸ್.ಆರ್. ಪ್ರೇಮಲತಾ, ನ್ಯೂ ಎಲೈಟ್ ಶಿಕ್ಷಣ ಸಂಸ್ಥೆಯ ಶ್ರೀಮತಿ ಎ. ಮೋಹನದಾಯಿ, ಚೇತನ ಶಿಕ್ಷಣ ಸಂಸ್ಥೆಯ ಶ್ರೀಮತಿ ಎಂ. ಶಾರದಮ್ಮ ಮತ್ತು ದೀನಸೇವಾ ಶಿಕ್ಷಣ ಸಂಸ್ಥೆಯ ಶ್ರೀಮತಿ ಬಿ. ಕಮಲ ರವರುಗಳನ್ನು ಸನ್ಮಾನಿಸಿ ಗೌರವಿಸಲಾಯಿತು. ಕಾರ್ಯಕ್ರಮವನ್ನು ಉದ್ದೇಶಿಸಿ ಡಿ.ಹೆಚ್.ಎಸ್. ಸಂಘಟನೆಯ ಮುಖಂಡರಾದ ಶ್ರೀ ಎನ್. ರಾಜಣ್ಣ, ಎಸ್. ಮಹದೇವ್, ಬಿ.ವಿ. ಶಿವಪ್ರಕಾಶ್ ಮತ್ತು ಲೋಕೇಶ್ ಬಹುಜನ್ ರವರು ಕಾರ್ಯಕ್ರಮವನ್ನುದ್ದೇಶಿಸಿ ಮಾತನಾಡಿದರು. ಹೆಚ್.ಜಿ. ನಾಗಣ್ಣ ಅಧ್ಯಕ್ಷತೆ ವಹಿಸಿದ್ದರು. ಬಿ. ಸುರೇಶ್ ಪ್ರಾಸ್ತಾವಿಕವಾಗಿ ಮಾತನಾಡಿದರು. ಹೇಮಾಮಾಲಿನಿ ಸ್ವಾಗತಿಸಿ, ಹೆಚ್.ಸಿ. ಶಿವಕುಮಾರ್ ವಂದಿಸಿದರು.

ರಾಯಚೂರು :

ಲಕ್ಷ್ಮಿ ಮತ್ತು ಮರಿಕರಿಯಪ್ಪರವರು, ಯೋಜನಾಧಿಕಾರಿ ಗೋಪಾಲನಾಯಕ, ಶಿಶು ಅಭಿವೃದ್ಧಿ ಯೋಜನಾಧಿಕಾರಿ ಗೋಕುಲ್ ರವರು ಮಾತನಾಡಿದರು. ರೈತ ಸಂಘದ ಕೆ.ಜಿ. ವಿರೇಶ್, ಅಂಗನವಾಡಿ ನೌಕರ ಸಂಘದ ಅಧ್ಯಕ್ಷರಾದ ಹೆಚ್. ಪದ್ಮಾ ಅಧ್ಯಕ್ಷತೆ ವಹಿಸಿದ್ದರು.

ನಂಜನಗೂಡೂ

ಜನವರಿ 3 ರಂದು ನಂಜನಗೂಡೂ ತಾಲ್ಲೂಕಿನ ಮುಲ್ಲೂರು ಗ್ರಾಮದಲ್ಲಿ ಸರ್ಕಾರಿ ಶಾಲೆಯಲ್ಲಿ ನಡೆದ ಸಾವಿತ್ರಿಬಾಯಿ ಪುಲೆಯವರ ಜನ್ಮ ದಿನೋತ್ಸವದಲ್ಲಿ ಶಾಲೆಯ 150 ಜನ ವಿದ್ಯಾರ್ಥಿ, ಶಿಕ್ಷಕರು ಭಾಗವಹಿಸಿದರು. ದಲಿತ ಹಕ್ಕುಗಳ ಸಮಿತಿ ನಾಯಕಿ ಶ್ರೀಮತಿ ಶಕುಂತಲರವರು ಭಾಗವಹಿಸಿ ಸಾವಿತ್ರಿಬಾಯಿ ಪುಲೆಯವರ ಬಗ್ಗೆ ಉಪನ್ಯಾಸ ನೀಡಿದರು. ಮಕ್ಕಳಿಗೆ ಚಾಕಲೇಟ್ ವಿತರಣೆ ಮಾಡಲಾಯಿತು. ಶಾಲೆಯ ಶಿಕ್ಷಕರು, ಸಿಬ್ಬಂದಿ ವರ್ಗದವರು ಭಾಗವಹಿಸಿದ್ದರು.





8 ಜನವರಿ 2020 ರ ಬೆಂಗಳೂರಿನ ಗಾಂಧಿ ಭವನದಲ್ಲಿ ಕೇಂದ್ರ ಜನವಿರೋಧಿ ಪೌರತ್ವ ಕಾಯ್ದೆ ಕುರಿತು ರಾಜ್ಯ ಮಟ್ಟದ ವಿಚಾರ ಸಂಕಿರಣ

ಜನವರಿ 8: ಕರ್ನಾಟಕದಲ್ಲಿ ರೈತ, ಕೂಲಿಕಾರರ, ಕಾರ್ಮಿಕರ ಮುಷ್ಕರ, ರಾಜ್ಯಾದ್ಯಂತ ಪ್ರತಿಭಟನೆಗಳು


ಮುಂಡಗೋಡ





ಕುಂದಾಪುರ

ಕಾರಟಗಿ



ಮಂಡ್ಯ



ಬೈಂದೂರು




ಕೊಪ್ಪಳ



ಕೃಪೆ: ಪಿ. ಮಹಮ್ಮದ್, ವಾರ್ತಾ ಭಾರತಿ

ಅನಕ್ಷರಸ್ಥರು ಮತ್ತು ಪಂಕ್ಚರ್ ಹಾಕುವವರಿಂದ ಆರ್ಥಿಕತೆಯ ಬೆಳವಣಿಗೆ ನಡೆಯುತ್ತಿಲ್ಲ ಎಂದು ಕರ್ನಾಟಕದ ಓರ್ವ ಚುನಾಯಿತ ಸಂಸದ ಹೇಳಿದರೆ ಪ್ರಧಾನ ಮಂತ್ರಿ ಉದ್ಯಮಪತಿಗಳನ್ನು 'ವೆಲ್ಥ್ ಕ್ರಿಯೇಟರ್ಸ್' (ಸಂಪತ್ತಿನ ಉತ್ಪಾದಕರು) ಎಂದು ಘೋಷಿಸಿದ್ದಾರೆ. ಇದನ್ನು ಅನುಮೋದಿಸುವ ರೀತಿಯಲ್ಲಿ ವಿತ್ತ ಮಂತ್ರಿ ವೆಲ್ಥ್ ಕ್ರಿಯೆಟರ್ಸ್‌ಗಳನ್ನು ಅನುಮಾನದಿಂದ ನೋಡಬಾರದು ಎಂದು ಕರೆ ನೀಡಿದ್ದಾರೆ. ಸರ್ವೋಚ್ಛ ನ್ಯಾಯಾಲಯದ ನಿವೃತ್ತ ನ್ಯಾಯಾಧೀಶ ಎಂ. ರಾಮ ಜೋಯಿಸ್ ಅವರು ತಮ್ಮ ಒಂದು ಉಪನ್ಯಾಸದಲ್ಲಿ 'ಹಕ್ಕುಗಳು ನಮ್ಮ ಪರಂಪರೆಯಲ್ಲ, ಸೇವೆ ಮಾಡುವುದು ನಮ್ಮ ಹಕ್ಕು ಎಂಬುದು ನಮ್ಮ ಪರಂಪರೆ' ಎಂದು ಪ್ರತಿಪಾದಿಸಿದ್ದಾರೆ. ಇವೆಲ್ಲ ಏನನ್ನು ಸೂಚಿಸುತ್ತವೆ? ನಮಗೆ ಅರ್ಥಶಾಸ್ತ್ರದಲ್ಲಿ ಶ್ರಮಶಕ್ತಿಯು ಉತ್ಪಾದನಾ ಮೌಲ್ಯದ ಮೂಲ ಎಂದು ಹೇಳಿಕೊಡಲಾಗಿದೆ. ಈ ಸಾರ್ವತ್ರಿಕ ಸತ್ಯವನ್ನು ತಲೆಕೆಳಗು ಮಾಡುವ ಕಾರ್ಯದಲ್ಲಿ ಪುರೋಹಿತ ಶಕ್ತಿ ನಿರತವಾಗಿದೆ.

ಅತಿಥಿ ಅಂಕಣ



ಪ್ರೊ. ಟಿ.ಆರ್. ಚಂದ್ರಶೇಖರ

ದುಡಿಮೆಯನ್ನು ತಿರಸ್ಕರಿಸುವ ಆರ್ಥಿಕ ನೀತಿ

ಭಾರತೀಯ ವೈದಿಕ ಪರಂಪರೆಯಲ್ಲಿ ದುಡಿಮೆಯು ಅಪವಿತ್ರ–ಮೈಲಿಗೆಯ ಸಂಗತಿ. ನಮ್ಮ ಪುರಾಣಗಳಲ್ಲಿ, ಪರಂಪರೆಯಲ್ಲಿ ದುಡಿಮೆಯನ್ನು ಪ್ರತಿನಿಧಿಸುವ–ಸಂಕೇತಿಸುವ ಅಥವಾ ಆದರ್ಶವಾಗಿ ಅನುಸರಿಸುವ ಒಂದೇ ಒಂದು ಪಾತ್ರ–ವ್ಯಕ್ತಿ ದೊರೆಯುವುದಿಲ್ಲ. ಅಲ್ಲಿ ನಮಗೆ ರಾಜ–ರಾಣಿಯರು, ಸಾಧು–ಸಂತರು, ಮಂತ್ರಿಗಳು, ದೇವತೆಗಳು, ಪುರೋಹಿತರು, ಗುರುಗಳು ದೊರೆಯುತ್ತಾರೆ. ಇಂದು ಇಂತಹ ಪರಂಪರೆಯನ್ನು ಮುಂದುವರಿಸುವ ಪ್ರಕ್ರಿಯೆಯು ರಾಜಾರೋಷವಾಗಿ ಮುಂದುವರಿದಿದೆ. ಅನಕ್ಷರಸ್ಥರು ಮತ್ತು ಪಂಕ್ಚರ್ ಹಾಕುವವರಿಂದ ಆರ್ಥಿಕತೆಯ ಬೆಳವಣಿಗೆ ನಡೆಯುತ್ತಿಲ್ಲ ಎಂದು ಕರ್ನಾಟಕದ ಓರ್ವ ಚುನಾಯಿತ ಸಂಸದ ಹೇಳಿದರೆ ಪ್ರಧಾನ ಮಂತ್ರಿ ಉದ್ಯಮಪತಿಗಳನ್ನು 'ವೆಲ್ಥ್ ಕ್ರಿಯೇಟರ್ಸ್' (ಸಂಪತ್ತಿನ ಉತ್ಪಾದಕರು) ಎಂದು ಘೋಷಿಸಿದ್ದಾರೆ. ಇದನ್ನು ಅನುಮೋದಿಸುವ ರೀತಿಯಲ್ಲಿ ವಿತ್ತ ಮಂತ್ರಿ ವೆಲ್ಥ್ ಕ್ರಿಯೆಟರ್ಸ್‌ಗಳನ್ನು ಅನುಮಾನದಿಂದ ನೋಡಬಾರದು ಎಂದು ಕರೆ ನೀಡಿದ್ದಾರೆ (ಎಂದೇ ಅವರಿಗೆ ರೂ. 1.45 ಲಕ್ಷ ಕೋಟಿ ತೆರಿಗೆ ಮನ್ನಾ ಮಾಡಲಾಗಿದೆ). ಇಂದು ಆಳುವ ವರ್ಗವು ಉದ್ದಿಮೆದಾರರ ವೈಭವೀಕರಣದಲ್ಲಿ ನಿರತವಾಗಿದೆ. ಕಳೆದ ನವೆಂಬರ್ 26 ರಂದು ಸಂವಿಧಾನದ ದಿನಾಚರಣೆಯಂದು ರಾಷ್ಟ್ರಪತಿ, ಉಪರಾಷ್ಟ್ರಪತಿ ಪ್ರಧಾನಮಂತ್ರಿ ಮತ್ತು ಅವರ ಸಚಿವಸಂಪುಟದ ಸದಸ್ಯರು ಹಕ್ಕುಗಳಿಗೆ ಪ್ರಾಮುಖ್ಯತೆಯನ್ನು ನೀಡುವುದಕ್ಕೆ ಪ್ರತಿಯಾಗಿ ಇನ್ನು ಮುಂದೆ 'ಸೇವೆ'ಗೆ ಆದ್ಯತೆ ನೀಡಬೇಕು ಎಂದು ದೇಶಕ್ಕೆ ಕರೆ ನೀಡಿದ್ದಾರೆ. ಸರ್ವೋಚ್ಚ ನ್ಯಾಯಾಲಯದ ನಿವೃತ್ತ ನ್ಯಾಯಾಧೀಶ ಎಂ. ರಾಮ ಜೋಯಿಸ್ ಅವರು ತಮ್ಮ ಒಂದು ಉಪನ್ಯಾಸದಲ್ಲಿ 'ಹಕ್ಕುಗಳು ನಮ್ಮ ಪರಂಪರೆಯಲ್ಲ, ಸೇವೆ ಮಾಡುವುದು ನಮ್ಮ ಹಕ್ಕು ಎಂಬುದು ನಮ್ಮ ಪರಂಪರೆ ಎಂದು ಪ್ರತಿಪಾದಿಸಿದ್ದಾರೆ. ಮುಂದುವರಿದು ಅವರು ನಮ್ಮ ಸಂವಿಧಾನದ ಭಾಗ 3 ರಲ್ಲಿ ಮೂಲಭೂತ ಹಕ್ಕುಗಳನ್ನು ಸೇರಿಸಿರುವುದರಿಂದ ಇಂದು ನಾವು ಅನೇಕ ಸಮಸ್ಯೆಗಳನ್ನು ಎದುರಿಸುತ್ತಿದ್ದೇವೆ ಎಂದೂ ಹೇಳಿದ್ದಾರೆ.

ಇವೆಲ್ಲ ಏನನ್ನು ಸೂಚಿಸುತ್ತವೆ? ನಮ್ಮ ದೇಶದಲ್ಲಿ 2011ರ ಜನಗಣತಿ ಪ್ರಕಾರ ಅನಕ್ಷರಸ್ಥರ ಸಂಖ್ಯೆ 28.28 ಕೋಟಿ. ದೇಶದ ಒಟ್ಟು ದುಡಿಮೆಗಾರರಲ್ಲಿ(48.19 ಕೋಟಿ) ಇವರ ಪ್ರಮಾಣ ಶೇ. 58.68 ರಷ್ಟಾಗುತ್ತದೆ. ದೇಶದ ಒಟ್ಟು ದುಡಿಮೆಗಾರರಲ್ಲಿ ಅರ್ಧದಷ್ಟು ಅನಕ್ಷರಸ್ಥರಿದ್ದಾರೆ. ಇವರು ದುಡಿಯದಿದ್ದರೆ ದೇಶದಲ್ಲಿ ಮತ್ತಾರು ದುಡಿಯುತ್ತಾರೆ? ದೇಶದ ಒಟ್ಟು ದುಡಿಮೆಗಾರರಲ್ಲಿ ಭೂರಹಿತ ದಿನಗೂಲಿ ದುಡಿಮೆಗಾರರ ಸಂಖ್ಯೆ 14.42 ಕೋಟಿ. ಒಟ್ಟು ದುಡಿಮೆಗಾರರಲ್ಲಿ ಇವರ ಪ್ರಮಾಣ ಶೇ. 30 ರಷ್ಟಿದೆ. ಇವರೆಲ್ಲ ಬೆವರು, ಕಣ್ಣೀರು, ರಕ್ತ ಹರಿಸಿ ದುಡಿಯದಿದ್ದರೆ ಈ ದೇಶದ ಎಕ್ಸ್‌ಪ್ರೆಸ್ ಹೈವೇಗಳು, ನೀರಾವರಿ ಯೋಜನೆಗಳು, ಗಗನಚುಂಬಿ ಕಟ್ಟಡಗಳು, ರೈಲು ಮಾರ್ಗಗಳನ್ನು, ಒಎಫ್‌ಸಿ ಲೈನುಗಳು, ವಿಧಾನಸಭೆ–ವಿಕಾಸ ಸೌಧ ಕಟ್ಟಡಗಳು ಹೇಗೆ ನಿರ್ಮಾಣವಾದವು? ಈ ಸಂಸದರು, ಮಂತ್ರಿ–ಮಹೋದಯರು ನಿರ್ಮಿಸಿದರೇನು? ದೇಶದ ಶ್ರಮಶಕ್ತಿಗೆ ಅವಮಾನವಾಗುವ ರೀತಿಯಲ್ಲಿ ಇಂದು ಉದ್ಯಮಪತಿಗಳನ್ನು ವೆಲ್ಥ್ ಕ್ರಿಯೇಟರ್ಸ್ ಎಂದು ಕರೆಯಲಾಗುತ್ತಿದೆ. ನಮಗೆ ಅರ್ಥಶಾಸ್ತ್ರದಲ್ಲಿ ಶ್ರಮಶಕ್ತಿಯು ಉತ್ಪಾದನಾ ಮೌಲ್ಯದ ಮೂಲ ಎಂದು ಹೇಳಿಕೊಡಲಾಗಿದೆ. ಈ ಸಾರ್ವತ್ರಿಕ ಸತ್ಯವನ್ನು ತಲೆಕೆಳಗು ಮಾಡುವ ಕಾರ್ಯದಲ್ಲಿ ಪುರೋಹಿತ ಶಕ್ತಿ ನಿರತವಾಗಿದೆ.

ಇಂದು ನಮ್ಮ ಆರ್ಥಿಕತೆಯು ಕುಸಿತವನ್ನು ಅನುಭವಿಸುತ್ತಿದ್ದರೆ ಇದಕ್ಕೆ ಒಂದು ಕಾರಣವೆಂದರೆ ದೇಶದ ಶ್ರಮಶಕ್ತಿಯನ್ನು ಹತ್ತಿಕ್ಕುತ್ತಿರುವ ಕ್ರಮಗಳು. ದೇಶದ ಆರ್ಥಿಕ ಬೆಳವಣಿಗೆಯು 2019ರ ಎರಡನೆಯ ತ್ರೈಮಾಸಿಕದಲ್ಲಿ ಶೇ. 4.5 ರಷ್ಟಿದೆ. ಕಾರ್ಖಾನೆಯ ವಲಯದಲ್ಲಿ 2011–12 ರಿಂದ 2017–18ರ ಅವಧಿಯಲ್ಲಿ ಸರಿಸುಮಾರು 35 ಲಕ್ಷ ಕಾರ್ಮಿಕರು ಕೆಲಸ ಕಳೆದುಕೊಂಡಿದ್ದಾರೆ. ಗ್ರಾಮೀಣ ಉದ್ಯೋಗ ಕಾರ್ಯಕ್ರಮವಾದ ಮನರೇಗಾ ಅನುದಾನವನ್ನು 2019–20ರ ಬಜೆಟ್ಟಿನಲ್ಲಿ ಏರಿಕೆ ಮಾಡಿಲ್ಲ. ಈ ಆರ್ಥಿಕ ಕುಸಿತವನ್ನು ಮತ್ತು ಹಿಂಜರಿತವನ್ನು ಸರಿಪಡಿಸುವ ಕ್ರಮಗಳನ್ನು ಸರ್ಕಾರವು ಯೋಚಿಸುತ್ತಿಲ್ಲ. ಇವೆಲ್ಲದರ ಜೊತೆಯಲ್ಲಿ ಕೇಂದ್ರ ಸರ್ಕಾರವು ಉದ್ಯಮ–ಸ್ನೇಹಿ ಕಾರ್ಮಿಕ ನೀತಿಗಳನ್ನು ಜಾರಿಗೊಳಿಸುವಲ್ಲಿ ಕಾರ್ಯನಿರತವಾಗಿದೆ.

ಈ ಎಲ್ಲ ಬೆಳವಣಿಗೆಗಳು ದೇಶದ ಶ್ರಮಶಕ್ತಿಯ ಜಂಘಾಬಲವನ್ನು ಹತ್ತಿಕ್ಕುವ ಮತ್ತು ಮೂರಾಬಟ್ಟೆ ಮಾಡುವ ದಿಶೆಯಲ್ಲಿ ಕ್ರಿಯಾಶೀಲವಾಗಿವೆ. ನಮ್ಮ ಸಮಾಜದ ಸಂದರ್ಭದಲ್ಲಿ ದುಡಿಯುವ ವರ್ಗ ಎಂದರೆ ಯಾರು? ಈ ವರ್ಗದಲ್ಲಿ ಬರುವವರು ಶೂದ್ರರು, ದಲಿತರು, ಆದಿವಾಸಿಗಳು ಮತ್ತು ಅಲ್ಪಸಂಖ್ಯಾತರು. ಈ ಶ್ರಮಶಕ್ತಿಯನ್ನು ಧರ್ಮದ ಹೆಸರಿನಲ್ಲಿ ವೈದಿಕ ವರ್ಗವು ಶೋಷಣೆ ಮಾಡುತ್ತಾ ಬಂದಿದೆ. ಈ ಶ್ರಮಶಕ್ತಿಯಲ್ಲಿರುವ ಕೆಲವರು ಭ್ರಮೆಗೆ ಒಳಗಾಗಿ ಪುರೋಹಿತಶಾಹಿಯೊಂದಿಗೆ ಶಾಮೀಲಾಗಿದ್ದಾರೆ. ದುಡಿಮೆಯನ್ನು ಹೀಯಾಳಿಸುವುದು ವೈದಿಕದ ಒಂದು ಕುತಂತ್ರವಾಗಿದೆ. ಶ್ರಮಶಕ್ತಿಯು ಯಾವತ್ತೂ ಎಡಪಂಥೀಯವಾಗಿದೆ. ಇದನ್ನು ಆಳುವ ವರ್ಗವು ತೀವ್ರವಾಗಿ ವಿರೋಧಿಸುತ್ತಿದೆ. ಶೂದ್ರ–ದಲಿತ–ಆದಿವಾಸಿ ಮತ್ತು ಅಲ್ಪಸಂಖ್ಯಾತ ವರ್ಗವನ್ನು ಹತ್ತಿಕ್ಕಲು ವೈದಿಕತೆಯು ಹೊಸ ಹೊಸ ಸೂತ್ರಗಳನ್ನು ಬಳಸುತ್ತಿದೆ. ಡಾ. ಬಿ. ಆರ್. ಅಂಬೇಡ್ಕರ್ ಪ್ರಣೀತ ಸಂವಿಧಾನದಲ್ಲಿ ಸಮಾನತೆಗೆ ಆತ್ಯಂತಿಕ ಸ್ಥಾನ ನೀಡಲಾಗಿದೆ. ಇದನ್ನು ದೇಶದ ಶ್ರಮಶಕ್ತಿಯು ಕಾವಲು ಕಾಯುತ್ತಿದೆ. ಸಮಾನತೆ ಮೌಲ್ಯಕ್ಕೆ ವಿರೋಧಿಯಾದ ವೈದಿಕತೆಯು ದುಡಿಯುವ ವರ್ಗದ ಪ್ರಣಾಳಿಕೆಯಾದ ಸಂವಿಧಾನವನ್ನು ಬದಲಾಯಿಸುವ ಪಣ ತೊಟ್ಟಿದೆ. ಕೂಲಿಯನ್ನು ತಳಮಟ್ಟದಲ್ಲಿಟ್ಟುಕೊಳ್ಳುವ ಮೂಲಕ ದುಡಿಯುವ ವರ್ಗದ ಬದುಕನ್ನು ನಾಶ ಮಾಡುತ್ತಿದೆ.

ದುಡಿಯುವ ವರ್ಗದ ಆಹಾರವನ್ನು(ಮಾಂಸಾಹಾರ–ಸಸ್ಯಾಹಾರ: ಈರುಳ್ಳಿ ತಿನ್ನುವುದಿಲ್ಲ) ಹೀಯಾಳಿಸಲಾಗುತ್ತಿದೆ. ಇವರ ಉಡುಪನ್ನು(ಉಡುಪಿನ ಮೇಲೆ ಶತ್ರುಗಳಾರೆಂದು ಗುರುತಿಸಬಹುದೆಂಬ ಮಾತು) ಅಣಕವಾಡಲಾಗುತ್ತಿದೆ. ಇವರ ಉದ್ಯೋಗಗಳನ್ನು ಕಿತ್ತುಕೊಳ್ಳಲಾಗುತ್ತಿದೆ. ದಲಿತರ ಮೇಲೆ ಅವ್ಯಾಹತವಾಗಿ ದೌರ್ಜನ್ಯ ನಡೆಯುತ್ತಿದೆ. ಆಳುವ ವರ್ಗದ ದುಡಿಮೆಯ ಹೀಯಾಳಿಕೆಯು ಎಲ್ಲಿಯವರೆಗೆ ಹೋಗಿದೆಯೆಂದರೆ 'ದಲಿತ' ಎಂಬ ನುಡಿಯನ್ನು ಬಳಸುವುದನ್ನು ನಿಷೇಧಿಸುವ ಬಗ್ಗೆ ಅದು ಯೋಚಿಸುತ್ತಿದೆ. ಏಕೆಂದರೆ ದಲಿತ ಎಂಬ ನುಡಿಯು ವೈದಿಕತೆಯ ಸಾವಿರಾರು ವರ್ಷಗಳಿಂದ ನಡೆಸಿಕೊಂಡು ಬರುತ್ತಿರುವ ಶೋಷಣೆಯ ಪರಂಪರೆಯನ್ನು ಬಯಲು ಮಾಡುತ್ತದೆ.

ನಮ್ಮ ದೇಶದ ಕ್ರಾಂತಿಕಾರಿ ಹೋರಾಟದ ಮೂಲವಾಗಿರುವ ಕಾರ್ಮಿಕಶಕ್ತಿಯ ನಡುವನ್ನು ಮುರಿಯಲು 'ಹಕ್ಕು' ಎಂಬುದು ನಮ್ಮ ಪರಂಪರೆಯಲ್ಲವೆಂದು ಹೇಳುತ್ತಾ ವೈದಿಕ ಮೌಲ್ಯವಾದ ಸೇವೆಯನ್ನು ಆದ್ಯತೆಯನ್ನಾಗಿ ಮಾಡುವ ಅಸ್ತ್ರವನ್ನು ಅದು ಚಲಾಯಿಸುತ್ತಿದೆ. ಕಾರ್ಮಿಕ ಶಕ್ತಿಯ ಜೀವಾಳ ಹಕ್ಕನ್ನು ಒತ್ತಾಯಿಸುವುದು. ನಮ್ಮ ದೇಶದಲ್ಲಿ ಮಾನವ ಹಕ್ಕುಗಳ ಉಲ್ಲಂಘನೆಗೆ ತುತ್ತಾಗುವವರು ಶೂದ್ರರು, ದಲಿತರು, ಆದಿವಾಸಿಗಳು ಮತ್ತು ಅಲ್ಪಸಂಖ್ಯಾತರು. ಈ ಜನಸ್ತೋಮವನ್ನು ಹತ್ತಿಕ್ಕುವ ಕಾರ್ಯಯೋಜನೆಯಲ್ಲಿ ನಿರತವಾಗಿರುವ ಆಳುವ ವರ್ಗವು 'ದುಡಿಯುವುದಷ್ಟೇ ಕಾರ್ಮಿಕರ ಹಕ್ಕು' ಎಂಬ ಪ್ರಣಾಳಿಕೆಯನ್ನು ಪ್ರತಿಪಾದಿಸುತ್ತಿದೆ. 'ಫಲ'ವನ್ನು ಕೇಳುವುದು ಹಕ್ಕಲ್ಲ ಎಂಬ ಸಂಹಿತೆಯನ್ನು ಆಳುವ ವರ್ಗವು ಪ್ರಚುರಪಡಿಸುತ್ತಿದೆ. 'ಒಡೆದು ಆಳುವ ನೀತಿ'ಗೆ ಬ್ರಿಟಿಷರ ವಸಾಹತುಶಾಹಿಯು ಮೂಲ ಎಂದು ಹೇಳಲಾಗುತ್ತಿದೆ. ವೈದಿಕತೆಯ ಚರಿತ್ರೆಯ ಅರಿವಿಲ್ಲದವರು ಮಾತ್ರ ಇದನ್ನು ನಂಬಬಹುದು. ಒಡೆದು ಆಳುವ ನೀತಿಯ ಮೂಲ ವೈದಿಕತೆ ಎನ್ನುವುದುನ್ನು ನಾವು ಗುರುತಿಸಬೇಕಾಗಿದೆ. 'ದ್ವಿಜರು–ಅದ್ವಿಜರು', 'ಸವರ್ಣೀಯರು–ಅವರ್ಣೀಯರು', 'ಸ್ಪಶ್ಯರು–ಅಸ್ಪೃಸ್ಯರು', 'ದುಡಿಯುವವರು–ಪುರೋಹಿತರು' ಮುಂತಾದ ಅಸಮಾನತೆಯನ್ನು ಹುಟ್ಟು ಹಾಕಿದ್ದು ವೈದಿಕ ಸಂಹಿತೆ. ಇದಕ್ಕಿಂತ ಒಡೆದು ಆಳುವ ನೀತಿ ಮತ್ತೊಂದಿರಲು ಸಾಧ್ಯವೇ?

ಇಂದು ನಡೆಯುತ್ತಿರುವ ಸಿಎಎ, ಎನ್‌ಆರ್‌ಪಿ, ಎನ್‌ಪಿಎಸ್ ಕಾರ್ಯಯೋಜನೆಯೂ ಕೂಡ ವೈದಿಕತೆಯ ಪ್ರತಿಷ್ಠಾಪನೆಯ ಕ್ರಮವಾಗಿದೆ. ಶ್ರಮಶಕ್ತಿಯನ್ನು ಹತ್ತಿಕ್ಕುವ ನೀತಿಗಳು, ಪೌರತ್ವದ ವಿವಾದ, ಹಕ್ಕುಗಳನ್ನು ತಿರಸ್ಕರಿಸುವ ಕ್ರಮಗಳು– ಇವೆಲ್ಲವೂ ನಮ್ಮ ಸಂವಿಧಾನ ಮತ್ತು ಪ್ರಜಾಪ್ರಭುತ್ವ ವಿರೋಧಿ ಕ್ರಮಗಳಾಗಿವೆ. ಈ ದುಷ್ಟಶಕ್ತಿಗಳ ವಿರುದ್ಧ ಹೋರಾಟದ ನೆಲೆಗಳ ಬಗ್ಗೆ ನಾವು ಚಿಂತಿಸಬೇಕಾಗಿದೆ. ●

ಸಾರಿಗೆ ನಿಗಮಗಳ ನೌಕರರನ್ನು ಸರ್ಕಾರಿ ನೌಕರರೆಂದು ಪರಿಗಣಿಸಿ: ಸಾರಿಗೆ ನಿಗಮಗಳ ನೌಕರರ ಒತ್ತಾಯ

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಎಲ್ಲಾ ಕಾರ್ಮಿಕರನ್ನು ಸರ್ಕಾರಿ ನೌಕರರು ಎಂದು ಪರಿಗಣಿಸಬೇಕು ಎಂದು ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನೌಕರರ ಸಂಘದ ರಾಜ್ಯ ಉಪಾಧ್ಯಕ್ಷ ಡಾ. ಕೆ.ಪ್ರಕಾಶ್ ಒತ್ತಾಯಿಸಿದರು.

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನೌಕರರ ಸಂಘ ಹಾಸನ ನಗರದ ಕನ್ನಡ ಸಾಹಿತ್ಯ ಭವನದಲ್ಲಿ ಆಯೋಜಿಸಿದ್ದ ಸಾರಿಗೆ ಕಾರ್ಮಿಕರ ಹಾಸನ ವಿಭಾಗದ ಸಮಾವೇಶ ಉದ್ಘಾಟಿಸಿ ಮಾತನಾಡಿದ ಪ್ರಕಾಶ್, ಕೋಟ್ಯಂತರ ಪ್ರಯಾಣಿಕರಿಗೆ ಉತ್ತಮ ಸಾರಿಗೆ ಸೌಲಭ್ಯ ಒದಗಿಸಲು ನಿರ್ವಾಹಕರು, ಚಾಲಕರು, ಚಾಲಕರು ಕಮ್ ನಿರ್ವಾಹರು, ತಾಂತ್ರಿಕ, ಭದ್ರತಾ ಮತ್ತು ಆಡಳಿತ ಸಿಬ್ಬಂದಿ ಹಗಲು ರಾತ್ರಿ ದುಡಿಯುತ್ತಿದ್ದಾರೆ. ಆದರೆ ಸಾರಿಗೆ ನಿಗಮಗಳು ಸರ್ಕಾರಿ ಒಡೆತನದಲ್ಲಿ ಇದ್ದರೂ ಕಾನೂನು ಅಡಿಯಲ್ಲಿ ಆಡಳಿತ ನಡೆಸದೆ ಮನಸೋ ಇಚ್ಛೆ ಆಡಳಿತ ನಡೆಸಲಾಗುತ್ತಿದೆ. ಇದರಿಂದ ಸಾರಿಗೆ ಕಾರ್ಮಿಕರು ಇತ್ತೀಚಿನ 25 ವರ್ಷಗಳಿಂದ ಸರ್ಕಾರ ಮತ್ತು ಆಡಳಿತ ಮಂಡಳಿ ಅನುಸರಿಸುತ್ತಿರುವ ಕಾರ್ಮಿಕ ವಿರೋಧಿ ಧೋರಣೆಯಿಂದ ತೀವ್ರವಾದ ದೌರ್ಜನ್ಯ ಕಿರುಕುಳವನ್ನು ಅನುಭವಿಸುತ್ತಿದ್ದಾರೆ. ಆಡಳಿತ ವರ್ಗದ ತೀವ್ರ ಕಿರುಕುಳದಿಂದ ನೊಂದವರು ಆತ್ಮಹತ್ಯೆಗೆ ಶರಣಾಗುತ್ತಿದ್ದಾರೆ. ಇದಕ್ಕೆಲ್ಲಾ ಕಾರ್ಮಿಕರ ಸಮಸ್ಯೆಗಳೊಂದಿಗೆ ಚರ್ಚಿಸಿ ಬಗೆಹರಿಸುವ ಪ್ರಜಾಸತ್ತಾತ್ಮಕ ವ್ಯವಸ್ಥೆಗೆ ತಿಲಾಂಜಲಿ ನೀಡಿದ್ದೇ ಕಾರಣ ಎಂದರು.

ಕಾನೂನು ಪ್ರಕಾರ ದಿನವೊಂದಕ್ಕೆ 8 ರಿಂದ 9 ಅಥವಾ ವಾರಕ್ಕೆ 48 ರಿಂದ 54 ಗಂಟೆಗಳಿಗೂ ಅಧಿಕವಾಗಿ ದುಡಿಸಬಾರದು. ಆದರೆ ಬಾರ್ ಡ್ಯೂಟಿ ಹೆಸರಿನಲ್ಲಿ 2 ದಿನಕ್ಕೆ 36 ಗಂಟೆಗಳಿಗೂ ಅಧಿಕವಾಗಿ ದುಡಿಸಿಕೊಳ್ಳಲಾಗುತ್ತಿದೆ. ಫಾರಂ ನಂ.4 ಅನ್ನು ತಯಾರಿಸಲು ಇದ್ದ ನಿಯಮಗಳನ್ನು ಗಾಳಿಗೆ ತೂರಲಾಗಿದೆ. ಕಿಮೀ ಹೆಚ್ಚಳದಿಂದಾಗಿ ಕೆಲಸದ ಒತ್ತಡ ಹೆಚ್ಚಾಗಿದೆ. ಮಾತ್ರವಲ್ಲದೆ ಷೆಡ್ಯೂಲ್ ಓಟಿಯನ್ನು ಕಡಿತಗೊಳಿಸಲಾಗಿದೆ. ಇವೆಲ್ಲವೂ ಕಾನೂನಿನ ಸ್ಪಷ್ಟ ಉಲ್ಲಂಘನೆಯಾಗಿದೆ ಎಂದು ಹೇಳಿದರು.

ಪ್ರಾಸ್ತಾವಿಕವಾಗಿ ಮಾತನಾಡಿದ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ ನೌಕರರ ಸಂಘದ ರಾಜ್ಯ ಪ್ರಧಾನ ಕಾರ್ಯದರ್ಶಿ ಎಚ್.ಎಸ್.ಮಂಜುನಾಥ್, ಸಾರಿಗೆ ನಿಗಮಗಳ ನೌಕರರು 2008ರಲ್ಲಿ ಸಂಘಟನೆ ಆರಂಭವಾದಾಗ ಭಯಭೀತ ವಾತಾವರಣದಲ್ಲಿದ್ದಾರೆ. ಬಿಎಂಟಿಸಿ ಸೇರಿದಂತೆ ನಾಲ್ಕು ನಿಗಮಗಳಲ್ಲೆ 1.35 ಲಕ್ಷ ನೌಕರರು ಕಾರ್ಯನಿರ್ವಹಿಸುತ್ತಿದ್ದು, ಇವರಿಗೆ ಯಾವ ಕಾನೂನುಗಳಿಲ್ಲ. ಪ್ರತಿಯೊಂದು ಕೇವಲ ಸುತ್ತೋಲೆ ಮೂಲಕವೇ ಆಡಳಿತ ನಡೆಸಲಾಗುತ್ತಿದೆ. ಹಾಗಾಗಿಯೇ ಕಳೆದ 20 ವರ್ಷಗಳಲ್ಲಿ ಕೇವಲ ಶೇ.37ರಷ್ಟು ವೇತನ ಹೆಚ್ಚಳವಾಗಿದೆ.

ಇದು ಅತಿ ಕಡಿಮೆ ವೇತನ ಪರಿಷ್ಕರಣೆಯಾಗಿದೆ.



ಸುತ್ತೋಲೆಗಳು ಕಾನೂನು ಬದ್ಧವಲ್ಲ. ಹಾಗಾಗಿ ಸಾರಿಗೆ ನಿಗಮಗಳ ನೌಕರರಿಗೆ ಕೈಗಾರಿಕಾ ವಿವಾದ ಕಾಯ್ದೆಯನ್ನುಜಾರಿಗೊಳಿಸುವ ಮೂಲಕ ಕಾರ್ಮಿಕರು ಮತ್ತು ಆಡಳಿತ ಮಂಡಳಿಗಳ ನಡುವಿನ ಎಲ್ಲಾ ಒಪ್ಪಂದಗಳು ಕೈಗಾರಿಕಾ ವಿವಾದ ಕಾಯ್ದೆಯನ್ವಯ ಏರ್ಪಡಬೇಕು ಎಂದು ಒತ್ತಾಯಿಸಿದರು.

ಸಿಐಟಿಯು ಜಿಲ್ಲಾಧ್ಯಕ್ಷ ಧರ್ಮೇಶ್, ಸಂಘದ ರಾಜ್ಯ ಅಧ್ಯಕ್ಷ ಗುರುಪ್ಪ, ಎಸ್‌ಸಿ, ಎಟಿ ನೌಕರರ ಸಂಘದ ಚಂದ್ರಣ್ಣ ಮತ್ತಿತರರು ಮಾತನಾಡಿದರು.

ಪದಾಧಿಕಾರಿಗಳ ಆಯ್ಕೆ

ಸಮಾವೇಶದಲ್ಲಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ ನೌಕರರ ಸಂಘದ ಹಾಸನ ವಿಭಾಗದ ಪದಾಧಿಕಾರಿಗಳನ್ನು ಅವಿರೋಧವಾಗಿ ಆಯ್ಕೆ ಮಾಡಲಾಯಿತು.

ಗೌರವಾಧ್ಯಕ್ಷರಾಗಿ ಧರ್ಮೇಶ್, ಅಧ್ಯಕ್ಷರಾಗಿ ಸಿ.ಎಸ್.ರಂಗಸ್ವಾಮಿ, ಉಪಾಧ್ಯಕ್ಷರಾಗಿ ಬಿ.ಎಂ. ಸುರೇಶ್, ವೀರಪ್ಪ, ಸುಯೀಲ್ ಪಾಷಾ,

ಪುಟ 10 ಕ್ಕೆ

ಮಾನಸಿಕ ಕಿರುಕುಳದಿಂದ ಸಾವನ್ನಪ್ಪಿದ ಜಾಲಿಂದರನಾಥ

ಕೋಗನೂರ ಗ್ರಾಮ ಪಂಚಾಯತಿ ಎದುರು ಪ್ರತಿಭಟನೆ



ಕಲಬುರಗಿ ಜಿಲ್ಲೆ ಅಫಜಲಪುರ ತಾಲೂಕಿನ ಕೋಗನೂರ ಗ್ರಾಮ ಪಂಚಾಯತಿ ಕರ್ಕ್ಲ ಕಂ ಡಾಟಾ ಎಂಟ್ರಿ ಆಪರೇಟರ ಕೆಲಸ ಮಾಡುತ್ತಿದ್ದ ಜಾಲಂದರನಾಥ ರವರಿಗೆ ಪಿಡಿಓ ಸಿದ್ದರಾಮ ಬಬಲೇಶ್ವರ ರವರು ಮಾನಸಿಕ ಕಿರುಕುಳ ನಿರಂತರವಾಗಿತ್ತು. ಈ ಕಿರುಕುಳದಿಂದ ಬೇಸತ್ತು ಜಾಲಿಂದರನಾಥ ಸಾವನ್ನಪ್ಪಿದರು. ಈ ಅನ್ಯಾಯದ ವಿರುದ್ಧ ಕರ್ನಾಟಕ ರಾಜ್ಯ ಪಂಚಾಯತ ನೌಕರರ ಸಂಘ ಸಿ.ಐ.ಟಿ.ಯು ಸಂಯೋಜಿತ ರಾಜ್ಯ ಸಮಿತಿಯ ಪರವಾಗಿ ಶಿವಾನಂದ ಕವಲಗಾ ಬಿ. ಸುರೇಶ್, ಎಸ್. ಕಟ್ಟಿಮನಿ ಮತ್ತು ಕಲಬುರಗಿ ಜಿಲ್ಲೆಯ ಎಲ್ಲಾ ತಾಲೂಕು, ಜಿಲ್ಲಾ ಮುಖಂಡರು ಹಾಗೂ ಕೋಲಿ ಸಮಾಜದ ಮುಖಂಡರಾದ ಅವ್ವಣ್ಣ ಮ್ಯಾಕೇರಿ, ಪ್ರಕಾಶ ಜಮಾದಾರ, ಸಿದ್ಧಾರ್ಥ ಬಸರಿಗಿಡ, ದಿಗಂಬರ ಕಾಡಹುಲಿ, ಶಂಕು ಮ್ಯಾಕೇರಿ ಇತರ ಮುಖಂಡರು ಹೋರಾಟಕ್ಕೆ ಬೆನ್ನೆಲುಬಾಗಿ ನಿಂತು ಕೋಗನೂರ ಗ್ರಾಮದ ಎಲ್ಲಾ ಸಣ್ಣ ದೊಡ್ಡವರು ಇಡೀ ಗ್ರಾಮವೇ ಈ ಪ್ರತಿಭಟನೆಯಲ್ಲಿ ಬಾಗಿಯಾಗಿ ಮರಣ ಹೊಂದಿದ ನೌಕರನಿಗೆ ನ್ಯಾಯ್ಯ ಸಿಗುವವರೆಗೂ ಭಾಗವಹಿಸಿದರು.

08 ಜನವರಿ 2020 ರಂದು ಕಲಬುರಗಿ ಜಿಲ್ಲೆಯ ಅಫಜಲಪುರ ತಾಲ್ಲೂಕಿನ ಕೋಗನೂರ ಗ್ರಾಮ ಪಂಚಾಯತಿ ಯ ಕ್ಲರ್ಕ್ ಕಂ ಕಂಪ್ಯೂಟರ್ ಆಪರೇಟರ ಆಗಿದ್ದ ಜಾಲಿಂದರನಾಥ ಜಮಾದಾರ ಕೆಲಸ ನಿರ್ವಹಿಸುತ್ತಿರುವ ಪಂಚಾಯತ ನಲ್ಲಿಯೇ ಅವರ ಪಂಚಾಯತ ಅಭಿವೃದ್ಧಿ ಅಧಾಕಾರಿಗಳಾದ ಸಿದ್ದರಾಮ ಬಬಲೇಶ್ವರ ರವರು ಕಿರುಕುಳ ನೀಡಿದ ಕಾರಣಕ್ಕಾಗಿ ಮನನೊಂದು ಸಾವನ್ನಪ್ಪಿದ ಕಾರಣಕ್ಕಾಗಿ ರಾತ್ರಿ ವರೆಗೂ ಗ್ರಾಮ ಪಂಚಾಯತಿ ಕಛೇರಿ ಮುಂದೆ ಶವ ಇಟ್ಟು ಹೋರಾಟ ಮಾಡಿದ ಪ್ರಯುಕ್ತ ಕಲಬುರಗಿ ಜಿಲ್ಲಾ ಪಂಚಾಯತ ಮಾನ್ಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಾದ ಡಾ: ಪಿ. ರಾಜಾ ರವರು ಕೋಗನೂರ ಗ್ರಾಮ ಪಂಚಾಯತಿ ಗೆ ರಾತ್ರಿ 09–00 ಗಂಟೆಗೆ ಆಗಮಿಸಿ ನಮ್ಮ ಮನವಿಗೆ ಸ್ಪಂದಿಸಿ ಸ್ಥಳದಲ್ಲೇ ಪಂಚಾಯತ ಅಭಿವೃದ್ಧಿ ಅಧಿಕಾರಿಗಳನ್ನು ಅಮಾನತ್ತು ಮಾಡಿದರು. ಅವರಿಗೆ ಅಭಿನಂದನೆ ಸಲ್ಲಿಸಲಾಯಿತು. ಮತ್ತು ಇನ್ನಿತರ ಸೌಲಭ್ಯಗಳಾದ ಬಾಕಿ ಉಳಿದ ವೇತನ ಪಾವತಿಸಲು, ನೇಮಕಾತಿ ಮಾಡಿಕೊಳ್ಳಲು, ಕುಟುಂಬಕ್ಕೆ ಸಹಾಯ ಮಾಡಲು ಪರಿಹಾರ ಧನ ಅತೀ ಶೀಘ್ರದಲ್ಲಿ ಈಡೇರಿಸುವ ಭರವಸೆ ನೀಡಿದ್ದಾರೆ. ಆದರೆ ಕೆಲವು ಕಿಡಿಗೇಡಿಗಳು PDO ಕಿರುಕುಳ ಕೊಟ್ಟಿಲ್ಲ EO ಕೂಡ ಸಂಬಂಧ ಇಲ್ಲ ಎಂಬುದಾಗಿ ಮಾನವೀಯತೆ ಇಲ್ಲದವರು ಮಾತನಾಡುತ್ತಿದ್ದಾರೆ. ಮೃತ ಜಾಲಿಂದರನಾಥ ಜಮಾದಾರ ರವರು PDO ರವರು ಕಿರುಕುಳ ನೀಡುತ್ತಿರುವ ಬಗ್ಗೆ ದಿನಾಂಕ 26–09–2019 ರಂದು ಮಾನ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ತಾಲೂಕು ಪಂಚಾಯತ ಅಫಜಲಪುರ ರವರಿಗೆ ಲಿಖಿತ ರೂಪದಲ್ಲಿ ಬರೆದುಕೊಟ್ಟು ತಾಲೂಕು ಪಂಚಾಯತ ಆವಕದಲ್ಲಿ ಕೊಟ್ಟಾಗಿದೆ.ಇದಕ್ಕಿಂತ ಸಾಕ್ಷಿ ಬೇಕೆ?

ಹೋರಾಟದಲ್ಲಿ ಅಫಜಲಪುರ ತಾಲೂಕಿನ ಎಲ್ಲಾ ಮುಖಂಡರು, ಜಿಲ್ಲೆಯ ವಿವಿಧ ಗ್ರಾಮ ಪಂಚಾಯತಿ ಸದಸ್ಯರು, ಕೋಗನೂರ ಗ್ರಾಮಸ್ಥರು, ಸುರೇಶ ಕಟ್ಟಿಮನಿ, ಮಹಾಂತೇಶ ಸರಡಗಿ, ದೇವಿಂದ್ರ ಮಿಜಾಜಿ, ಶರಣು ಕವಲಗಾ, ಸಿದ್ದಲಿಂಗ ಹಾಗರಗುಂಡಗಿ, ನಾಗರಾಜ ನಂದಿಕೂರ, ಶಿವಲಿಂಗಪ್ಪಾ ಶಿಲವಂತ, ಸತೀಶಕುಮಾರ, ಬಶೀರ ಅಹ್ಮದ್, ಮಾಹಾಂತೇಶ, ಮಾಣಿಕ, ಜಗದೀಶ, ಸಂತೋಷ, ಮುನಾ ಗೌಡ್ರು ಮುಂತಾದವರು ಇದ್ದರು.


ಬೇಡಿಕೆಗಳನ್ನು ಶೀಘ್ರದಲ್ಲಿ ಈಡೇರಿಸುವುದಾಗಿ ಭರವಸೆ ನೀಡಿದರು. ನಂತರ ಮಾನ್ಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಮೇಲೆ ನಂಬಿಕೆ ಇಟ್ಟು ಅಂತಿಮ ಸಂಸ್ಕಾರಕ್ಕೆ ಒಪ್ಪಿಗೆ ನೀಡಲಾಯಿತು. ಪಿ.ಡಿ.ಓ ಸಿದ್ದರಾಮ ಬಬಲೇಶ್ವರ ರವರ ವಿರುದ್ದ ಕುಟುಂಬಸ್ಥರು ಕೇಸ ದಾಖಲಿಸಿದರು. ನಂತರ




ಪೋಸ್ಟ್ ಮಾರ್ಟಮ್ ಮಾಡಿಸಲಾಯಿತು.

1) ಮಾನಸಿಕ ಹಿಂಸೆ ನಿಡಿದ ಪಿ.ಡಿ.ಓ ಅಧಿಕಾರಿಗೆ ವಜಾಮಾಡುವುದು.
2) ಸುಮಾರು 3 ವರ್ಷ ದಿಂದ ಕೆಲಸಕ್ಕೆ ಅಡ್ಡಿ ಪಡಿಸಿ ವೇತನ ನೀಡದೆ ಇರುವ ವೇತನ ಕೂಡಲೆ ಮರಣ ಹೊಂದಿದ ಕುಟುಂಬಕ್ಕೆ ನೀಡಬೇಕು.
3) ಈ ನೌಕರರ ಕುಟುಂಬದಲ್ಲಿ ಗ್ರಾಮ ಪಂಚಾಯತಿ ಯಲ್ಲಿ ಅನುಕಂಪ ಆಧಾರದ ಮೇಲೆ ಕೆಸಕ್ಕೆ ಸೇರಿಕೊಳಲು ಒತ್ತಾಯಿಸಲಾಯಿತು.
4) ಸಮಾಜದ ಮುಖಂಡರು ಹಾಗೂ ಊರಿನ ಸಾರ್ವಜನಿಕ ರು 20 ಲಕ್ಷ ರೂ ಪರಿಹಾರ ಕೊಡಿಸಲು ಮನವಿ ಕೊಡಲಾಯಿತು.
5) ಮಾನಸಿಕ ಹಿಂಸೆ ನೀಡಿದ 3 ಜನ ಸದ್ಯಸರಿಗೂ ಸದಸತ್ವ ರದ್ದು ಮಾಡುವಂತೆ ಸಾರ್ಜನಿಕರು ಮನವಿ ಮಾಡಿಕೊಂಡಿದ್ದಾರೆ.
6) ಈ ನೌಕರನಿಗೆ ವೈದ್ಯಕೀಯ ವೆಚ್ಚ ಕರ್ಚಾದ ಹಣವನ್ನು ಸಂಬಂದ ಪಟ್ಟ PDO ಅಧಿಕಾರಿ ಇಂದ ಕೊಡಿಸಲು ಒತ್ತಾಯಿಸಲಾಯಿತು. ಈ ಬೇಡಿಗಳ ಮನವಿಯನ್ನು ಸಲ್ಲಿಸಲಾಯಿತು.

ವರದಿ: ಶಿವಾನಂದ ಕವಲಗಾ ಬಿ.



ಆರ್ಥಿಕ ಸಂಕಟಗಳ ಜತೆಗೆ ಈಗ ಬೆಲೆಯೇರಿಕೆಯ ಹೊರೆ



ನವ-ಉದಾರವಾದಿ ಧೋರಣೆಗಳಿಂದ ಉಂಟಾಗಿರುವ ಕೆಟ್ಟಪರಿಸ್ಥಿತಿ ನೋಟುರದ್ಧತಿ ಮತ್ತು ಕೆಟ್ಟದಾಗಿ ರೂಪಿಸಿ, ಜಾರಿಗೊಳಿಸಿದ ಜಿಎಸ್‌ಟಿಯಿಂದಾಗಿ ಮತ್ತಷ್ಟು ಉಲ್ಬಣಗೊಂಡು ಆರ್ಥಿಕ ಬೆಳವಣಿಗೆ ಕುಸಿಯುವಂತೆ ಮಾಡಿದೆ. ಈಗ ಅದಕ್ಕೆ ಜೀವನಾವಶ್ಯಕ ಸಾಮಗ್ರಿಗಳಲ್ಲಿ ತೀವ್ರ ಹಣದುಬ್ಬರದ ಸಮಸ್ಯೆಯೂ ಸೇರಿಕೊಂಡಿದೆ. ಜನಸಾಮಾನ್ಯರು ಒಂದೆಡೆಯಲ್ಲಿ, ಇಳಿಯುತ್ತಿರುವ ಕೂಲಿ-ಸಂಬಳಗಳು ಮತ್ತು ಏರುತ್ತಿರುವ ನಿರುದ್ಯೋಗ, ಇನ್ನೊಂದೆಡೆಯಲ್ಲಿ ಆಹಾರ ಸಾಮಗ್ರಿಗಳು ಮತ್ತು ಇತರ ಆವಶ್ಯಕ ಸರಕುಗಳ ಬೆಲೆಯೇರಿಕೆಗಳ ಎರಡೆರಡು ಹೊರೆಗಳನ್ನು ಹೊರಬೇಕಾಗಿ ಬಂದಿದೆ. ಮೋದಿ ಸರಕಾರದ ಹಾನಿಕಾರಕ ಧೋರಣೆಗಳಿಗೆ ಜನಗಳ ಪ್ರತಿರೋಧವನ್ನು ಕಟ್ಟಿ ಬೆಳೆಸುವುದು ಮತ್ತು ವರ್ಗ ಹಾಗೂ ಸಾಮೂಹಿಕ ಹೋರಾಟಗಳನ್ನು ತೀವ್ರಗೊಳಿಸುವುದಲ್ಲದೆ ಈಗ ಬೇರೆ ಯಾವ ಮಾರ್ಗವೂ ಇಲ್ಲವಾಗಿದೆ.



ಪ್ರಕಾಶ ಕಾರಟ್

ಭಾರತೀಯ ಅರ್ಥವ್ಯವಸ್ಥೆ ಭೀಷಣ ಇಕ್ಕಟ್ಟಿನಲ್ಲಿ ಸಿಲುಕಿದೆ. ಸರಕಾರ 2019-20ರಲ್ಲಿ ಜಿಡಿಪಿ ಬೆಳವಣಿಗೆ ದರ 5% ಇರಬಹುದು ಎಂದು ಲೆಕ್ಕ ಹಾಕಿ ಹೇಳಿದೆ. ಇದು ಜುಲೈ 2019ರಲ್ಲಿ ಮಂಡಿಸಿದ ಬಜೆಟಿನಲ್ಲಿ ಅಂದಾಜು ಮಾಡಿದ್ದ ದರಕ್ಕಿಂತ ಪೂರ್ಣ 2%ದಷ್ಟು ಕಡಿಮೆ. ಬಹುಶಃ ವಾಸ್ತವ ಜಿಡಿಪಿ ದರ ಇನ್ನೂ ಕೆಟ್ಟದಾಗಿರಬಹುದು, ಏಕೆಂದರೆ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯ ಬೆಳವಣಿಗೆ ದರ 4.6% ಇರಬಹುದು ಎಂಬ ಅಂದಾಜಿಗೆ ಬಂದಿದೆ. ಆದರೆ ಆರ್ಥಿಕ ರಂಗದಲ್ಲಿನ ಮೋದಿ ಅನಾಹುತದ ಕತೆ ಇಲ್ಲಿಗೇ ಮುಗಿಯುವುದಿಲ್ಲ.

ಇತ್ತೀಚಿನ ಸುದ್ದಿ ಎಂದರೆ ಹಣದುಬ್ಬರ ದರ ಡಿಸೆಂಬರ್ 2019ರಲ್ಲಿ 7.35%ಕ್ಕೆ ಏರಿದೆ. ಇದು ಜುಲೈ 2014ರ ನಂತರದ ಅತಿ ಹೆಚ್ಚಿನ ಹಣದುಬ್ಬರ ದರ. ಬಳಕೆದಾರ ಸೂಚ್ಯಂಕ ಈ ದರದಲ್ಲಿ ಏರಿದ್ದರೆ, ಆಹಾರ ಸಾಮಗ್ರಿಗಳ ಸೂಚ್ಯಂಕ ಇನ್ನೂ ಹೆಚ್ಚು, 14.12% ದಷ್ಟು. ಈರುಳ್ಳಿ, ಆಲೂಗಡ್ಡೆ, ತರಕಾರಿಗಳು ಹಾಗೂ ಬೇಳೆಕಾಳುಗಳ ಬೆಲೆಗಳಲ್ಲಿ ತೀವ್ರ ಏರಿಕೆ ಉಂಟಾಗಿದೆ. ಸಗಟು ಬೆಲೆ ಸೂಚ್ಯಂಕ ಡಿಸೆಂಬರ್‌ನಲ್ಲಿ 2.6%ಕ್ಕೇರಿದೆ. ಇದು ಕೂಡ ಕಳೆದ ಏಳು ತಿಂಗಳಲ್ಲೇ ಅತಿ ಹೆಚ್ಚಿನ ದರ. ಪೆಟ್ರೋಲ್ ಮತ್ತು ಡಿಸೆಲ್ ದರಗಳು 2019ರ ಇಡೀ ವರ್ಷದಲ್ಲಿ ಸತತವಾಗಿ ಏರುತ್ತ ಬಂದಿವೆ, ಡೀಸೆಲ್ ಬೆಲೆಯಲ್ಲಿ ಲೀಟರಿಗೆ ರೂ.5.10 ಮತ್ತು ಪೆಟ್ರೋಲ್ ಬೆಲೆಗಳಲ್ಲಿ ರೂ.6.30 ಏರಿಕೆಯಾಗಿದೆ. ಇದು ಹಣದುಬ್ಬರವನ್ನು ಹೆಚ್ಚಿಸಿದೆ. ಮಧ್ಯ-ಪ್ರಾಚ್ಯ ಪ್ರದೇಶದಲ್ಲಿ ಇರಾನ್ ಬಗ್ಗೆ ಅಮೆರಿಕಾದ ಆಕ್ರಮಣಕಾರೀ ನಿಲುವಿನಿಂದಾಗಿ ಉಂಟಾಗಿರುವ ಸೆಳೆತಗಳನ್ನು ನೋಡಿದರೆ, ಈ ವಿಷಯದಲ್ಲಿಯೂ ಪರಿಸ್ಥಿತಿ ಸುಧಾರಿಸುವ ಸಾಧ್ಯತೆಗಳು ಕಾಣುತ್ತಿಲ್ಲ.

ಭಾರತೀಯ ಅರ್ಥವ್ಯವಸ್ಥೆ ಒಂದು ಸ್ಥಗಿತತೆಯತ್ತ ಜಾರುತ್ತಿದೆಯಷ್ಟೇ ಅಲ್ಲ, ಅದೇ ವೇಳೆಗೆ ಹಣದುಬ್ಬರವನ್ನೂ ಎದುರಿಸುತ್ತಿದೆ ಎಂದು ಹಲವು ಆರ್ಥಿಕ ತಜ್ಞರು ಗಮನಿಸಿದ್ದಾರೆ. ಅಂದರೆ, ಭಾರತದ ಅರ್ಥವ್ಯವಸ್ಥೆ ಈಗ 'ಸ್ಥಗಿತುಬ್ಬರ'(ಸ್ಟಾಗ್‌ಫ್ಲೇಶನ್)ವನ್ನು ಅನುಭವಿಸುತ್ತಿದೆ- ಬೆಲೆಗಳು ಏರುತ್ತಿವೆ ಮತ್ತು ಉತ್ಪಾದನೆಯ ಬೆಳವಣಿಗೆ ನಿಧಾನಗೊಳ್ಳುತ್ತಿದೆ.

ಹಣಕಾಸು ಮಂತ್ರಿಗಳು ಜುಲೈ 2019ರಲ್ಲಿ ಮಂಡಿಸಿದ ಬಜೆಟ್ ಚಿಂದಿಯಾಗಿ ಬಿಟ್ಟಿದೆ. ಅದರಲ್ಲಿ ಪ್ರಸ್ತುತ ಪಡಿಸಿದ ಅಂಕೆ-ಸಂಖ್ಯೆಗಳೆಲ್ಲವೂ ಸಂಪೂರ್ಣವಾಗಿ ಏರುಪೇರಾಗಿವೆ- ಅಲ್ಲಿ ಹೇಳಿರುವ ಮೊತ್ತಕ್ಕೂ ಈಗ ಕಾಣುತ್ತಿರುವ ಮೊತ್ತಕ್ಕೂ ಅಪಾರ ಅಂತರ ಉಂಟಾಗಿದೆ. ಸರಕಾರ, ಅರ್ಥವ್ಯವಸ್ಥೆ ನಿಧಾನಗೊಳ್ಳುತ್ತಿದೆ ಎಂದು ಅಧಿಕೃತವಾಗಿ ಒಪ್ಪಿಕೊಳ್ಳದಿದ್ದರೂ ಬೆಳವಣಿಗೆಯನ್ನು ಪುನರುಜ್ಜೀವನಗೊಳಿಸಲಿಕ್ಕೆಂದು ಕ್ರಮಗಳನ್ನು ಕೈಗೊಳ್ಳುತ್ತಿರುವುದಾಗಿ ಹೇಳುತ್ತಿದೆ. ಆದರೆ ಅವೆಲ್ಲವೂ ಭಾರತೀಯ ದೊಡ್ಡ ಬಂಡವಳಿಗರು ಮತ್ತು ವಿದೇಶಿ ಹಣಕಾಸು ಬಂಡವಾಳಕ್ಕೆ ಅಪಾರ ತೆರಿಗೆ ರಿಯಾಯ್ತಿಗಳನ್ನು ಒದಗಿಸುವ ಕ್ರಮಗಳಷ್ಟೇ. ಅದು ಕೈಗೊಂಡ ಮೊದಲ ಕ್ರಮವೆಂದರೆ ಬಜೆಟಿನಲ್ಲಿ ವಿಧಿಸಿದ್ದ ಬಂಡವಾಳ ಗಳಿಕೆ ತೆರಿಗೆಯ ಮೇಲಿನ ಸರ್ಚಾರ್ಜನ್ನು ತೆಗೆದು ವಿದೇಶಿ ಹೂಡಿಕೆದಾರರನ್ನು ಸಮಾಧಾನಗೊಳಿಸುವುದು. ನಂತರ, ರಫ್ತುಗಳಿಗೆ 50,000ಕೋಟಿ ರೂ.ಗಳ ಮತ್ತು ರಿಯಲ್ ಎಸ್ಟೇಟ್ ಮತ್ತು ವಸತಿ ವಲಯಕ್ಕೆ 20,000 ಕೋಟಿ ರೂ.ಗಳ ಸಬ್ಸಿಡಿಗಳ ಪ್ರಕಟಣೆ ಮಾಡಲಾಯಿತು. ಅರ್ಥವ್ಯವಸ್ಥೆ ಏನೇನೂ ಉತ್ತಮಗೊಳ್ಳದಿದ್ದಾಗ, ಕಾರ್ಪೊರೇಟ್ ತೆರಿಗೆ ದರವನ್ನು 22%ಕ್ಕೆ ಇಳಿಸಿ ಕಾರ್ಪೊರೇಟ್ ವಲಯಕ್ಕೆ 1.45 ಲಕ್ಷ ಕೋಟಿ ರೂ.ಗಳ ಭಾರೀ ಕೊಡುಗೆಯನ್ನು ನೀಡಲಾಯಿತು. ಇದಕ್ಕೆ ಮೊದಲು 400 ಕೋಟಿ ರೂ,ಗಳಿಗಿಂತ ಹೆಚ್ಚಿನ ವಹಿವಾಟು ಇದ್ದ ಕಂಪನಿಗಳಿಗೆ 30% ಮತ್ತು ಇತರೆಲ್ಲ ಕಂಪನಿಗಳಿಗೆ 25% ಕಾರ್ಪೊರೇಟ್ ತೆರಿಗೆ ಇತ್ತು. ಇದರ ಫಲಿತಾಂಶವೆಂದರೆ, ರಿಝರ್ವ್ ಬ್ಯಾಂಕ್‌ನ್ನು ದಬಾಯಿಸಿ ಅದರ ಗಳಿಕೆಯ 1.76ಲಕ್ಷ ಕೋಟಿ ರೂ.ಗಳನ್ನು ಪಡೆದುಕೊಂಡ ನಂತರವೂ ಸರಕಾರದ ಹಣಕಾಸು ಕೊರತೆ ಮತ್ತಷ್ಟು ಹೆಚ್ಚುವಂತಾಗಿದೆ.

ಅರ್ಥವ್ಯವಸ್ಥೆ ನಿಧಾನಗೊಳ್ಳುತ್ತಿರುವುದರಿಮದಾಗಿ ತೆರಿಗೆ ಸಂಗ್ರಹಗಳೂ ಬಜೆಟಿನಲ್ಲಿ ಅಂದಾಜು ಮಾಡಿದ್ದಕ್ಕಿಂತ ಬಹಳ ಕೆಳಮಟ್ಟದಲ್ಲಿವೆ. ಇದು ಮುಖ್ಯವಾಗಿ ರಾಜ್ಯಗಳನ್ನು ಬಾಧಿಸಿದೆ, ಏಕೆಂದರೆ ಇದರಿಂದಾಗಿ ಅವುಗಳಿಗೆ ಕೇಂದ್ರ ಸರಕಾರ ತಾನು ಕೊಡಬೇಕಾಗಿರುವ ಜಿಎಸ್‌ಟಿ ಪರಿಹಾರ ಪಾವತಿಗಳನ್ನು ಮುಂದೂಡಿದೆ. ಸರಕಾರದ ಕ್ರಮಗಳು ಅರ್ಥವ್ಯವಸ್ಥೆಯಲ್ಲಿನ ಬೇಡಿಕೆಯ ಬಿಕ್ಕಟ್ಟನ್ನು ನಿಭಾಯಿಸಲು ಏನೂ ಮಾಡಲಿಲ್ಲ, ಆದರೆ ಸರಕಾರದ ಆದಾಯಗಳನ್ನು ಮಾತ್ರ ಇಳಿಸಿತು. ಮನರೇಗ ಯೋಜನೆಗೆ ಹಣಕಾಸು ನೀಡಿಕೆಯನ್ನು ವಿಸ್ತರಿಸುವುದು, ಕೃಷಿ, ಗ್ರಾಮೀಣ ಮೂಲರಚನೆ ಮತ್ತು ಸಾಮಾಜಿಕ ವಲಯಗಳಲ್ಲಿ ಸಾರ್ವಜನಿಕ ಹೂಡಿಕೆಗಳನ್ನು ಹೆಚ್ಚಿಸುವುದು ಮತ್ತು ನಗರಪ್ರದೇಶಗಳಲ್ಲೂ ಒಂದು ಉದ್ಯೋಗ ಖಾತ್ರಿ ಯೋಜನೆಯನ್ನು ಆರಂಭಿಸುವುದು ಮುಂತಾದ ಜನಗಳ ಕೈಗಳಲ್ಲಿ ಹಣವನ್ನು ಇಡಬಹುದಾಗಿದ್ದ ಕ್ರಮಗಳನ್ನು ಅನುಸರಿಸುವ ಬದಲು, ಆಮೂಲಕ ಕೃಷಿಯ ಆರ್ಥಿಕ ಸಾಮರ್ಥ್ಯವನ್ನು ಹೆಚ್ಚಿಸುವ ಬದಲು, ಸರಕಾರ ಈ ಎಲ್ಲ ವಲಯಗಳಲ್ಲೂ ಹಣನೀಡಿಕೆಯಲ್ಲಿ ಕಡಿತ ಮಾಡುತ್ತಿದೆ.


ಮುಂದಿನ ಆರು ವರ್ಷಗಳಲ್ಲಿ ಮೂಲರಚನೆಯಲ್ಲಿ 102 ಲಕ್ಷ ಕೋಟಿ ರೂ.ಗಳನ್ನು ಹೂಡಲಾಗುವುದು ಎಂದು ಬಹಳಷ್ಟು ಪ್ರಚಾರ ಮಾಡಲಾಯಿತು. ಆದರೆ ಐದು ವರ್ಷಗಳಲ್ಲಿ ಹಾಗೆ ಮಾಡುವ ವಚನ ದುರ್ಬಲಗೊಂಡಿದೆ, ಮಾತ್ರವಲ್ಲ, ಅದು ಪ್ರಚಾರ ಮಾಡಿದ ಪ್ರಮಾಣದ ಹತ್ತಿರವೂ ಬರುವಂತೆ ಕಾಣುತ್ತಿಲ್ಲ. ಇದಕ್ಕೆ 39% ಮಾತ್ರ ಭಾರತ ಸರಕಾರದಿಂದ ಬರುತ್ತದೆ, 39% ಎಲ್ಲ ರಾಜ್ಯಗಳಿಂದ ಬರುತ್ತದೆ ಮತ್ತು ಉಳಿದ 22% ಖಾಸಗಿ ವಲಯದಿಂದ ಬರುತ್ತದೆ ಎಂದು ಕೇಂದ್ರ ಸರಕಾರ ಹೇಳುತ್ತಿದೆ. ಆದರೆ ಈಗ ನೋಟುರದ್ಧತಿ, ಜಿಎಸ್‌ಟಿಯ ಒಡ್ಡೊಡ್ಡಾದ ಜಾರಿ ಮತ್ತು ಕಾರ್ಪೊರೇಟ್‌ಗಳಿಗೆ ಕೇಂದ್ರ ಸರಕಾರದ ತೆರಿಗೆ ಬಕ್ಷೀಸುಗಳು ರಾಜ್ಯಗಳ ಹಣಕಾಸು ಪರಿಸ್ಥಿತಿಯನ್ನು ಸಂಪೂರ್ಣವಾಗಿ ಬಿಗಡಾಯಿಸಿರುವಾಗ, ಮತ್ತು ಆರ್ಥಿಕ ಸ್ಥಗಿತತೆಯ ಅಂಚಿನಲ್ಲಿ ಬಂದು ನಿಂತಿರುವಾಗ ಹಾಗೂ ಸ್ಥಗಿತುಬ್ಬರವನ್ನು ಅನುಭವಿಸುತ್ತಿರುವಾಗ, ಈ ದೊಡ್ಡ ಯೋಜನೆಯ ಪ್ರಕಟಣೆ ಬಹುಮಟ್ಟಿಗೆ ಟೊಳ್ಳು ಬಡಾಯಿಯೇ ಆಗಿದೆ.

ಸರಕಾರ ಈಗ ಸಾರ್ವಜನಿಕ ವಲಯದ ಉದ್ದಿಮೆಗಳಲ್ಲಿ ತನ್ನ ಪಾಲನ್ನು ಬೃಹತ್ ಪ್ರಮಾಣದಲ್ಲಿ ಮತ್ತು ಅತ್ಯಂತ ಕಡಿಮೆ ಬೆಲೆಗಳಲ್ಲಿ ಮಾರಿಕೊಳ್ಳಲು ಮುಂದಾಗಿದೆ. ಹಲವು ಲಾಭದಾಯಕ ಉದ್ದಿಮೆಗಳನ್ನು ಕಡಿದು ಹಾಕಿ ದೇಶಕ್ಕೆ ಸದ್ಯದಲ್ಲೂ ಮತ್ತು ಭವಿಷ್ಯದಲ್ಲೂ ಅಪಾರ ಹಾನಿಗಳನ್ನು ತರುತ್ತಿದೆ. ಇದನ್ನು ಯಾವ ರೀತಿಯಲ್ಲೂ ಒಪ್ಪಿಕೊಳ್ಳಲು ಸಾಧ್ಯವಿಲ್ಲ.

ಸರಕಾರದ ಮಾಹಿತಿಗಳೇ ಬೃಹತ್ ಪ್ರಮಾಣದ ನಿರುದ್ಯೋಗ ಇದೆ, ಕೃಷಿ ಸಂಕಟ ಮುಂದುವರೆಯುತ್ತಿದೆ ಮತ್ತು ತಲಾಬಳಕೆ ಖರ್ಚು ಇಳಿಮುಖಗೊಂಡಿದೆ, ಗ್ರಾಮೀಣ ಭಾರತದಲ್ಲಿ 2011-12ರಿಂದ 2017-18ರ ನಡುವೆ 8.8% ದಷ್ಟು ಇಳಿದಿದೆ ಎಂದು ತೋರಿಸುತ್ತಿವೆ. ಪ್ರಥಮತಃ ನವ-ಉದಾರವಾದಿ ಧೋರಣೆಗಳಿಂದ ಉಂಟಾಗಿರುವ ಇಂತಹ ಕೆಟ್ಟಪರಿಸ್ಥಿತಿ ನೋಟುರದ್ಧತಿ ಮತ್ತು ಕೆಟ್ಟದಾಗಿ ರೂಪಿಸಿ, ಜಾರಿಗೊಳಿಸಿದ ಜಿಎಸ್‌ಟಿಯಿಂದಾಗಿ ಮತ್ತಷ್ಟು ಉಲ್ಬಣಗೊಂಡು ಆರ್ಥಿಕ ಬೆಳವಣಿಗೆ ಕುಸಿಯುವಂತೆ ಮಾಡಿದೆ. ಈಗ ಅದಕ್ಕೆ ಜೀವನಾವಶ್ಯಕ ಸಾಮಗ್ರಿಗಳಲ್ಲಿ ತೀವ್ರ ಹಣದುಬ್ಬರದ ಸಮಸ್ಯೆಯೂ ಸೇರಿಕೊಂಡಿದೆ. ಈ ಸರಕಾರ ತನ್ನ ಸ್ವಭಾವದಿಂದಾಗಿ, ಇಂತಹ ಧೋರಣೆಗಳನ್ನು ಕೈಬಿಟ್ಟು, ಅರ್ಥವ್ಯವಸ್ಥೆಯಲ್ಲಿ ಬೇಡಿಕೆಯನ್ನು ಸ್ಫುರಿಸುವ ಹಾಗೂ ಬೃಹತ್‌ಪ್ರಮಾಣದಲ್ಲಿ ಸಾರ್ವಜನಿಕ ಹೂಡಿಕೆಗಳ ಮೂಲಕ ಪೂರೈಕೆಯ ಮೂಲರಚನೆಗಳನ್ನು ಉತ್ತಮಪಡಿಸಬೇಕು ಎನ್ನುವ ಸಲಹೆಗಳಿಗೆ ಕಿವಿಗೊಡುವುದಿಲ್ಲ. ತದ್ವಿರುದ್ಧವಾಗಿ ಅದು ಅಂತರ್‍ರಾಷ್ಟ್ರೀಯ ಹಣಕಾಸು ಬಂಡವಾಳ ಮತ್ತು ದೇಶೀ ಗುತ್ತೇದಾರಿ ಬಂಡವಾಳದ ಆಗ್ರಹದಂತೆ ಶ್ರಮ ಮಾರುಕಟ್ಟೆ ಹಾಗೂ ಭೂಮಿ ಮಾರುಕಟ್ಟೆಯನ್ನು ಮತ್ತಷ್ಟು 'ಉದಾರೀಕರಿಸುವ' ಪ್ರಯತ್ನವನ್ನೇ ಮಾಡುತ್ತದೆ.

ಜನಸಾಮಾನ್ಯರು ಒಂದೆಡೆಯಲ್ಲಿ, ಇಳಿಯುತ್ತಿರುವ ಕೂಲಿ-ಸಂಬಳಗಳು ಮತ್ತು ಏರುತ್ತಿರುವ ನಿರುದ್ಯೋಗ, ಇನ್ನೊಂದೆಡೆಯಲ್ಲಿ ಆಹಾರ ಸಾಮಗ್ರಿಗಳು ಮತ್ತು ಇತರ ಆವಶ್ಯಕ ಸರಕುಗಳ ಬೆಲೆಯೇರಿಕೆಗಳ ಎರಡೆರಡು ಹೊರೆಗಳನ್ನು ಹೊರಬೇಕಾಗಿ ಬಂದಿದೆ.

ಮೋದಿ ಸರಕಾರದ ಹಾನಿಕಾರಕ ಧೋರಣೆಗಳಿಗೆ ಜನಗಳ ಪ್ರತಿರೋಧವನ್ನು ಕಟ್ಟಿ ಬೆಳೆಸುವುದು ಮತ್ತು ವರ್ಗ ಹಾಗೂ ಸಾಮೂಹಿಕ ಹೋರಾಟಗಳನ್ನು ತೀವ್ರಗೊಳಿಸುವುದಲ್ಲದೆ ಈಗ ಬೇರೆ ಯಾವ ಮಾರ್ಗವೂ ಇಲ್ಲವಾಗಿದೆ.



ವ್ಯಂಗ್ಯಚಿತ್ರ:
ಅಲೋಕ್ ನಿರಂತರ್



16th ALL INDIA CITU CONFERENCE
2020 January 23 -27- Chennai

ಜನವರಿ 8 ಮಹಾಮುಷ್ಕರ
ಕರ್ನಾಟಕದ ಕಾರ್ಮಿಕರಿಗೆ ಸಿಐಟಿಯು ಅಭಿನಂದನೆ

ಕರ್ನಾಟಕದಲ್ಲಿ ಜನವರಿ 8ರ ಅಖಿಲ ಭಾರತ ಮುಷ್ಕರದಲ್ಲಿ ಸುಮಾರು 50 ಲಕ್ಷದಷ್ಟು ಕಾರ್ಮಿಕರ ಭಾಗವಹಿಸಿದ್ದಾರೆ ಎಂದು ತಿಳಿಸುತ್ತಾ ಅವರನ್ನು ಸಿಐಟಿಯು ಅಭಿನಂದಿಸಿದೆ. ಜನವರಿ 11 ರಂದು ಬೆಂಗಳೂರಿನಲ್ಲಿ ಸಭೆ ಸೇರಿದ್ದ ಸಿಐಟಿಯು ಪದಾಧಿಕಾರಿಗಳ ಸಭೆಯಲ್ಲಿ ಜನವರಿ 8, 2020ರ ಆಖಿಲ ಭಾರತ ಮುಷ್ಕರದ ವಿಮರ್ಶೆ ಸೇರಿದಂತೆ ಹಲವು ವಿಷಯಗಳ ಕುರಿತು ಚರ್ಚಿಸಲಾಗಿದೆ ಎಂದು ತಿಳಿದು ಬಂದಿದೆ. ಅವುಗಳಲ್ಲಿ ಕೆಲವು ಮುಖ್ಯ ಅಂಶಗಳು :

ಜನವರಿ 8, 2020ರ ಅಖಿಲ ಭಾರತ ಮುಷ್ಕರದ ವಿಮರ್ಶೆ

ಜನವರಿ 8, 2020ರ ಅಖಿಲ ಭಾರತ ಮುಷ್ಕರದ ವಿಮರ್ಶೆಯನ್ನು ಸಭೆಯು ಚರ್ಚಿಸಿತು. ಸಿಐಟಿಯು ನಿಂದ 7.44 ಲಕ್ಷ ಕರಪತ್ರವನ್ನು ಮುದ್ರಿಸಲಾಗಿದೆ. ಜೆಸಿಟಿಯು ವತಿಯಿಂದ ಸುಮಾರು 1.74 ಲಕ್ಷ ಕರಪತ್ರವನ್ನು ಮುದ್ರಿಸಲಾಗಿದೆ. ಸಿಐಟಿಯು ರಾಜ್ಯ ಸಮಿತಿಯಿಂದ 15 ಸಾವಿರ ಕಿರುಪುಸ್ತಕವನ್ನು ಮುದ್ರಿಸಲಾಗಿದೆ. ಸಿಐಟಿಯು ಜಿಲ್ಲಾ ಸಮಿತಿಗಳು 4 ಸಾವಿರ ಪೋಸ್ಟರ್‌ಗಳನ್ನು ಮುದ್ರಿಸಿದ್ದಾರೆ. 44 ಜಾಥಾಗಳು ನಡೆದಿವೆ. ಸುಮಾರು 100 ಕಡೆ ಬೀದಿ ಬದಿ ಸಭೆಗಳು ನಡೆದಿದೆ. 8 ಕಡೆ ಬೈಕ್ ರ‍್ಯಾಲಿ ನಡೆದಿದೆ. 30 ಪ್ರದೇಶಗಳಲ್ಲಿ ಅಟೋ ಪ್ರಚಾರ ನಡೆದಿವೆ. ರಾಜ್ಯ ಮಟ್ಟದ ಸಂಘಟನೆಗಳು 2.17 ಲಕ್ಷ ಕರಪತ್ರವನ್ನು, 12 ಸಾವಿರ ಪೋಸ್ಟರ್‌ಗಳನ್ನು ಮುದ್ರಿಸಿದ್ದಾರೆ. ರಾಜ್ಯ ಕೇಂದ್ರಕ್ಕೆ ಬಂದ ಮಾಹಿತಿ ಪ್ರಕಾರ ಕಾರ್ಖಾನೆ ಕಾರ್ಮಿಕರು, ಅಂಗನವಾಡಿ ಕಾರ್ಯಕರ್ತೆಯರು, ಅಕ್ಷರ ದಾಸೋಹ ನೌಕರರು, ಗಾಮ ಪಂಚಾಯಿತಿ ನೌಕರರು ಬಹುತೇಕ ಪೂರ್ಣವಾಗಿ ಈ ಮುಷ್ಕರದಲ್ಲಿ ಭಾಗವಹಿಸಿದ್ದಾರೆ. ಕಟ್ಟಡ ಕಾರ್ಮಿಕರು, ಹಮಾಲಿ ಕಾರ್ಮಿಕರು, ಸಾರಿಗೆ ಕಾರ್ಮಿಕರು, ಮುನ್ಸಿಪಲ್ ಕಾರ್ಮಿಕರು, ಬೀಡಿ ಕಾರ್ಮಿಕರು ದೊಡ್ಡ ಸಂಖ್ಯೆಯಲ್ಲಿ ಈ ಮುಷ್ಕರದಲ್ಲಿ ಭಾಗವಹಿಸಿದ್ದಾರೆ.

ಜನವರಿ 8 ರಂದು ಕೇಂದ್ರ ಕಾರ್ಮಿಕ ಸಂಘಟನೆಗಳು ನೀಡಿದ ಮುಷ್ಕರವು ಕೈಗಾರಿಕಾ ಹಾಗು ಸೇವಾ ವಲಯದಲ್ಲಿ ಯಶಸ್ವಿಯಾಗಿ ನಡೆದಿದೆ. ರಾಜ್ಯದಲ್ಲಿ ಮುಷ್ಕರದಲ್ಲಿ ಭಾಗವಹಿಸಿದ ಕಾರ್ಮಿಕರ ಸಂಖ್ಯೆ ಸುಮಾರು 50 ಲಕ್ಷದಷ್ಟು ಇರಬಹುದು ಎಂದು ಅಂದಾಜಿಸ ಬಹುದು. ಗ್ರಾಮೀಣ ಪ್ರದೇಶಗಳಲ್ಲಿ ರೈತ ಸಂಘಟನೆಗಳು ಮುಷ್ಕರದ ಪರವಾಗಿ ಜಂಟಿ ಪ್ರಚಾರ ನಡೆಸಿವೆ.

ಈ ಮುಷ್ಕರವು ಕರ್ನಾಟಕದಲ್ಲಿ ವಿಫಲವಾಯಿತು ಎಂದು ಸಾಬೀತು ಪಡಿಸಲು ರಾಜ್ಯದ ಬಿಜೆಪಿ ಸರ್ಕಾರವು ಪೋಲಿಸರನ್ನು ಬಳಸಿಕೊಂಡಿದೆ. ಸಿಎಎ ಪ್ರತಿಭಟನೆಗಳ ನೆಪದಲ್ಲಿ ಮುಷ್ಕರದ ಪ್ರಚಾರವನ್ನು ನಡೆಸಲು ಅನುಮತಿ ನಿರಾಕರಿಸಲಾಗಿದೆ. ಹಲವು ಜಿಲ್ಲೆಗಳಲ್ಲಿ ಬಹಿರಂಗ ಪ್ರಚಾರಕ್ಕೆ ಅವಕಾಶವೇ ನೀಡಲಿಲ್ಲ. ಮುಷ್ಕರ ದಿನದಂದು ರಾಜ್ಯಾದ್ಯಂತ ಎಲ್ಲಿಯೂ ಮೆರವಣಿಗೆಗಳಿಗೆ ಅವಕಾಶ ನೀಡಲಿಲ್ಲ. ಪೋಲೀಸ್ ಕಟ್ಟೆಚ್ಚರ ಹಾಗು ಬಂಧನದ ಬೆದರಿಕೆಗಳ ನಡುವೆಯು ಈಗಾಗಲೇ ಸಿಕ್ಕಿರುವ ಮಾಹಿತಿಯಂತೆ ಸುಮಾರು 1.5 ಲಕ್ಷ ಜನ ಮುಷ್ಕರದ ದಿನದ ಪ್ರತಿಭಟನೆಗಳಲ್ಲಿ ರಾಜ್ಯಾದ್ಯಂತ ಭಾಗವಹಿಸಿರುವ ವರದಿಗಳಿವೆ.

ಮುಷ್ಕರವು ಬಂದ್ ಸ್ವರೂಪ ಪಡೆದುಕೊಂಡಿಲ್ಲ. ಮಾಧ್ಯಮಗಳು ಸಂಪೂರ್ಣವಾಗಿ ಮುಷ್ಕರ ವಿರೋಧಿ ಪ್ರಚಾರವನ್ನು ಮಾಡಿದ್ದು ಕೂಡ ಪ್ರಮುಖ ಕಾರಣವಾಗಿದೆ. ಮುಖ್ಯವಾಗಿ ದೃಶ್ಯಮಾಧ್ಯಮಗಳು ಎಡಪಂಥದ ಸಂಘಟನೆಗಳ ವಿರುದ್ಧ ಪ್ರಚಾರ ನಡೆಸಿದನ್ನು ಗುರುತಿಸ ಬಹುದಾಗಿದೆ. ಅತ್ಯಂತ ಪ್ರಜಾಪ್ರಭುತ್ವ ವಿರೋಧಿ ನಿಲುವುಗಳೊಂದಿಗೆ ಮಾಧ್ಯಮಗಳು ನಡೆದುಕೊಂಡಿವೆ.

ಇಷ್ಟೆಲ್ಲ ಅಡೆತಡೆಗಳ ನಡುವೆಯು ಮುಷ್ಕರವನ್ನು ಯಶಸ್ವಿಗೊಳಿಸಿದ ಎಲ್ಲಾ ಕಾರ್ಮಿಕರಿಗೂ ಹಿತೈಷಿಗಳಿಗೂ ಸಿಐಟಿಯು ರಾಜ್ಯ ಸಮಿತಿಯು ಅಭಿನಂದನೆಗಳನ್ನು ಸಲ್ಲಿಸಿದೆ.

ಸಭೆಯ ಪ್ರಮುಖ ತೀರ್ಮಾನಗಳು:

- **ಜನವರಿ 19, 2020 ರಂದು** ಅಖಿಲ ಭಾರತ ಸಿಐಟಿಯು ಕರೆಯಂತೆ **'ಧ್ವಜ' ದಿನಾಚರಣೆ**ಯನ್ನು ನಡೆಸಬೇಕು. ಅಂದು ಅಖಿಲ ಭಾರತ ಮಟ್ಟದಲ್ಲಿ ಎಲ್ಲಾ ಸಂಘಗಳ ಕಛೇರಿಗಳ ಮೇಲೂ ಮತ್ತು ತಾಲೂಕು /ಜಿಲ್ಲಾ ಮತ್ತು ಕೆಳಮಟ್ಟದ ಕೇಂದ್ರಗಳಲ್ಲಿಯೂ ಇದನ್ನು ಮಾಡುವುದು.
- **ಜನವರಿ 30,2020 ರಂದು** ಪೌರತ್ವ ಕಾಯ್ದೆಯನ್ನು ವಿರೋಧಿಸಿ ಎಲ್ಲಾ ತಾಲೂಕು ಮತ್ತು ಜಿಲ್ಲಾ ಮಟ್ಟದಲ್ಲಿ ಪ್ರತಿಭಟನೆಯನ್ನು ನಡೆಸುವುದು.
- 18–1–2020 ರಂದು **ಬೀದಿಬದಿ ವ್ಯಾಪಾರಿಗಳ ರಾಜ್ಯ ಮಟ್ಟದ ಕಾರ್ಯಾಗಾರ**ವನ್ನು ತುಮಕೂರಿನ ಸಿಐಟಿಯು ಕಛೇರಿಯಲ್ಲಿ ನಡೆಸಲಾಗುತ್ತಿದೆ. ರಾಜ್ಯ ಎಲ್ಲಾ ಬೀದಿಬದಿ ವ್ಯಾಪಾರಿಗಳ ಸಂಘಟನೆಗಳು ತಮ್ಮ ಸಂಘದ ಆಯ್ದ ಪ್ರತಿನಿಧಿಗಳನ್ನು ಈ ಕಾರ್ಯಾಗಾರಕ್ಕೆ ಕಳುಹಿಸಬೇಕು.
- **ಫೆಬ್ರವರಿ 17,2020** ರಂದು **ಮುನ್ಸಿಪಲ್ ಕಾರ್ಮಿಕರ ವಿಧಾನ ಸೌಧ ಚಲೋ** ಕಾರ್ಯಕ್ರಮವಿದೆ. ಎಲ್ಲಾ ಜಿಲ್ಲೆಯಿಂದ ಮುನ್ಸಿಪಲ್ ಕಾರ್ಮಿಕರನ್ನು ಕಳುಹಿಸಿ ಕೊಡುವ ವ್ಯವಸ್ಥೆ ಮಾಡಬೇಕಾಗಿದೆ. ಅಂದು ಬೆಳಗ್ಗೆ 11.00 ಗಂಟೆಗೆ ಸಿಟಿ ರೈಲ್ವೆ ಸ್ಟೇಷನ್ನಿಂದ ಮೆರವಣಿಗೆ ನಡೆಯಲಿದೆ.
- ಕರ್ನಾಟಕ ರಾಜ್ಯ **ಅಕ್ಷರದಾಸೋಹ ನೌಕರರ** ಸಂಘ(ಸಿಐಟಿಯು) ರಾಜ್ಯಸಮಿತಿಯು ಡಿಸೆಂಬರ್ 26 ರಿಂದ ಅನಿರ್ದಿಷ್ಟಾವಧಿ ಹೋರಾಟವನ್ನು ಬೆಂಗಳೂರಿನಲ್ಲಿ ಹಮ್ಮಿಕೊಂಡಿತ್ತು. ಈ ಹೋರಾಟಕ್ಕೆ ತಯಾರಿ ಸಹ ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಉತ್ತಮವಾಗಿ ಸಂಗಾತಿಗಳು ನಡೆಸಿದ್ದರು. ಆದರೆ ರಾಜ್ಯದಲ್ಲಿ ಪೌರತ್ವ ಕಾಯಿದೆ ತಿದ್ದುಪಡಿಯ ಭಾಗವಾಗಿ ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಪ್ರತಿಭಟನೆ–ಹೋರಾಟಗಳು ತೀವ್ರವಾಗುವ ಹಿನ್ನಲೆಯಲ್ಲಿ ಹೋರಾಟಕ್ಕೆ ಹಾಕಿರುವ ಪೋಲಿಸ್– ಪರವಾನಿಗೆ ಕೊನೆಯ ಗಳಿಗೆಯಲ್ಲಿ ನಿರಾಕರಿಸಲಾಯಿತು. ಈ ಹಿನ್ನೆಲೆಯಲ್ಲಿ ಕೊನೆಯ ಗಳಿಗೆಯಲ್ಲಿ ಹೋರಾಟವನ್ನು ಅನಿವಾರ್ಯವಾಗಿ ಮುಂದೂಡಲಾಯಿತು. **ಫೆಬ್ರವರಿ 3, 2020 ರಿಂದ ಅನಿರ್ದಿಷ್ಟಾವಧಿ ಹೋರಾಟ** ಪ್ರಾರಂಭಿಸಲಾಗುವುದು.
- **ಅಖಿಲ ಭಾರತ ಕಾರ್ಯಕ್ರಮಗಳು ಜನವರಿ 23, 26, 30**

ಸಿಐಟಿಯು ಭಾಗವಾಗಿರುವ **'ಜನ ಏಕತಾ ಜನ ಅಧಿಕಾರ್ ಆಂದೋಲನ ಸಮಿತಿ'**ಯ ಕರೆಯ ಮೇರೆಗೆ

ಜನವರಿ 23 ರಂದು ನೇತಾಜಿ ಸುಭಾಷ್ ಚಂದ್ರಬೋಸ್ ರವರ ಹುಟ್ಟಿದ ವರ್ಷಾಚರಣೆ

ಜನವರಿ 26 ರಂದು ಗಣರಾಜ್ಯೋತ್ಸವ,

ಜನವರಿ 30 ರಂದು ಗಾಂಧಿಜಯಂತಿ

ಈ ದಿನಗಳಂದು ಸಿಐಟಿಯು ರಾಜ್ಯ ಸಮಿತಿ ಇತರ ಸಾಮೂಹಿಕ ಸಂಘಟನೆಗಳೊಂದಿಗೆ ಎಲ್ಲಾ ಜಿಲ್ಲಾ ಮತ್ತು ತಾಲೂಕು ಮಟ್ಟದಲ್ಲಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳುವುದು.

ಸಿಐಟಿಯು ಅಖಿಲ ಭಾರತ ಸಮ್ಮೇಳನದ ಪ್ರತಿನಿಧಿಗಳಿಗೆ ಸೂಚನೆ

ಪ್ರತಿನಿಧಿ ಸಂಗಾತಿಗಳು ಅವರ ಪ್ರಯಾಣದ ವಿವರಗಳನ್ನು ಈ ಕೂಡಲೆ ರಾಜ್ಯ ಕೇಂದ್ರಕ್ಕೆ ತಿಳಿಸಲು ವಿನಂತಿ. ಪ್ರತಿಯೊಬ್ಬ ಪ್ರತಿನಿಧಿಯು ಯಾವುದಾದರು ಒಂದು ಗುರುತಿನ ಚೀಟಿಯನ್ನು ಅಖಿಲ ಭಾರತ ಸಮ್ಮೇಳನಕ್ಕೆ ಹೋಗುವಾಗ ತೆಗೆದುಕೊಂಡು ಹೋಗಬೇಕು. ಕಾರಣ ಪ್ರತಿಯೊಬ್ಬ ಪ್ರತಿನಿಧಿಗೂ ಹೋಟೆಲಿನಲ್ಲಿ ವ್ಯವಸ್ಥೆ ಮಾಡಲಾಗಿದೆ. ಸಮ್ಮೇಳನವು ಜನವರಿ 23 ರಿಂದ 27ರವರೆಗೆ ನಡೆಯಲಿದೆ.

ಸಮ್ಮೇಳನವು 23 ರ ಬೆಳಗ್ಗೆ 10.00 ಗಂಟೆಗೆ ಉದ್ಘಾಟನೆಯಾಗಲಿದೆ. 27 ರಂದು ಮಧ್ಯಾಹ್ನ ಬಹಿರಂಗ ಸಭೆ ನಡೆಯುತ್ತದೆ. ಸಂಗಾತಿಗಳು 23 ರಂದು ಬೆಳಗ್ಗೆ 6.00 ಗಂಟೆಗೆ ಮುಂಚೆಯೇ ಚೆನ್ನೈಗೆ ತಲುಪಬೇಕು. ಪ್ರತಿನಿಧಿ ಶುಲ್ಕ 1,800/– ರೂಪಾಯಿ ಆಗಿರುತ್ತದೆ. ಸಮ್ಮೇಳನ ನಡೆಯುವ ಸ್ಥಳ: **ವೈಎಮ್‌ಸಿಎ ಮೈದಾನ, ನಂ–24, ವೆಸ್ಟ್ ಕಾಟ್ ರೋಡ್, ರಾಯ್‌ಪೇಟ್, ಚೆನ್ನೈ–600014**. ಚೆನ್ನೈ ರೈಲ್ವೆ ಸ್ಟೇಷನ್ನಿಂದ 5 ಕಿ.ಮೀ ದೂರದಲ್ಲಿದೆ.

ದ್ವಿತೀಯ ಮತ್ತು ಅಂತಿಮ ಪದವಿ ವಿದ್ಯಾರ್ಥಿಗಳಿಗೂ ಉಚಿತ ಲ್ಯಾಪ್‌ಟಾಪ್ ನೀಡುವಂತೆ ಆಗ್ರಹಿಸಿ ಪ್ರತಿಭಟನೆ

ಹಾವೇರಿ ನಗರದ ಮುನಿಸಿಪಲ್ ಮೈದಾನದಿಂದ ಸಿದ್ದಪ್ಪ ಸರ್ಕಲ್ ವರೆಗೂ ಮೆರವಣಿಗೆ ಹೋಗಿ ದ್ವಿತೀಯ ಮತ್ತು ಅಂತಿಮ ಪದವಿ ವಿದ್ಯಾರ್ಥಿಗಳಿಗೂ ಉಚಿತ ಲ್ಯಾಪ್‌ಟಾಪ್ ನೀಡುವಂತೆ ಆಗ್ರಹಿಸಿ ಭಾರತ ವಿದ್ಯಾರ್ಥಿ ಫೆಡರೇಷನ್ (ಎಸ್‌ಎಫ್‌ಐ) ಹಾವೇರಿ ಜಿಲ್ಲಾ ಸಮಿತಿ ನೇತೃತ್ವದಲ್ಲಿ ಪ್ರತಿಭಟನೆ ಮಾಡಿ ಮಾನ್ಯ ತಹಶಿಲ್ದಾರರ ಮುಖಾಂತರ ಮಾನ್ಯ ಮುಖ್ಯಮಂತ್ರಿಗಳು ಕರ್ನಾಟಕ ರಾಜ್ಯ ಸರ್ಕಾರಕ್ಕೆ ಮನವಿ ಸಲ್ಲಿಸಲಾಯಿತು.

ಸರ್ಕಾರದ ವಿದ್ಯಾರ್ಥಿ ವಿರೋಧಿ ನೀತಿಯನ್ನು ಖಂಡಿಸಿ ಎಸ್‌ಎಫ್‌ಐ ಜಿಲ್ಲಾ ಸಹಕಾರ್ಯದರ್ಶಿ ಬಸವರಾಜ ಭೋವಿ ಮಾತನಾಡಿ ರಾಜ್ಯ ಸರ್ಕಾರ ವಿದ್ಯಾರ್ಥಿಗಳಿಗೆ ನೀಡಬೇಕಾದ ಸರಕಾರಿ ಸೌಲಭ್ಯಗಳನ್ನು ವಿದ್ಯಾರ್ಥಿಗಳ ಮಧ್ಯೆ ತಾರತಮ್ಯ ಮಾಡುತ್ತಿದ್ದೆ ಇದು ತೀವ್ರ ಖಂಡನೀಯ, ಕಳೆದ ರಾಜ್ಯ ಸರ್ಕಾರ SC/ST ವಿದ್ಯಾರ್ಥಿಗಳಿಗೆ ವಿದ್ಯಾರ್ಥಿಗಳಿಗೆ ಮಾತ್ರ ಉಚಿತ ಲ್ಯಾಪ್‌ಟಾಪ್ ನೀಡುತ್ತಿತ್ತು. ಎಸ್‌ಎಫ್‌ಐ ರಾಜ್ಯಾದ್ಯಂತ ಹೋರಾಟ ಮಾಡಿ ಎಲ್ಲಾ ವರ್ಗದ ವಿದ್ಯಾರ್ಥಿಗಳಿಗೂ ಉಚಿತ ಲ್ಯಾಪ್‌ಟಾಪ್ ನೀಡಬೇಕೆಂದು ರಾಜ್ಯ ಸರಕಾರಕ್ಕೆ ಒತ್ತಡ ಹಾಕಲಾಯಿತು. ಪ್ರಸ್ತುತ ರಾಜ್ಯ ಸರ್ಕಾರ ಎಲ್ಲಾ ವರ್ಗದ ವಿದ್ಯಾರ್ಥಿಗಳಿಗೂ ನೀಡುವುದನ್ನು ಸ್ವಾಗತ ಮಾಡುತ್ತಾ ಅದೇ ರೀತಿ ವಿದ್ಯಾರ್ಥಿಗಳ ಮಧ್ಯ ತಾರತಮ್ಯ ಮಾಡದೇ ದ್ವಿತೀಯ ಮತ್ತು ಅಂತಿಮ ವರ್ಷದ ಪದವಿ ವಿದ್ಯಾರ್ಥಿಗಳಿಗೂ ಉಚಿತ ಲ್ಯಾಪ್‌ಟಾಪ್ ನೀಡಬೇಕು.

ಈ ವರ್ಷ ಅಂತಿಮ ವರ್ಷದಲ್ಲಿರುವುದರಿಂದ ತಂತ್ರಜ್ಞಾನ ಬಳಕೆ ಮಾಡಿಕೊಳ್ಳದೆ ಗುಣಾತ್ಮಕ ಕಲಿಕೆಯಲ್ಲಿ ವಿದ್ಯಾರ್ಥಿಗಳು ಹಿಂದೆ ಬೀಳುವಂತಾಗಿದ್ದು. ಆದ ಕಾರಣ ಎರಡೂ ವರ್ಷದ ಅವಧಿಯಲ್ಲಿಯ ವಿದ್ಯಾರ್ಥಿಗಳಿಗೆ ಅನ್ಯಾಯವಾಗದಂತೆ ಅತ್ಯಂತ ತ್ವರಿತಗತಿಯಲ್ಲಿ ನ್ಯಾಯವಾಗಿ ಉನ್ನತ ಶಿಕ್ಷಣಕ್ಕಾಗಿ ಸಹಕಾರಕ್ಕೆ ರಾಜ್ಯ ಸರ್ಕಾರ ಮುಂದಾಗುಬೇಕು. ಇಲ್ಲದಿದ್ದರೆ ಮುಂದಿನ ದಿನಗಳಲ್ಲಿ ಉಗ್ರವಾದ ಪ್ರತಿಭಟನೆ ಮಾಡಲಾಗುವುದು ಎಂದು ಈ ಮೂಲಕ ಭಾರತ ವಿದ್ಯಾರ್ಥಿ ಫೆಡರೇಷನ್ (ಎಸ್‌ಎಫ್‌ಐ) ಹಾವೇರಿ ಜಿಲ್ಲಾ ಸಮಿತಿ ಆಗ್ರಹಿಸುತ್ತದೆ ಎಂದು ಹೇಳಿದರು.

ಎಸ್‌ಎಫ್‌ಐ ಮುಖಂಡರಾದ ಸೃಷ್ಟಿ ನಂದಿ ಮಾತನಾಡಿ 2016-17 ನೇ ಸಾಲಿನ ಪದವಿ ವಿದ್ಯಾರ್ಥಿಗಳಿಗೆ ಉಚಿತ ಲ್ಯಾಪ್‌ಟಾಪ್ ಹಂಚಲಾಗುತ್ತದೆ. ಆದರೆ 2017-18 ಮತ್ತು 2018-19 ನೇ ಸಾಲಿನಲ್ಲಿ ಓದುತ್ತಿರುವ ವಿದ್ಯಾರ್ಥಿಗಳಿಗೆ ಉಚಿತ ಲ್ಯಾಪ್‌ಟಾಪ್ ನೀಡುತ್ತಿಲ್ಲ. ಸಂಬಂಧಿಸಿದ ಅಧಿಕಾರಿಗಳನ್ನು ವಿಚಾರಿಸಿದಾಗ ಸರಕಾರದಿಂದ ಬಂದ ತಕ್ಷಣ ನಿಮಗೆ ಕೋಡುತ್ತೇವೆಂದು ಹೇಳುತ್ತಾ ಬಂದಿದ್ದು. ಈಗ ಕೇವಲ 2019-20 ನೇ ಸಾಲಿನ ಪ್ರಥಮ ವರ್ಷದ ಬಿಎ ಮತ್ತು ಬಿಕಾಂ ಪದವಿ ಓದುತ್ತಿರುವ ವಿದ್ಯಾರ್ಥಿಗಳಿಗೆ ಮಾತ್ರ ಲ್ಯಾಪ್‌ಟಾಪ್ ಹಂಚುತ್ತಿದ್ದು 2017-18 ಮತ್ತು 2018-19 ನೇ ಸಾಲಿನಲ್ಲಿ ಪದವಿಗೆ ಪ್ರವೇಶ ಪಡೆದ ನಾವುಗಳಿಗೆ ಅದರಲ್ಲೂ 2017-18 ರ ವಿದ್ಯಾರ್ಥಿಗಳಾದ ನಮಗೆ ಅನ್ಯಾಯ ಮೋಸ ಮಾಡದೆ ತ್ವರಿತಗತಿಯಲ್ಲಿ ನ್ಯಾಯಗಿಸಿಕೊಡಬೇಕೆಂದು ಎಂದು ಆಗ್ರಹಿಸಿದರು.



ಈ ಸಂದರ್ಭದಲ್ಲಿ ಮುಖಂಡರಾದ ಹನುಮಂತಗೌಡ ಭರಮಗೌಡ್ರು, ಕೃಷ್ಣ ಕಡಕೋಳ, ಸೃಷ್ಠಿ ನಂದಿ, ರಾಜೇಶ್ವರಿ ಕಡಕೋಳ, ವಿದ್ಯಾ ಎಸ್.ವಿ., ಪ್ರಿಯಾಂಕಾ ಕೆ.ವಿ., ಪೂಜಾ ಬಿ.ಎಚ್., ಸುಧಾ ಎಫ್.ಡಿ., ಕವಿತಾ, ಲಕ್ಷ್ಮೀ, ರೇಣುಕಾ ಬಿ., ಅನುಷಾ ಬೆಂಗಳೂರು, ವಿಜಯಕುಮಾರ್ ಸಿ.ಎಮ್., ಈರಣ್ಣ ಎಫ್.ಎಮ್., ಮಂಜು ಎಸ್.ಎಚ್., ವೀರೇಶ ಎಮ್.ಬಿ., ಸೇರಿದಂತೆ ಅನೇಕರು ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

ವರದಿ: ಬಸವರಾಜ ಭೋವಿ

ಸಾರಿಗೆ ನಿಗಮಗಳ ನೌಕರರನ್ನು ಸರ್ಕಾರಿ ನೌಕರರೆಂದು........ ಪುಟ 7 ರಿಂದ

ಚಂದ್ರಶೇಖರ, ಎಚ್.ವಿ. ಚಂದ್ರು, ಪ್ರಧಾನ ಕಾರ್ಯದರ್ಶಿಯಾಗಿ ಎಚ್.ಎಸ್.ರವಿ, ಜಂಟಿ ಕಾರ್ಯದರ್ಶಿಗಳಾಗಿ ಜಯಾನಂದಕುಮಾರ್, ವೈ.ಎಸ್.ಲಕ್ಷ್ಮೀಗೌಡ, ಕೆಂಪೇಗೌಡ, ಲೋಕೇಶ್, ಜನಾರ್ದನ, ಅರುಣ್‌ಕುಮಾರ್ ಖಜಾಂಚಿಯಾಗಿ ಜೆ.ಗಣೇಶ್ ಆಯ್ಕೆಯಾಗಿದ್ದಾರೆ.

ಬೇಡಿಕೆಗಳು

1. ಸಾರಿಗೆ 4 ನಿಗಮಗಳ ನೌಕರರನ್ನು ರಾಜ್ಯ ಸರ್ಕಾರಿ ನೌಕರರೆಂದು ಪರಿಗಣಿಸಬೇಕು. 2006ರ ಪೂರ್ವದಲ್ಲಿದ್ದ ಪಿಂಚಣಿ ಯೋಜನೆಯನ್ನು ನೀಡಬೇಕು. ಸಾರಿಗೆ ನೌಕರರಿಗೆ ಪ್ರಸ್ತುತ ಜಾರಿಯಲ್ಲಿರುವ ಎಲ್ಲಾ ಸೌಲಭ್ಯಗಳನ್ನು ಮುಂದುವರಿಸಬೇಕು.
2. ದಿನಕ್ಕೆ 8 ರಿಂದ 9 ಗಂಟೆ, ವಾರಕ್ಕೆ 48ರಿಂದ 54 ಗಂಟೆಗಳ ಅವಧಿಗಿಂತ ಹೆಚ್ಚಿನ ಕೆಲಸದ ಒತ್ತಡವನ್ನು ನಿಗದಿ ಮಾಡಬಾರದು. ಕಾನೂನು ಪ್ರಕಾರ ಕರ್ತವ್ಯದ ಅವಧಿಯನ್ನು ನಿರ್ಧರಿಸಬೇಕು.
3. ಫಾರಂ ನಂ.4 ಅನ್ನ ವೈಜ್ಞಾನಿಕ ರೀತಿಯಲ್ಲಿ ತಯಾರು ಮಾಡಬೇಕು. ನಿಯಮಾನುಸಾರ ವೇಗದೂತ ವಾಹನ ಗಂಟೆಗೆ 40 ಕಿ.ಮೀ ಮತ್ತು ಸಾಮಾನ್ಯ ವಾಹನ ಗಂಟೆಗೆ 30 ಕಿ.ಮೀ ನಿಗದಿಪಡಿಸಬೇಕು.
4. ಬಾರ್ ಡ್ಯೂಟಿ ಹೆಸರಿನ ಶೋಷಣೆ ನಿಲ್ಲಬೇಕು. ಎ/ಬಿ ಮಾರ್ಗಗಳನ್ನು ಕಾರ್ಯಾರಂಭಿಸಬೇಕು. ಹಾಸನ ವಿಭಾಗದಲ್ಲಿ ರದ್ದುಗೊಳಿಸಲಾಗಿರುವ ಎ/ಬಿ ಮಾರ್ಗಗಳನ್ನು ಪುನರಾರಂಭಿಸಬೇಕು. ಹಾಸನ ನಗರದಲ್ಲಿ ಶಿಫ್ಟ್ (8 ಗಂಟೆ ಅವಧಿಯ) ಡ್ಯೂಟಿ ಮಾರ್ಗಗಳನ್ನು ಆರಂಭಿಸಬೇಕು.
5. ವಾರದಲ್ಲಿ ರಜೆ ಮಂಜೂರಾಗದೇ ಇದ್ದಲ್ಲಿ – ವಾರದ ರಜೆಯನ್ನು ರದ್ದುಪಡಿಸುವ ಪದ್ಧತಿಯನ್ನು ನಿಲ್ಲಿಸಬೇಕು.
6. 22 ದಿವಸಗಳು ಕರ್ತವ್ಯ ನಿರ್ವಹಿಸುವ ಸಿಬ್ಬಂದಿಗಳಿಗೆ ನಿಯಮಾನುಸಾರ ರಜೆ ಮಂಜೂರು ಮಾಡಬೇಕು.
7. ಶೆಡ್ಯೂಲ್‌ಗಳಿಗೆ ಅನುಗುಣವಾಗಿ ತಾಂತ್ರಿಕ ಸಿಬ್ಬಂದಿಗಳನ್ನು ನಿಯೋಜಿಸಬೇಕು. ಸಮಯಕ್ಕೆ ಸರಿಯಾಗಿ ಉತ್ತಮ ಗುಣಮಟ್ಟದ ಬಿಡಿ ಭಾಗಗಳನ್ನು ಒದಗಿಸಿ ವಾಹನಗಳನ್ನು ಸುಸ್ಥಿತಿಯಲ್ಲಿಡಬೇಕು.
8. ಘಟಕದಲ್ಲಿ ಕರ್ತವ್ಯಕ್ಕೆ ಹಾಜರಾದ ನೌಕರರಿಗೆ ನಿಯಮಾನುಸಾರ ಕರ್ತವ್ಯಕ್ಕೆ ನಿಯೋಜಿಸಬೇಕು. ಘಟಕಗಳಲ್ಲಿ ಗಂಟೆಗಟ್ಟಲೆ ಕಾಯಿಸಿ ನಂತರ ರಜೆ ನೀಡುವ ಪದ್ಧತಿ ನಿಲ್ಲಬೇಕು.
9. ಘಟಕ, ಕಾರ್ಯಾಗಾರ ಮತ್ತು ಕಚೇರಿಗಳಲ್ಲಿ ನಿರಂತರ – ಸಮರ್ಪಕವಾಗಿ ಶುದ್ಧ ಕುಡಿಯುವ ನೀರಿನ ವ್ಯವಸ್ಥೆ ಮಾಡಬೇಕು ಮತ್ತು ಅಗತ್ಯಾನುಸಾರ ಶೌಚಾಲಯಗಳನ್ನು ನಿರ್ಮಿಸಬೇಕು.
10. ಎಲ್ಲಾ ಘಟಕಗಳಲ್ಲಿಯೂ ನಿಯಮಾನುಸಾರ ಸಮರ್ಪಕವಾದ ರಿಯಾಯಿತಿ ಧರದ ಆಧಾರದಲ್ಲಿ ಕ್ಯಾಂಟೀನ್ ವ್ಯವಸ್ಥೆ ಮಾಡಬೇಕು.
11. ಪುರುಷ / ಮಹಿಳಾ ಸಿಬ್ಬಂದಿಗಳಿಗೆ ಉತ್ತಮ ಗುಣಮಟ್ಟದ ಎಲ್ಲಾ ಸೌಲಭ್ಯಗಳಿರುವ ವಿಶ್ರಾಂತಿ ಕೊಠಡಿಗಳನ್ನು ನಿರ್ಮಿಸಬೇಕು.
12. ರಾತ್ರಿ ತಂಗುವ ವಾಹನಗಳ ಚಾಲಕ ಮತ್ತು ನಿರ್ವಾಹಕರಿಗೆ ಮೂಲಭೂತ ಸೌಕರ್ಯ ಹಾಗೂ ಭದ್ರತೆಯನ್ನು ಒಳಗೊಂಡ ವಿಶ್ರಾಂತಿ ಕೊಠಡಿಗಳನ್ನು ವ್ಯವಸ್ಥೆ ಮಾಡಬೇಕು.
13. ಇಪಿಕೆಎಂ / ಕೆಎಂಪಿಎಲ್ ಕಿರುಕುಳ ನಿಲ್ಲಬೇಕು. ಇದರಿಂದಾಗುವ ಮಾರ್ಗ ಬದಲಾವಣೆಯ ಕೆಲಸವೂ ನಿಲ್ಲಬೇಕು.
14. ಸಣ್ಣ ಪುಟ್ಟ ಪ್ರಕರಣಗಳಿಗೆ ಅಮಾನತ್ತು ಮಾಡುವುದು, ಇಂಕ್ರಿಮೆಂಟ್ ಕಡಿತ ಮತ್ತು ವಿಪರೀತ ದಂಡ ವಿಧಿಸುವ ಪದ್ಧತಿ ನಿಲ್ಲಬೇಕು.
15. ತಾಂತ್ರಿಕ ಸಿಬ್ಬಂದಿಗಳಿಗೆ ಮಿಲ್ಕ್ ಪೌಡರನ್ನು ಸಮಯಕ್ಕೆ ಸರಿಯಾಗಿ ನೀಡಬೇಕು. ಹಾಗೂ ರಾತ್ರಿ ಪಾಳಿಯಲ್ಲಿ ಕರ್ತವ್ಯ ನಿರ್ವಹಿಸುವ ತಾಂತ್ರಿಕ ಸಿಬ್ಬಂಧಿಗಳಿಗೆ ಟೀ/ಕಾಫಿ ಮತ್ತು ಬ್ರೆಡ್/ಬಿಸ್ಕೆಟ್ ವ್ಯವಸ್ಥೆ ಮಾಡಬೇಕು.
16. ಕಳೆದ ಹಲವು ವರ್ಷಗಳಿಂದ ಕಾರ್ಮಿಕರಿಗೆ ಸಮವಸ್ತ್ರಗಳನ್ನು ನೀಡಿರುವುದಿಲ್ಲ. ಕೂಡಲೇ ಸಮವಸ್ತ್ರಗಳನ್ನು ನೀಡಬೇಕು.
17. ಅನಧಿಕೃತವಾಗಿ ಪ್ರಯಾಣಿಕರನ್ನು ಸಾಗಿಸುವ ಖಾಸಗಿ ವಾಹನಗಳ ಹಾವಳಿ ತಡೆಗಟ್ಟಬೇಕು. ಬಸ್ ನಿಲ್ದಾಣಗಳ ಸುತ್ತ 500 ಮೀ ದೂರದವರೆಗೂ ಖಾಸಗಿ ವಾಹನಗಳು ನಿಲ್ಲದಂತೆ ಕ್ರಮ ವಹಿಸುವುದು. ಈ ಮೂಲಕ ಸಾರಿಗೆ ನಿಗಮದ ಆದಾಯ ಹೆಚ್ಚಿಸಲು ಕಾರಣವಾಗಬೇಕು.
18. ಕರ್ತವ್ಯದ ವೇಳೆಯಲ್ಲಿ ತನಿಖೆಯ ಹೆಸರಿನಲ್ಲಿ ತನಿಖಾ ಸಿಬ್ಬಂದಿಗಳಿಂದ ಚಾಲನಾ ಸಿಬ್ಬಂದಿಗಳಿಗಾಗುತ್ತಿರುವ ಕಿರುಕುಳವನ್ನು ತಡೆಗಟ್ಟಬೇಕು. ತನಿಖಾ ಪ್ರಕ್ರಿಯೆಯನ್ನು ಸಂಪೂರ್ಣ ಪಾರದರ್ಶಕವಾಗಿರಿಸಲು ಡಿಜಿಟಲೀಕರಣಗೊಳಿಸಿ ವೈಜ್ಞಾನಿಕವಾಗಿ ದಾಖಲೀಕರಿಸಬೇಕು.
19. ಸಾರಿಗೆ ನೌಕರರ ಸಂಘದ ಕಾರ್ಯಕರ್ತರ ಮೇಲೆ ಸೇಡಿನ ಕ್ರಮ ಕೈಗೊಳ್ಳುವುದನ್ನು ನಿಲ್ಲಿಸಬೇಕು.
20. ಎನ್‌ಐಎನ್‌ಸಿ ಪದ್ಧತಿಯನ್ನು ರದ್ದುಗೊಳಿಸಬೇಕು. ಪ್ರಯಾಣಿಕ ಟಿಕೆಟ್ ಕಳೆದುಕೊಂಡಿದ್ದಲ್ಲಿ ಪ್ರಯಾಣಿಕರನ್ನೇ ಹೊಣೆಗಾರರನ್ನಾಗಿಸಬೇಕು.
21. ಚಾಲಕ ಮತ್ತು ನಿರ್ವಾಹಕರು ಕರ್ತವ್ಯದ ವೇಳೆಯಲ್ಲಿ ಮೊಬೈಲ್ ಇಟ್ಟು ಕೊಳ್ಳಲು ಅವಕಾಶ ನೀಡಬೇಕು.

–ಎಚ್.ಎಸ್. ರವಿ

ಬಿಜೂರು, ಬವಲಾಡಿ ಕಟ್ಟಡ ಕಾರ್ಮಿಕರ ಸಂಘ ಉದ್ಘಾಟನೆ

ಪುಟ 3 ರಿಂದ

ಸಿಐಟಿಯು ಬೈಂದೂರು ತಾಲೂಕು ಸಂಚಾಲಕ ರೊನಾಲ್ಡ್ ರಾಜೇಶ್ ಕ್ವಾಡ್ರಸ್ ಪ್ರಾಸ್ತಾವಿಕವಾಗಿ ಮಾತನಾಡುತ್ತಾ ಸುರಕ್ಷತೆ, ಸಾಮಾಜಿಕ ಭದ್ರತೆಗಾಗಿ ಕಟ್ಟಡ ಕಾರ್ಮಿಕರಿಗೆ ಕಲ್ಯಾಣ ಮಂಡಳಿಯಿಂದ ದೊರಕುವ ವಿವಿಧ ಸೌಲಭ್ಯ ಹಾಗೂ ಆನ್ ಲೈನ್ ಅರ್ಜಿ ಸಲ್ಲಿಸುವ ವಿಧಾನದ ಕುರಿತು ವಿವರಿಸಿದರು. ಸಿಐಟಿಯು ತಾಲೂಕು ಸಂಚಾಲಕ ಉದಯ ಗಾಣಿಗ ಮೊಗೇರಿ ಎಲ್ಲರನ್ನು ಸ್ವಾಗತಿಸಿದರು ಹಾಗೂ ಕಾರ್ಯಕ್ರಮ ನಿರೂಪಿಸಿದರು. ಹಿರಿಯ ಕಾರ್ಮಿಕ ಮುಖಂಡ ಗಣೇಶ್ ಆಚಾರ್ ಹೆರಂಜಾಲ್ ಸಭೆಯ ಅಧ್ಯಕ್ಷತೆ ವಹಿಸಿದ್ದರು.

ಬಿಜೂರು, ಬವಲಾಡಿ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಸಂಘಕ್ಕೆ ನೂತನ ಕಾರ್ಯಕಾರಿ ಸಮಿತಿ ರಚನೆ ಮಾಡಲಾಯಿತು. ನಾಗರಾಜ ದೇವಾಡಿಗ ಬವಲಾಡಿ (ಅಧ್ಯಕ್ಷ), ಶಂಕರ ಆಚಾರ್ ಬವಲಾಡಿ, ಸುಬ್ರಹ್ಮಣ್ಯ ಆಚಾರ್ ಬವಲಾಡಿ (ಉಪಾಧ್ಯಕ್ಷರು), ಸುಬ್ರಹ್ಮಣ್ಯ ಆಚಾರ್, ಹೆರಂಜಾಲ್ (ಕಾರ್ಯದರ್ಶಿ), ನಾಗೇಂದ್ರ ಆಚಾರ್ ಹೆರಂಜಾಲ್, ಸಂತೋಷ ಆಚಾರ್ ಬವಲಾಡಿ. (ಜಂಟಿ ಕಾರ್ಯದರ್ಶಿ) ಗಣೇಶ ಆಚಾರ್, ಹೆರಂಜಾಲ್ (ಕೋಶಾಧಿಕಾರಿ) ಇವರನ್ನು ಸರ್ವಾನುಮತದಿಂದ ಆಯ್ಕೆ ಮಾಡಲಾಯಿತು. ನಾಗೇಂದ್ರ ಆಚಾರ್ ಹೆರಂಜಾಲ್ ವಂದಿಸಿದರು.

ವರದಿ: ವೆಂಕಟೇಶ ಕೋಣಿ

ಶತಮಾನೋತ್ಸವ ಲೇಖನ ಮಾಲೆ-11

'ಕರಡು ಕಾರ್ಯಾಚರಣೆಯ ವೇದಿಕೆ' – 1931

ಮೀರತ್ ವಿಚಾರಣೆ ನಡೆಯುತ್ತಿರುವಾಗಲೇ ಮತ್ತು ಮೀರತ್ ವಿಚಾರಣೆಯ ಆರೋಪಿಗಳು ತಮ್ಮ ಸಾರ್ವತ್ರಿಕ ಹೇಳಿಕೆಯನ್ನು ಬಿಡುಗಡೆ ಮಾಡುವ ಮುಂಚೆಯೇ, ಭಾರತ ಕಮ್ಯುನಿಸ್ಟ್ ಪಕ್ಷವು ತನ್ನ 'ಕರಡು ಕಾರ್ಯಾಚರಣೆಯ ವೇದಿಕೆ'ಯನ್ನು ಪ್ರಕಟಿಸಿತ್ತು. ಈ ಕರಡಿನ ಪ್ರತಿಗಳನ್ನು ಭಾರತ ರಾಷ್ಟ್ರೀಯ ಕಾಂಗ್ರೆಸ್ಸಿನ ಮಾರ್ಚ್ 1931 ರ ಕರಾಚಿ ಮಹಾಧಿವೇಶನದಲ್ಲಿ ವ್ಯಾಪಕವಾಗಿ ವಿತರಿಸಲಾಗಿತ್ತು. ಈ ಕರಡಿನ ಮೂಲಪಠ್ಯವನ್ನು ಇಡಿಯಾಗಿ ಕಾಮಿಂಟರ್ನ್‌ನ ಪತ್ರಿಕೆಯಾದ ಇಂಪ್ರೆಕೊರ್‌ನಲ್ಲಿ ಪ್ರಕಟಿಸಲಾಗಿತ್ತು. ಮಾರ್ಕ್ಸ್‌ವಾದ ಮತ್ತು ಲೆನಿನ್‌ವಾದದ ಆಧಾರದಲ್ಲಿ, ಸಾಮ್ರಾಜ್ಯಶಾಹಿ ವಿರೋಧಿ ಹೋರಾಟದ ಗೆಲುವನ್ನು ಕಾರ್ಷಿಕ ಕ್ರಾಂತಿ ಮತ್ತು ಎಲ್ಲಾ ಸಾಮಾಜಿಕ ಅಸಮಾನತೆಯ ನಿರ್ಮೂಲನೆಯೊಂದಿಗೆ ಈ ಕರಡು ತಳಕುಹಾಕಿತ್ತು. ಎಲ್ಲಾ ವಿಭಾಗದವರೂ ಸ್ವಾತಂತ್ರ್ಯ ಹೋರಾಟದಲ್ಲಿ ಭಾಗಿಗಳಾಗುವುದರ ಮೂಲಕ ಸಾಮ್ರಾಜ್ಯಶಾಹಿಯ ವಿರುದ್ಧದ ಈ ಕಾದಾಟದಲ್ಲಿ ಪಾಲ್ಗೊಳ್ಳಬೇಕೆಂದು ಅದು ಕರೆ ಕೊಟ್ಟಿತ್ತು. ಈ 'ಕರಡು ಕಾರ್ಯಾಚರಣೆಯ ವೇದಿಕೆ'ಯಲ್ಲಿರುವ ಕೆಲವು ಉದ್ಧರಣೆಗಳನ್ನು ಈ ಕೆಳಗೆ ನೀಡಲಾಗಿದೆ:

ಕನ್ನಡಕ್ಕೆ: ಟಿ.ಸುರೇಂದ್ರ ರಾವ್



"ಭಾರತದ ಕ್ರಾಂತಿಕಾರಿ ವಿಮೋಚನೆಗೆ ಬ್ರಿಟಿಷ್ ಬಂಡವಾಳಶಾಹಿಯ ವಿರುದ್ಧ ಒಂದು ಕಾರ್ಷಿಕ ಕ್ರಾಂತಿಯು ತಳಹದಿ ಆಗಿರಬೇಕು."

"ರಾಷ್ಟ್ರೀಯ ಸುಧಾರಣಾವಾದದ ಕೈಗಳಿಂದ ಕಾರ್ಮಿಕ ವರ್ಗ, ರೈತಾಪಿ ಜನ ಮತ್ತು ಪಟ್ಟಣದ ಬಡವರ ವಿಮೋಚನೆ ಆಗಬೇಕೆಂದರೆ ಮತ್ತು ಸಾಮ್ರಾಜ್ಯಶಾಹೀ ವಿರೋಧಿ ಹಾಗೂ ಪಾಳೇಗಾರಿ ವಿರೋಧಿ ಕ್ರಾಂತಿಯ ದಿಕ್ಕಿನಲ್ಲಿ ಅವರ ಕ್ರಾಂತಿಕಾರಿ ಹೋರಾಟವನ್ನು ಒಯ್ಯಬೇಕೆಂದರೆ, ಕಾರ್ಮಿಕ ವರ್ಗಕ್ಕೆ ಒಂದು ತನ್ನದೇ ಆದ ಶ್ರಮಿಕರ ಕಮ್ಯುನಿಸ್ಟ್ ಪಕ್ಷದ ಅವಶ್ಯಕತೆಯಿದೆ. ಭಾರತ ಕಮ್ಯುನಿಸ್ಟ್ ಪಕ್ಷವು ಕಾರ್ಮಿಕ ವರ್ಗದ ಪಕ್ಷವಾಗಿದ್ದು, ಅದರ ಅಂತಿಮ ಗುರಿಯು ಸಮಾಜವಾದವನ್ನು ಮತ್ತು ಅಂತಿಮವಾಗಿ ಸಮತಾವಾದವನ್ನು ಸಾಧಿಸುವುದೇ ಆಗಿದೆ. ಭಾರತ ಕಮ್ಯುನಿಸ್ಟ್ ಪಕ್ಷದ ಕಾರ್ಯಕ್ರಮವು ಬೇರೆಲ್ಲಾ ಪಕ್ಷಗಳ ಮತ್ತು ಗುಂಪುಗಳ ಕಾರ್ಯಕ್ರಮಗಳು ಮತ್ತು ಚಿಂತನೆಗಳಿಗಿಂತ ಸಂಪೂರ್ಣವಾಗಿ ಬೇರೆಯೇ ಇರುತ್ತದೆ; ಆ ಪಕ್ಷಗಳು ಬಂಡವಾಳಶಾಹಿಗಳ ಮತ್ತು ಪುಟ್ಟ ಬಂಡವಾಳಶಾಹಿಗಳ ಪಕ್ಷಗಳಾಗಿವೆ. ಆ ಪಕ್ಷಗಳು ಭಾರತದಲ್ಲಿ ಬಂಡವಾಳಶಾಹಿಯನ್ನು ಬೆಳೆಸಲು ಪ್ರಯತ್ನಿಸುತ್ತವೆ, ಕಮ್ಯುನಿಸ್ಟ್ ಪಕ್ಷವು ಒಂದು ಸಮಾಜವಾದೀ ಅಭಿವೃದ್ಧಿ ಪಥವನ್ನು ಬೆಳೆಸಲು ನಿರಂತರವಾಗಿ ಮತ್ತು ದೃಢತೆಯಿಂದ ಹೋರಾಡುತ್ತದೆ."

"ಈ ಮಾರ್ಗದರ್ಶಕ ತತ್ವಗಳನ್ನು ಅಳವಡಿಸಿಕೊಂಡು, ಭಾರತೀಯ ಕ್ರಾಂತಿಯ ಇಂದಿನ ಘಟ್ಟಕ್ಕೆ ಅನುಸಾರವಾಗಿ ಈ ಕೆಳಗಿನ ಪ್ರಧಾನ ಉದ್ದೇಶಗಳನ್ನು ಸಿಪಿಐ ಮುಂದಿಡುತ್ತದೆ:

1. ಬ್ರಿಟಿಷ್ ಆಳ್ವಿಕೆಯನ್ನು ಹಿಂಸಾತ್ಮಕವಾಗಿ ಕಿತ್ತೊಗೆಯುವ ಮೂಲಕ ಭಾರತದ ಸಂಪೂರ್ಣ ವಿಮೋಚನೆ. ಎಲ್ಲಾ ಋಣಭಾರವನ್ನು ರದ್ದುಗೊಳಿಸುವುದು. ಬ್ರಿಟಿಷರ ಎಲ್ಲಾ ಕಾರ್ಖಾನೆಗಳು, ಬ್ಯಾಂಕುಗಳು, ರೈಲ್ವೇಗಳು, ಸಮುದ್ರ ಹಾಗೂ ನದಿ ಸಾರಿಗೆ ಮತ್ತು ತೋಟಗಳನ್ನು ಮುಟ್ಟುಗೋಲು ಹಾಕಿಕೊಳ್ಳುವುದು ಮತ್ತು ರಾಷ್ಟ್ರೀಕರಣ ಮಾಡುವುದು.

2. ಒಂದು ಸೋವಿಯತ್ ಸರ್ಕಾರವನ್ನು ಸ್ಥಾಪಿಸುವುದು. ಪ್ರತ್ಯೇಕವಾಗುವುದನ್ನೂ ಒಳಗೊಂಡಂತೆ ರಾಷ್ಟ್ರೀಯ ಅಲ್ಪಸಂಖ್ಯಾತರ ಸ್ವಯಂನಿರ್ಧಾರದ ಹಕ್ಕನ್ನು ಸಾಕಾರಗೊಳಿಸುವುದು. ದೇಶೀಯ ಸಂಸ್ಥಾನಗಳನ್ನು ರದ್ದುಮಾಡುವುದು. ಭಾರತೀಯ ಕಾರ್ಮಿಕರ ಮತ್ತು ರೈತರ ಒಕ್ಕೂಟದ ಸೋವಿಯತ್ ಗಣತಂತ್ರವನ್ನು ನಿರ್ಮಿಸುವುದು.

3. ಭೂಮಾಲಕರ, ಆಳರಸರ, ಚರ್ಚುಗಳ, ಬ್ರಿಟಿಷ್ ಸರ್ಕಾರದ, ಅಧಿಕಾರಿಗಳ ಮತ್ತು ಲೇವಾದೇವಿಗಾರರ ಎಲ್ಲಾ ಜಮೀನುಗಳನ್ನು, ಅರಣ್ಯಗಳನ್ನು ಮತ್ತಿತರ ಆಸ್ತಿಗಳನ್ನು ಯಾವುದೇ ಪರಿಹಾರ ನೀಡದೆ ಮುಟ್ಟುಗೋಲು ಹಾಕಿಕೊಳ್ಳುವುದು ಮತ್ತು ದುಡಿಯುವ ರೈತರ ಬಳಕೆಗೆ ವಹಿಸಿಕೊಡುವುದು. ಗುಲಾಮಿ ಒಪ್ಪಂದಗಳನ್ನು ಮತ್ತು ಲೇವಾದೇವಿಗಾರರಿಗೆ ಮತ್ತು ಬ್ಯಾಂಕುಗಳಿಗೆ ರೈತರು ಕೊಡಬೇಕಾದ ಎಲ್ಲಾ ಸಾಲಗಳನ್ನು ರದ್ದುಮಾಡುವುದು.

4. ಎಂಟು ಗಂಟೆಗಳ ಕೆಲಸ ಮತ್ತು ಕಾರ್ಮಿಕರ ಪರಿಸ್ಥಿತಿಯನ್ನು ಆಮೂಲಾಗ್ರವಾಗಿ ಉತ್ತಮಪಡಿಸುವುದು. ಕೂಲಿಯಲ್ಲಿ ಹೆಚ್ಚಳ ಮತ್ತು ನಿರುದ್ಯೋಗಿಗಳಿಗೆ ಪ್ರಭುತ್ವವು ಜೀವನೋಪಾಯ ಒದಗಿಸುವುದು.

"ಭಾರತ ಕಮ್ಯುನಿಸ್ಟ್ ಪಕ್ಷವು, ಒಟ್ಟು ಜನಸಮುದಾಯದ ಹಿತಾಸಕ್ತಿಗಳನ್ನು ವ್ಯಕ್ತಪಡಿಸುವ ಈ ಪ್ರಮುಖ ಹಕ್ಕೊತ್ತಾಯಗಳಿಗಾಗಿ ಹೋರಾಡುತ್ತದೆ; ಮತ್ತು ಇವುಗಳ ಸಾಧನೆಯಿಂದ ಭಾರತದಲ್ಲಿ ಸಮಾಜವಾದಿ ಪ್ರಭುತ್ವವನ್ನು ನಿರ್ಮಾಣ ಮಾಡುವ ದಿಕ್ಕಿನಲ್ಲಿ ಪರಿಸ್ಥಿತಿಗಳು ಸೃಷ್ಟಿಯಾಗುತ್ತವೆ ಮತ್ತು ಬೆಳವಣಿಗೆಗಳು ಸಾಧ್ಯವಾಗುತ್ತವೆ"

"ಸಾಮ್ರಾಜ್ಯಶಾಹಿಗಳು, ಭೂಮಾಲಕರು, ಲೇವಾದೇವಿಗಾರರು ಮತ್ತು ಬಂಡವಾಳಶಾಹಿಗಳ ವಿರುದ್ಧ ಒಂದು ಸಂಯುಕ್ತ ರಂಗವನ್ನು ರಚಿಸಬೇಕೆಂದು ಭಾರತದ ಕಮ್ಯುನಿಸ್ಟ್ ಪಕ್ಷವು ಶ್ರಮಜೀವಿಗಳಿಗೆ ಕರೆ ಕೊಡುತ್ತದೆ. ಮತ್ತು ವಿವಿಧ ರಾಷ್ಟ್ರೀಯತೆಗಳ ಹಾಗೂ ಧಾರ್ಮಿಕ ನಂಬಿಕೆಗಳ ಶ್ರಮಜೀವಿಗಳನ್ನು ಒಬ್ಬರಮೇಲೆ ಒಬ್ಬರನ್ನು ಎತ್ತಿಕಟ್ಟಿ ಅವರ ನಡುವೆ ತಿಕ್ಕಾಟಗಳನ್ನು ಹುಟ್ಟುಹಾಕುವ ಬ್ರಿಟಿಷ್ ಸರ್ಕಾರದ ಮತ್ತು ಪ್ರತಿಗಾಮಿ ಸ್ಥಳೀಯ ಶೋಷಕರ ವಂಚನೆಯ ಪ್ರಚೋದನಕಾರಿ ವಿಧಾನಗಳಿಂದ ಮೋಸ ಹೋಗದಿರುವಂತೆ ಮುಸ್ಲಿಮರು ಮತ್ತು ಭಾರತದ ಕಾರ್ಮಿಕರು ಹಾಗೂ ರೈತರಿಗೆ ಭಾರತ ಕಮ್ಯುನಿಸ್ಟ್ ಪಕ್ಷವು ಕರೆನೀಡುತ್ತದೆ. ಬ್ರಿಟಿಷರು ಹಾಗೂ ನಮ್ಮದೇ ಶೋಷಕರ ಕೈಯಿಂದ ಸಮಾನವಾಗಿ ನರಳುತ್ತಿರುವ ದಮನಿತರ ಕ್ರಾಂತಿಕಾರಿ ಸಂಯುಕ್ತ ರಂಗದಲ್ಲಿ ಗೊಂದಲ ಎಬ್ಬಿಸಿ ಒಡಕುಂಟುಮಾಡುವುದಕ್ಕೆ ಆಸ್ಪದ ನೀಡಬಾರದೆಂದು ಅಸ್ಪೃಶ್ಯರನ್ನೂ(ಅಂತ್ಯಜರನ್ನೂ) ಒಳಗೊಂಡಂತೆ ಎಲ್ಲಾ ಶ್ರಮಜೀವಿಗಳಿಗೆ ಭಾರತ ಕಮ್ಯುನಿಸ್ಟ್ ಪಕ್ಷವು ಕರೆ ನೀಡುತ್ತದೆ."

"ಭಾರತ ಕಮ್ಯುನಿಸ್ಟ್ ಪಕ್ಷವು ಕಾರ್ಮಿಕ ವರ್ಗದ ರಾಜಕೀಯ ಹಾಗೂ ಆರ್ಥಿಕ ಹಕ್ಕೊತ್ತಾಯಗಳಿಗಾಗಿ ಸಾಮೂಹಿಕ ಕ್ರಾಂತಿಕಾರಿ ಚಟುವಟಿಕೆಗಳನ್ನು ಮತ್ತು ಹೋರಾಟಗಳನ್ನು ಬೆಳೆಸಲು, ತೆರಿಗೆಗಳು, ಕರಗಳು, ಗೇಣಿ ಋಣಗಳನ್ನು, ನಿರ್ದಿಷ್ಟವಾಗಿ, ದೊಡ್ಡ ಭೂಹಿಡುವಳಿಗಳಿರುವ ಜಿಲ್ಲೆಗಳಲ್ಲಿ, ತೆರಲು ರೈತರಿಂದ ಸಾಮೂಹಿಕ ನಿರಾಕರಣೆಗೆ, ಈ ಮೂಲಕ ಶ್ರಮಿಕ ಜನಸಮೂಹಗಳನ್ನು ಅಣಿನೆರೆಸಲು ಮತ್ತು ಸಾಮ್ರಾಜ್ಯಶಾಹಿಗಳ ವಿರುದ್ಧ ಕ್ರಾಂತಿಕಾರಿ ಹೋರಾಟಗಳಿಗೆ ಸಿದ್ಧಗೊಳಿಸಲು ತನ್ನ ಬೆಂಬಲಿಗರು ಹಾಗೂ ಸಂಘಟನೆಗಳಿಗೆ ಕರೆ ನೀಡುತ್ತದೆ. ವರ್ಗಪ್ರಜ್ಞೆ ಇರುವ ಕಾರ್ಮಿಕರು ಮತ್ತು ಕ್ರಾಂತಿಕಾರಿಗಳು ಸ್ವಾತಂತ್ರ್ಯಕ್ಕಾಗಿನ ಜನಸಮುದಾಯದ ಕ್ರಾಂತಿಕಾರಿ ಹೋರಾಟವನ್ನು ಸಂಘಟಿಸುವಲ್ಲಿ ಒಂದು ದೃಢವಾದ ಹೆಜ್ಜೆಯಾಗಿ, ಕಾರ್ಮಿಕರ ಬಿಡಿ-ಬಿಡಿಯಾದ ಮುಷ್ಕರಗಳನ್ನು ಒಂದು ಸಾರ್ವತ್ರಿಕ ರಾಜಕೀಯ ಮುಷ್ಕರವನ್ನಾಗಿ ಮಾರ್ಪಾಟು ಮಾಡಲು ಸಹಾಯ ಮಾಡಬೇಕೆಂದು ಎಂದು ಭಾರತ ಕಮ್ಯುನಿಸ್ಟ್ ಪಕ್ಷ ಕರೆ ನೀಡುತ್ತದೆ."

ಸಾಮಾನ್ಯ ಹಕ್ಕೊತ್ತಾಯಗಳು

"ಸಾಮೂಹಿಕ ಕ್ರಾಂತಿಕಾರಿ ಹೋರಾಟಗಳನ್ನು ಬೆಳೆಸುವ ಮತ್ತು ಜನರಿಗೆ ರಾಜಕೀಯ ತರಬೇತಿ ನೀಡುವ ಸಲುವಾಗಿ, ಭಾರತ ಕಮ್ಯುನಿಸ್ಟ್ ಪಕ್ಷವು ಈ ಕೆಳಗಿನ ಹಕ್ಕೊತ್ತಾಯಗಳನ್ನು ಮಂಡಿಸುತ್ತದೆ ಮತ್ತು ಅವುಗಳಿಗಾಗಿ ಹೋರಾಡುತ್ತದೆ:

1. ಬ್ರಿಟಿಷ್ ಸೈನ್ಯವನ್ನು ಉಚ್ಚಾಟಿಸಬೇಕು.

2. ಎಲ್ಲಾ ರಾಜಕೀಯ ಖೈದಿಗಳನ್ನು ಕೂಡಲೇ ಬಿಡುಗಡೆ ಮಾಡಬೇಕು.

3. ಶ್ರಮಜೀವಿಗಳಿಗೆ ಅನಿರ್ಬಂಧಿತ ವಾಕ್, ಆತ್ಮಸಾಕ್ಷಿಯ, ಪತ್ರಿಕಾ, ಸಭೆಗಳ, ಮುಷ್ಕರಗಳ ಮತ್ತು ಸಾಂಘಿಕ ಸ್ವಾತಂತ್ರ್ಯ ಮತ್ತು ಎಲ್ಲಾ ಜನಗಳ-ವಿರೋಧಿ ಹಾಗೂ ಕಾರ್ಮಿಕ-ವಿರೋಧಿ ಕಾನೂನುಗಳನ್ನು(ಟ್ರೇಡ್ ಡಿಸ್ಪ್ಯೂಟ್ ಕಾಯಿದೆ, ಪಿಕೆಟಿಂಗ್ ನಿರ್ಬಂಧ, ಕ್ರಾಂತಿಕಾರಿ ಕಾರ್ಮಿಕರ ಗಡೀಪಾರು ನಿಯಮಗಳು, ಪತ್ರಿಕಾ ಕಾಯಿದೆ, ಇತ್ಯಾದಿಗಳನ್ನು) ರದ್ದುಮಾಡಬೇಕು.

4. ಶ್ರೇಣಿ, ಜಾತಿ, ರಾಷ್ಟ್ರೀಯ ಹಾಗೂ ಕೋಮು ಸೌಲಭ್ಯಗಳನ್ನು ರದ್ದುಮಾಡಬೇಕು ಮತ್ತು ಲಿಂಗ, ಧರ್ಮ ಮತ್ತು ಜನಾಂಗಗಳನ್ನು ಪರಿಗಣಿಸದೆ ಎಲ್ಲಾ ಪ್ರಜೆಗಳಿಗೂ ಸಂಪೂರ್ಣ ಸಮಾನತೆ.

5. ಪ್ರಭುತ್ವದಿಂದ ಧರ್ಮವನ್ನು ಸಂಪೂರ್ಣವಾಗಿ ಬೇರ್ಪಡಿಸಬೇಕು.

6. ನ್ಯಾಯಾಧೀಶರುಗಳು ಮತ್ತು ಅಧಿಕಾರಿಗಳ ಚುನಾವಣೆ ಮತ್ತು ಯಾವಾಗ ಬೇಕಾದರೂ ಬಹುಮತದ ಮತದಾರರ ಒತ್ತಾಯದ ಮೇರೆಗೆ ಅವರನ್ನು ಹಿಂದಕ್ಕೆ ಕರೆಸಿಕೊಳ್ಳುವುದು.

ಭಾರತ ಕಮ್ಯುನಿಸ್ಟ್ ಪಕ್ಷವು ಈ ಕೆಳಗಿವುಗಳಿಗಾಗಿ ಹೋರಾಡುತ್ತದೆ:

1. ಕೆಲಸದ ಅವಧಿಯನ್ನು ವಯಸ್ಕರಿಗೆ 8 ಗಂಟೆಗೆ ಮತ್ತು 16 ರಿಂದ 20 ವರ್ಷದ ಯುವಜನರಿಗೆ 6 ಗಂಟೆಗೆ ಮಿತಿಗೊಳಿಸಬೇಕು. ಕಲ್ಲಿದ್ದಲು ಗಣಿಯಂತಹ ಹಾನಿಕಾರಕ ಉದ್ದಿಮೆಗಳಲ್ಲಿ 6 ಗಂಟೆ ಕೆಲಸದ ದಿನವನ್ನು ಆರಂಭಿಸಬೇಕು ಮತ್ತು ಈ ಉದ್ದಿಮೆಗಳ ಕಾರ್ಮಿಕರಿಗೆ ಹಾಲು ಮತ್ತು ಬೆಣ್ಣೆಯನ್ನು ಒದಗಿಸಬೇಕು.

2. ಮತಪ್ರದರ್ಶನ, ಪಿಕೆಟಿಂಗ್ ಮತ್ತು ಮುಷ್ಕರ ಮಾಡಲು ಕಾರ್ಮಿಕ ಸಂಘಗಳಿಗೆ ಸಂಪೂರ್ಣ ಸ್ವಾತಂತ್ರ್ಯ ಇರಬೇಕು.

3. ಮಹಿಳೆಯರು, ಯುವಜನರು ಮತ್ತು ಪುರುಷರಿಗೆ ಸಮಾನ ಕೆಲಸಕ್ಕೆ ಸಮಾನ ವೇತನ ಇರಬೇಕು.

4. ಕಡ್ಡಾಯ ಗುತ್ತಿಗೆ ಕೆಲಸ ಮತ್ತು ಕಾನೂನಾತ್ಮಕ ಜೀತ ವ್ಯವಸ್ಥೆಗಳು ಸಂಪೂರ್ಣವಾಗಿ ರದ್ದಾಗಬೇಕು.

5. ಪೂರ್ಣ ವೇತನದೊಂದಿಗೆ ಕಡ್ಡಾಯ ವಾರದ ವಿಶ್ರಾಂತಿ ಮತ್ತು ವಯಸ್ಕರಿಗೆ 4 ವಾರಗಳ ಹಾಗೂ ಯುವಜನರಿಗೆ 6 ವಾರಗಳ ಸಂಬಳ ಸಹಿತ ವಾರ್ಷಿಕ ರಜೆ ನೀಡಬೇಕು.

6. ನಿರುದ್ಯೋಗ, ಅನಾರೋಗ್ಯ, ಅಪಘಾತ, ಕೈಗಾರಿಕಾ ರೋಗಗಳು, ವೃದ್ಧಾಪ್ಯ, ಕೆಲಸದ ಸಾಮರ್ಥ್ಯದ ನಷ್ಟ, ಅನಾಥಾಲಯ ಇವುಗಳಿಗೆ ಪ್ರಭುತ್ವ ವಿಮೆ ಇರಬೇಕು ಮತ್ತು ಅಶಕ್ತತೆಗೆ ಪರಿಹಾರ ನೀಡಬೇಕು.

"ನಮ್ಮ ದೇಶದಲ್ಲಿ ಬ್ರಿಟಿಷ್ ಸಾಮ್ರಾಜ್ಯಶಾಹಿಯ ಪರಿಣಾಮದಿಂದಾಗಿ ಲಕ್ಷಾಂತರ ಜನ ಗುಲಾಮರು ಮತ್ತು ಹತ್ತಾರು ಲಕ್ಷ ಸಾಮಾಜಿಕವಾಗಿ ಬಹಿಷ್ಕೃತ ಅಸ್ಪೃಶ್ಯರು ಇನ್ನೂ ಬದುಕಿದ್ದಾರೆ, ಎಲ್ಲಾ ಹಕ್ಕುಗಳಿಂದ ವಂಚಿತರಾಗಿದ್ದಾರೆ. ಬ್ರಿಟಿಷ್ ಆಳ್ವಿಕೆ, ಭೂಮಾಲಕ ಪದ್ಧತಿ, ಪ್ರತಿಗಾಮಿ ಜಾತಿ ಪದ್ಧತಿ, ಧಾರ್ಮಿಕ ವಂಚನೆ ಮತ್ತು ಗುಲಾಮಿ ಹಾಗೂ ಜೀತ ಪದ್ಧತಿಗಳು ಭಾರತದ ಜನರ ಉಸಿರುಗಟ್ಟಿಸುತ್ತಿವೆ ಮತ್ತು ಅವರ ವಿಮೋಚನೆಗೆ ಅಡ್ಡ ಬರುತ್ತಿವೆ. ಇವುಗಳ ಫಲಿತಾಂಶವಾಗಿ 20ನೇ ಶತಮಾನದ ಭಾರತದಲ್ಲಿ ಇನ್ನೂ ಅಸ್ಪೃಶ್ಯರಿದ್ದಾರೆ, ಅವರಿಗೆ ತಮ್ಮ ಸಹ-ಮಾನವರೊಂದಿಗೆ ಸೇರುವ, ಸಾರ್ವಜನಿಕ ಬಾವಿಗಳಿಂದ ನೀರು ಕುಡಿಯುವ, ಶಾಲೆಗಳಲ್ಲಿ ಸಮಾನ ಶಿಕ್ಷಣ ಪಡೆಯುವ ಇತ್ಯಾದಿ ಇತ್ಯಾದಿ ಹಕಕು ಇಲ್ಲವಾಗಿದೆ.."

"ಜಾತಿಪದ್ಧತಿಯ ನಿರ್ದಯ ಮೂಲೋತ್ಪಾಟನೆ ಮಾತ್ರವೇ.....ಕಾರ್ಷಿಕ ಕ್ರಾಂತಿ ಮತ್ತು ಬ್ರಿಟಿಷ್ ಆಳ್ವಿಕೆಯ ಹಿಂಸಾತ್ಮಕ ಕಿತ್ತೊಗೆತ ಮಾತ್ರವೇ ಅಸ್ಪೃಶ್ಯರು ಮತ್ತು ಗುಲಾಮರ ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ ಹಾಗೂ ಕಾನೂನುಬದ್ಧ ವಿಮೋಚನೆಗೆ ದಾರಿ ಮಾಡಿಕೊಡುತ್ತದೆ."

"ಬ್ರಿಟಿಷ್ ಆಳ್ವಿಕೆ ಮತ್ತು ಭೂಮಾಲಕತ್ವದ ವಿರುದ್ಧ ದೇಶದ ಎಲ್ಲಾ ಕಾರ್ಮಿಕರೊಂದಿಗೆ ಸಂಯುಕ್ತ ಕ್ರಾಂತಿಕಾರಿ ರಂಗವನ್ನು ಸೇರಬೇಕೆಂದು ಎಲ್ಲಾ ಅಸ್ಪೃಶ್ಯರಿಗೂ ಭಾರತ ಕಮ್ಯುನಿಸ್ಟ್ ಪಕ್ಷವು ಕರೆ ಕೊಡುತ್ತದೆ."

"ಗುಲಾಮ ಪದ್ಧತಿ, ಜಾತಿ ಪದ್ಧತಿ ಮತ್ತು ಜಾತಿ ಪದ್ಧತಿಯ ಎಲ್ಲಾ ಅಸಮಾನತೆಗಳ(ಸಾಮಾಜಿಕ, ಸಾಂಸ್ಕೃತಿಕ ಇತ್ಯಾದಿ) ಸಂಪೂರ್ಣ ಮೂಲೋತ್ಪಾಟನೆಗೆ ಭಾರತ ಕಮ್ಯುನಿಸ್ಟ್ ಪಕ್ಷ ಕರೆ ನೀಡುತ್ತದೆ. ನಮ್ಮ ದೇಶದ ದುಡಿಯುತ್ತಿರುವ ಅಸ್ಪೃಶ್ಯರು ಮತ್ತು ಶ್ರಮಜೀವಿಗಳ ಸಂಪೂರ್ಣ ಹಾಗೂ ದೋಷರಹಿತ ಸಮಾನತೆಗಾಗಿ ಭಾರತದ ಕಮ್ಯುನಿಸ್ಟ್ ಪಕ್ಷ ಹೋರಾಡುತ್ತದೆ.

"ಭಾರತದ ಶ್ರಮಜೀವಿ ಮಹಿಳೆಯರು ಅರೆ ಗುಲಾಮಿ ಸ್ಥಿತಿಯಲ್ಲಿ ಪಾಳೇಗಾರಿ ಅವಶೇಷಗಳ, ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ ಮತ್ತು ಕಾನೂನುಬದ್ಧ ಅಸಮಾನತೆಯ ದುಪ್ಪಟ್ಟು ಹೊರೆಯ ಅಡಿಯಲ್ಲಿ ಇದ್ದಾರೆ. ತಮ್ಮ ಭವಿಷ್ಯವನ್ನು ತಾವೇ ನಿರ್ಧರಿಸುವ

ಪುಟ 14 ಕ್ಕೆ

ಸರಿಯಾದ ಕಾರ್ಯಕ್ರಮವನ್ನು ಮಂಡಿಸುವಾಗಲೇ, ಈ ಕಾರ್ಯಾಚರಣೆಯ ವೇದಿಕೆಯು ಕೆಲವು ದೋಷಗಳನ್ನು ಮತ್ತು ತಪ್ಪು ತಿಳುವಳಿಕೆಯನ್ನು ಒಳಗೊಂಡಿತ್ತು. ಸಾಮ್ರಾಜ್ಯಶಾಹಿ, ಭೂಮಾಲೀಕರು, ಲೇವಾದೇವಿಗಾರರು ಮತ್ತ ಬಂಡವಳಗರ ವಿರುದ್ಧ ಒಂದು ಸಂಯುಕ್ತ ರಂಗವನ್ನು ರಚಿಸಬೇಕೆಂದು ಅದು ಶ್ರಮಜೀವಿಗಳಿಗೆ ಕರೆ ಕೊಟ್ಟಿತ್ತು. ಆದ್ದರಿಂದ, ಸಾಮ್ರಾಜ್ಯಶಾಹಿ- ವಿರೋಧಿ ಸಂಯುಕ್ತ ರಂಗದಿಂದ ಅದು ಸಾಮ್ರಾಜ್ಯಶಾಹಿ, ಪಾಳೇಗಾರಿ ಪದ್ಧತಿ ಮತ್ತು ಬಂಡವಾಳಶಾಹಿಯ ವಿರುದ್ಧ ರಂಗದ ರಚನೆಗೆ ಬಂದು ಮುಟ್ಟಿತು. ಈ ತಿಳುವಳಿಕೆಯಿಂದ ಅದು ಸೋವಿಯತ್ ಅಧಿಕಾರದ ಸ್ಥಾಪನೆಗೆ ಕರೆ ನೀಡಿತು. ನಂತರದಲ್ಲಿ 1934 ರಲ್ಲಿ ಕಾರ್ಯಕ್ರಮಾತ್ಮಕ ದಸ್ತಾವೇಜನ್ನು ಅಂಗೀಕರಿಸುವುದರೊಂದಿಗೆ ಈ ತಪ್ಪುಗಳನ್ನು ಸರಿಪಡಿಸಲಾಯಿತು. ಆದರೆ ಬಿ.ಟಿ.ರಣದಿವೆ ಹೇಳಿದಂತೆ:"ನೇರವಾಗಿ ಭಾರತೀಯ ಜನಗಳ ಎಲ್ಲಾ ವಿಭಾಗಗಳ ಸಮಸ್ಯೆಗಳನ್ನು ಮತ್ತು ಕ್ರಾಂತಿಕಾರಿ ಹೋರಾಟದ ತಕ್ಷಣದ ಅಗತ್ಯಗಳನ್ನು ಉದ್ದೇಶಿಸಿದ ಇಂತಹ ಒಂದು ಕ್ರಾಂತಿಕಾರಿ ದಸ್ತಾವೇಜನ್ನು ಭಾರತವು ಹಿಂದೆಂದಿಗೂ ಕಂಡಿರಲಿಲ್ಲ."

ಸಿಪಿಐ(ಎಂ) ಪೊಲಿಟ್‌ಬ್ಯುರೊ ಹೇಳಿಕೆ

ಪುಟ 2 ರಿಂದ

ಮಾಡಿದೆ. ಹೀಗೆ ಮಾಡುವ ಮೂಲಕ ಮಾತ್ರವೇ ಅವರು ಎನ್‌ಆರ್‌ಸಿ ಜಾರಿಯಾಗದಂತೆ ನಿಲ್ಲಿಸಲು ಸಾಧ್ಯ ಎಂದು ಅದು ಹೇಳಿದೆ.

ಸಿಎಎ–ಎನ್‌ಪಿಆರ್–ಎನ್‌ಆರ್‌ಸಿ ವಿರುದ್ಧ ದೇಶಾದ್ಯಂತ ಶಾಂತಿಯುತ ಪ್ರತಿಭಟನಾ ಚಳುವಳಿಯನ್ನು ಉಳಿಸಿಕೊಳ್ಳುವ ಮತ್ತು ಮುನ್ನಡೆಸುವ ದಾರಿಗಳು ಮತ್ತು ಸಾಧನಗಳ ಬಗ್ಗೆ ಚರ್ಚಿಸಿದ ಪೊಲಿಟ್‌ಬ್ಯುರೊ ಈ ಆಂದೋಲನವನ್ನು ಒಂದುಗೂಡಿ ಮುಂದಕ್ಕೆ ಒಯ್ಯೋಣ ಎಂದು ಎಲ್ಲ ಜಾತ್ಯತೀತ ಮತ್ತು ಜನವಾದಿ ಶಕ್ತಿಗಳಿಗೆ ಕರೆ ನೀಡಿದೆ.

ಜಮ್ಮು ಮತ್ತು ಕಾಶ್ಮೀರದಲ್ಲಿ ನಿರ್ಬಂಧಗಳನ್ನು ತೆಗೆಯಬೇಕು

ಕಲಮು 370ನ್ನು ರದ್ದುಗೊಳಿಸಿ ಹಾಗು ಜಮ್ಮು ಮತ್ತು ಕಾಶ್ಮೀರ ರಾಜ್ಯವನ್ನು ಕಳಚಿ ಹಾಕಿದ ಐದು ತಿಂಗಳುಗಳ ನಂತರವೂ ಕಾಶ್ಮೀರದ ಜನತೆ ವಿವಿಧ ಹಕ್ಕುಗಳು ಮತ್ತು ಸ್ವಾತಂತ್ರ್ಯಗಳಿಂದ ವಂಚಿತರಾಗಿದ್ದಾರೆ. ನೂರಾರು ಮುಖಂಡರು ಮತ್ತು ಕಾರ್ಯಕರ್ತರು ಸ್ಥಾನಬದ್ಧತೆಯಲ್ಲಿದ್ದಾರೆ, ಸಭೆ ಸೇರುವ ಹಕ್ಕನ್ನು ನಿರಾಕರಿಸಲಾಗಿದೆ, ಮತ್ತು ಇಂಟರ್ನೆಟ್ ಸಂಪರ್ಕವನ್ನು ಕಡಿದಿಡಲಾಗಿದೆ.

ಸುಪ್ರಿಂ ಕೋರ್ಟ್ ತೀರ್ಪಿನ ಭಾವಕ್ಕೆ ಅನುಗುಣವಾಗಿ ಇಂಟರ್ನೆಟ್ ಸಂರ್ಕವನ್ನು ಮತ್ತೆ ನೆಲೆಗೊಳಿಸಬೇಕು ಎಂದು ಆಗ್ರಹಿಸಿರುವ ಪೊಲಿಟ್‌ಬ್ಯುರೊ ಎಲ್ಲ ನಿರ್ಬಂಧಗಳನ್ನು ತೆಗೆಯಬೇಕು, ಮತ್ತು ರಾಜಕೀಯ ಮುಖಂಡರ ಮೇಲಿನ ಸ್ಥಾನಬದ್ಧತೆಯನ್ನು ರದ್ದು ಮಾಡಬೇಕು ಎಂದು ಆಗ್ರಹಿಸಿದೆ.

ಜೆಎನ್‌ಯು ಮೇಲೆ ದಾಳಿ–ತನಿಖೆಯಲ್ಲಿ ದಿಲ್ಲಿ ಪೋಲೀಸರ ಪಕ್ಷಪಾತ

ಎಬಿವಿಪಿ–ಆರೆಸ್ಸೆಸ್ ಪುಂಡರು ಜನವರಿ 5ರಂದು ಹರಿಯಬಿಟ್ಟ ಹಿಂಸಾಚಾರವನ್ನು ಪೊಲಿಟ್‌ಬ್ಯುರೊ ಖಂಡಿಸಿದೆ. ಈ ಹಿಂಸಾಚಾರದಲ್ಲಿ ಜೆಎನ್‌ಯು ವಿದ್ಯಾರ್ಥಿ ಸಂಘದ ಅಧ್ಯಕ್ಷೆ ಆಯಿಷಿ ಘೋಷ್ ಸೇರಿದಂತೆ 29 ವಿದ್ಯಾರ್ಥಿಗಳು ಮತ್ತು ಅಧ್ಯಾಪಕರು ಗಾಯಗೊಂಡಿದ್ದಾರೆ. ದಿಲ್ಲಿ ಪೋಲಿಸ್ ಪುಂಡರು ಧಾಂಧಲೆ ನಡೆಸುತ್ತಿರುವುದನ್ನು ಕೈಕಟ್ಟಿ ನಿಂತು ನೋಡುತ್ತಿರುವುದು, ನಂತರ ಅವರಿಗೆ ಕ್ಯಾಂಪಸ್‌ನಿಂದ ಹೊರ ಹೋಗಲು ಅನುಕೂಲ ಮಾಡಿಕೊಡುತ್ತಿರುವ ದೃಶ್ಯ ಆಘಾತಕಾರಿ.

ದಿಲ್ಲಿ ಪೋಲೀಸರ ತನಿಖೆ ಪಕ್ಷಪಾತದಿಂದ ಕೂಡಿದೆ, ಅದು ವಿದ್ಯಾರ್ಥಿ ಸಂಘಕ್ಕೆ ಸೇರಿದ ವಿದ್ಯಾರ್ಥಿ ಕಾರ್ಯಕರ್ತರ ಮೇಲೆಯೇ ಗುರಿ ಮಾಡಿದೆಯೇ ಹೊರತು ನಿಜವಾದ ಅಪರಾಧಿಗಳ ಮೇಲಲ್ಲ. ಮಾನವ ಸಂಪನಮೂಲ ಅಭಿವೃದ್ಧಿ ಮಂತ್ರಾಲಯ ಮಧ್ಯಪ್ರವೇಶಿಸಬೇಕು, ತೀವ್ರ ಶುಲ್ಕ ಏರಿಕೆಗಳನ್ನು ರದ್ದು ಮಾಡಬೇಕು ಎಂದು ಪೊಲಿಟ್‌ಬ್ಯುರೊ ಹೇಳಿದೆ. ಈ ವಿಶ್ವವಿದ್ಯಾಲಯದ ಸ್ವರೂಪವನ್ನು ಧ್ವಂಸ ಮಾಡಲು ಹೊಣೆಗಾರನಾದ ಉಪಕುಲಪತಿಯನ್ನು ತೆಗೆಯಬೇಕು ಎಂದು ಅದು ಆಗ್ರಹಿಸಿದೆ.

ಜನವರಿ 8 ಮುಷ್ಕರ–ಮೋದಿ ಸರಕಾರಕ್ಕೆ ಎಚ್ಚರಿಕೆ

ಜನವರಿ 8ರ ಸಾರ್ವತ್ರಿಕ ಮುಷ್ಕರದ ಕರೆಯನ್ನು ಅತ್ಯಂತ ಯಶಸ್ವಿಗೊಳಿಸಿರುವ ಕಾರ್ಮಿಕ ವರ್ಗ, ನೌಕರರು, ರೈತರು, ಕೃಷಿ ಕೂಲಿಕಾರರು, ವಿದ್ಯಾರ್ಥಿಗಳು ಮತ್ತು ಇತರ ದುಡಿಯುವ ಜನವಿಭಾಗಗಳನ್ನು ಪೊಲಿಟ್‌ಬ್ಯುರೊ ಅಭಿನಂದಿಸಿದೆ. ವಿವಿಧ ಕೈಗಾರಿಕೆಗಳಲ್ಲಿ, ಸಾರ್ವಜನಿಕ ವಲಯದ ಉದ್ದಿಮೆಗಳಲ್ಲಿ, ಹಣಕಾಸು ಮತ್ತು ಅಸಂಘಟಿತ ವಲಯಗಳಲ್ಲಿ ಮುಷ್ಕರ ನಡೆಯಿತು. ದೇಶಾದ್ಯಂತ ಸಾವಿರಾರು ರೈತರು ಮತ್ತು ಕೃಷಿಕೂಲಿಕಾರರು ರಾಸ್ತಾರೋಕೋ, ರೈಲ್‌ರೋಕೋಗಳಲ್ಲಿ ಭಾಗವಹಿಸಿದರು. ಶಾಲೆ, ಕಾಲೇಜು ಮತ್ತು ವಿಶ್ವವಿದ್ಯಾಲಯ ಅಧ್ಯಾಪಕರು ವ್ಯಾಪಕವಾಗಿ ಭಾಗವಹಿಸಿದರು. ಈ ಮುಷ್ಕರ ಕಾರ್ಮಿಕ ವರ್ಗ–ವಿರೋಧಿ, ಜನವಿರೋಧಿ ಧೋರಣೆಗಳನ್ನು ಅನುಸರಿಸದಂತೆ ಮೋದಿ ಸರಕಾರಕ್ಕೆ ನೀಡಿದ ಒಂದು ಎಚ್ಚರಿಕೆ ಎಂದು ಪೊಲಿಟ್‌ಬ್ಯುರೊ ಹೇಳಿದೆ.

ಬೆಲೆಯೇರಿಕೆಯನ್ನು ತಡೆಗಟ್ಟಲು ತಕ್ಷಣ ಕ್ರಮಗಳನ್ನು ಕೈಗೊಳ್ಳಬೇಕು

ಹಣದುಬ್ಬರ ದರ ಏರುತ್ತಿದೆ, ಆಹಾರ ಸಾಮಗ್ರಿಗಳು ಮತ್ತು ಅಗತ್ಯ ಸರಕುಗಳ ಬೆಲೆಗಳು ಏರುತ್ತಿವೆ, ಪೆಟ್ರೋಲ್ ಮತ್ತು ಡೀಸೆಲ್ ಬೆಲೆಗಳ ಏರಿಕೆ ಇದನ್ನು ಮತ್ತಷ್ಟು ಉಲ್ಬಣಗೊಳಿಸಿದೆ ಎಂದು ಪೊಲಿಟ್‌ಬ್ಯುರೊ ಆತಂಕ ವ್ಯಕ್ತಪಡಿಸಿದೆ. ಸರಕಾರ ತಕ್ಷಣವೇ ಬೆಲೆಯೇರಿಕೆ ತಡೆಗಟ್ಟಲು ಕ್ರಮಗಳನ್ನು ಕೈಗೊಳ್ಳಬೇಕು ಮತ್ತು ಪೆಟ್ರೋಲ್ ಮತ್ತು ಡೀಸೆಲ್ ಮೇಲಿನ ಅಬಕಾರಿ ಸುಂಕಗಳನ್ನು ಇಳಿಸಬೇಕು ಎಂದು ಅದು ಸೂಚಿಸಿದೆ.

ಕೇರಳದ ವಿರುದ್ಧ ತಾರತಮ್ಯ ನಿಲುವನ್ನು ಕೇಂದ್ರ ಕೊನೆಗೊಳಿಸಬೇಕು

ಕೇಂದ್ರ ಸರಕಾರ ಕೇರಳದ ಹಣಕಾಸು ಅಗತ್ಯಗಳ ಬಗ್ಗೆ ಒಂದು ತಾರತಮ್ಯದ ಮತ್ತು ನಕಾರಾತ್ಮಕ ನಿಲುವನ್ನು ತಳೆಯುತ್ತಿದೆ. ಕೇರಳ 2019–20ಕ್ಕೆ ರೂ.24,915 ಕೋಟಿ ಸಾರ್ವಜನಿಕ ಸಾಲಕ್ಕೆ ಅರ್ಹವಾಗಿದೆ. ಕೇಂದ್ರ ಸರಕಾರ ಇದನ್ನು 2016–17ರಲ್ಲಿ ಸಾರ್ವಜನಿಕ ಖಾತೆ ಸಾಲ ಹೆಚ್ಚಿದೆ, ಅದನ್ನು ಸರಿಹೊಂದಿಸಬೇಕಾಗಿದೆ ಎನ್ನುತ್ತ ಏಕಪಕ್ಷೀಯವಾಗಿ ರೂ.16,602 ಕೋಟಿಗೆ ಇಳಿಸಿದೆ,

ಡಿಸೆಂಬರ್‌ನಲ್ಲಿ ತೆರಬೇಕಾದ 1600 ಕೋಟಿ ರೂ.ಗಳ ಜಿಎಸ್‌ಟಿ ಪರಿಹಾರವನ್ನು ತೆತ್ತಿಲ್ಲ. ಮನರೇಗ ಸ್ಕೀಮಿನಲ್ಲಿ 1215 ಕೋಟಿ ರೂ. ಬಾಕಿ ಮತ್ತು ಭತ್ತ ಖರೀದಿಗೆ 1035 ಕೋಟಿ ರೂ.ಗಳನ್ನೂ ಅದು ಕೊಡಬೇಕಾಗಿದೆ. ನೈಸರ್ಗಿಕ ವಿಪತ್ತು ಪರಿಹಾರಕ್ಕೆ ರೂ.2100 ಕೋಟಿ ರೂ. ದಾವೆಯನ್ನು ಸಲ್ಲಿಸಿದ್ದರೂ ಯಾವುದೇ ಹಣ ನೀಡದೆ ಕೇರಳವನ್ನು ವಂಚಿಸಲಾಗಿದೆ.

ಕೇಂದ್ರ ತನ್ನ ಈ ತಾರತಮ್ಯದ ನಿಲುವನ್ನು ಕೊನೆಗೊಳಿಸಬೇಕು ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಆಗ್ರಹಿಸಿದೆ. ವಿವಿಧ ಬಾಬ್ತುಗಳಲ್ಲಿ ಕೇರಳಕ್ಕೆ ಸಲ್ಲಬೇಕಾದ ನಿಧಿಗಳು ಸಿಗಬೇಕು. 2019ರಲ್ಲಿ ಗಂಭೀರ ಪ್ರವಾಹವನ್ನು ಅನುಭವಿಸಿರುವ ಕೇರಳಕ್ಕೆ ನೈಸರ್ಗಿಕ ವಿಪತ್ತು ಪರಿಹಾರ ನಿಧಿಯಿಂದಲೂ ಹಣ ಒದಗಿಸಬೇಕು ಎಂದು ಪೊಲಿಟ್‌ಬ್ಯುರೊ ಹೇಳಿದೆ.

ಇರಾನೀ ಸೇನಾಧಿಕಾರಿಯ ಹತ್ಯೆಗೆ ಬಲವಾದ ಖಂಡನೆ

ಇರಾನೀ ಸೇನಾಧಿಕಾರಿ ಖಾಸಿಂ ಸೊಲ್ಯೆಮಾನಿಯವರನ್ನು ಅಮೆರಿಕಾ ಸಂಯುಕ್ತ ಸಂಸ್ಥಾನ ಬಾಗ್ದಾದ್‌ನಲ್ಲಿ ಹತ್ಯೆ ಮಾಡಿರುವುದಕ್ಕೆ ಖಂಡನೆಯನ್ನು ಪೊಲಿಟ್‌ಬ್ಯುರೊ ಪುನರುಚ್ಚರಿಸಿದೆ. ಇದೊಂದು ಭಂಡ ಕೃತ್ಯ ಮತ್ತು ಅಂತರ್ರಾಷ್ಟ್ರೀಯ ವಿಧಿ–ವಿಧಾನಗಳ ಉಲ್ಲಂಘನೆಯಾಗಿದೆ ಎಂದು ಅದು ಹೇಳಿದೆ.

ತಿರುವನಂತಪುರದಲ್ಲಿ ಕೇಂದ್ರ ಸಮಿತಿ ಸಭೆ: ಜನವರಿ 17–19

ಸಿಪಿಐ(ಎಂ) ಕೇಂದ್ರ ಸಮಿತಿಯ ಸಭೆ ತಿರುವನಂತಪುರದಲ್ಲಿ ಜನವರಿ 17ರಿಂದ 19ರ ವರೆಗೆ ನಡೆಯಲಿದೆ, ಅದರ ಮುಂದೆ ಸಲ್ಲಿಸಬೇಕಾದ ರಾಜಕೀಯ ಬೆಳವಣಿಗೆಗಳ ಕುರಿತ ಕರಡು ವರದಿಯನ್ನು ಚರ್ಚಿಸಲಾಯಿತು ಎಂದು ಪೊಲಿಟ್‌ಬ್ಯುರೊ ಹೇಳಿಕೆ ತಿಳಿಸಿದೆ.

ಉತ್ತರಪ್ರದೇಶದಲ್ಲಿ ಚಿತ್ರಹಿಂಸೆಗೊಳಗಾಗಿರುವ ಸಾಮಾಜಿಕ ಕಾರ್ಯಕರ್ತರ ಬೆಂಬಲಕ್ಕೆ ನಿಂತ ಪ್ರತಿಪಕ್ಷಗಳು

“ಇಂದಿನ ಪ್ರಧಾನಿಗಳಿಗೆ ರಾಜಧರ್ಮವನ್ನು ಜನಗಳೇ ನೆನಪಿಸಬೇಕಾಗಿದೆ, ನೆನಪಿಸುತ್ತೇವೆ”–ಯೆಚುರಿ

ಜನವರಿ 15ರಂದು ದಿಲ್ಲಿಯ ಪ್ರೆಸ್ ಕ್ಲಬ್‌ನಲ್ಲಿ ಒಂದು ಪತ್ರಿಕಾಗೋಷ್ಠಿ ನಡೆಯಿತು. ಅಲ್ಲಿ ಉತ್ತರಪ್ರದೇಶದ ಸಾಮಾಜಿಕ ರಂಗದ ನಾಲ್ಕು ಮಂದಿ ಪ್ರಮುಖರು ಆ ರಾಜ್ಯದಲ್ಲಿ ಈಗ ಪೌರತ್ವ ತಿದ್ದುಪಡಿ ಕಾಯ್ದೆಯ ನಂತರ ನಡೆಯುತ್ತಿರುವ ತೀವ್ರ ದಮನದ ತಮ್ಮ ಸ್ವಂತ ಕಟು ಅನುಭವಗಳನ್ನು ಪ್ರಸ್ತುತ ಪಡಿಸಿದರು. ಈ ನಾಲ್ವರನ್ನು ಡಿಸೆಂಬರ್ 19ರಂದು ಸಿಎಎ/ ಎನ್‌ಪಿಆರ್/ ಎನ್‌ಆರ್‌ಸಿ ವಿರುದ್ಧ ದೇಶವ್ಯಾಪಿ ಪ್ರತಿಭಟನೆಯ ದಿನದಲ್ಲಿ ನೇತೃತ್ವ ವಹಿಸಿದ್ದಕ್ಕಾಗಿ ತೀವ್ರ ಚಿತ್ರಹಿಂಸೆಗೆ ಗುರಿಪಡಿಸಲಾಯಿತು. ಎರಡು ವಾರಗಳ ನಂತರ ಈಗ ಅವರಿಗೆ ಜಾಮೀನು ಸಿಕ್ಕಿದೆ. ರಾಜ್ಯದ ನಿವೃತ್ತ ಪೋಲೀಸ್ ಐಜಿ ಎಸ್ ಆರ್ ದಾರಾಪುರಿ, ಸಾಂಸ್ಕೃತಿಕ ಕಾರ್ಯಕರ್ತರಾದ ದೀಪಕ್ ಕಬೀರ್ ಮತ್ತು ಸದಾಫ್ ಜಫರ್ ಮತ್ತು ಅಮೇಠಿಯಲ್ಲಿ ಗಣಿತಶಾಸ್ತ್ರದ ಪ್ರಾಧ್ಯಾಪಕರಾಗಿದ್ದ ಪವನ್ ರಾವ್ ಅಂಬೇಡ್ಕರ್‌ರವರನ್ನು ಉಳಿದ ಎಲ್ಲ ಪ್ರತಿಭಟನಾಕಾರರೊಂದಿಗೆ ಬಂಧಿಸಿ ಥಳಿಸಲಾಯಿತು, ಬೂಟುಗಾಲಿನಲ್ಲಿ ಒದೆಯಲಾಯಿತು, ಬಹಳ ಹೊತ್ತಿನ ವರೆಗೆ ಕುಡಿಯಲು ನೀರನ್ನೂ ನಿರಾಕರಿಸಲಾಯಿತು.

“ ನನ್ನನ್ನು ಅವರ ಚಿತ್ರಹಿಂಸೆಗಿಂತ ಹೆಚ್ಚಾಗಿ ಬಾಧಿಸಿರುವುದು ಅವರು ಬಳಸುತ್ತಿದ್ದ ಹೊಲಸು ಕೋಮುವಾದಿ ನಿಂದನೆಗಳು” ಎಂದರು ಸಾಂಸ್ಕೃತಿಕ ಕಾರ್ಯಕರ್ತೆ ಸದಾಫ್ ಜಫರ್. ಆದರೂ ಈ ನಾಲ್ಕೂ ಮಂದಿ ಎನ್‌ಆರ್‌ಸಿ ವಿರುದ್ಧ ಹೋರಾಟವನ್ನು ಮುಂದುವರೆಸುವ ಸಂಕಲ್ಪವನ್ನು ಪುನರುಚ್ಚರಿಸಿದರು.



ಈ ಪ್ರತಿಕಾ ಸಮ್ಮೇಳನದಲ್ಲಿ ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸೀತಾರಾಮ್ ಯೆಚುರಿ ಮತ್ತು ಪೊಲಿಟ್‌ಬ್ಯುರೊ ಸದಸ್ಯರಾದ ಬೃಂದಾ ಕಾರಟ್, ಸಿಪಿಐ ಪ್ರಧಾನ ಕಾರ್ಯದರ್ಶಿ ಡಿ. ರಾಜ, ಹಿರಿಯ ಜೆಡಿ(ಯು) ಮುಖಂಡ ಶರದ್ ಯಾದವ್ ಮತ್ತು ಆರ್‌ಜೆಡಿ ಪಕ್ಷದ ಮುಖಂಡ ಮನೋಜ್ ಝಾ ಇದ್ದರು. ಇವರೆಲ್ಲರು ಉತ್ತರ ಪ್ರದೇಶದಲ್ಲಿನ ದಮನದ ವಿರುದ್ಧ ಪ್ರತಿಪಕ್ಷಗಳ ಸಂಪೂರ್ಣ ಬೆಂಬಲದ ಆಶ್ವಾಸನೆ ನೀಡಿದರು.

ಯೆಚುರಿ ಮಾತನಾಡುತ್ತ , ಜನವರಿ 13ರಂದು ಸಭೆ ಸೇರಿದ 20 ಪ್ರತಿಪಕ್ಷಗಳು ಈ ಚಳುವಳಿಗೆ ಬೆಂಬಲದ ಪ್ರತಿಜ್ಞೆ ವ್ಯಕ್ತಪಡಿಸಿದ್ದಾರೆ ಎಂದರು. ಪ್ರಧಾನ ಮಂತ್ರಿಗಳು, ಗೃಹಮಂತ್ರಿಗಳು ಮತ್ತಿತರ ಬಿಜೆಪಿ ಮುಖಂಡರುಗಳು ಹೇಳುತ್ತಿರುವ ಸುಳ್ಳುಗಳು ಒತ್ತಟ್ಟಿಗಿರಲಿ, ಈ ಪೌರತ್ವ ತಿದ್ದುಪಡಿ ಕಾಯ್ದೆ ಸಂವಿಧಾನಬಾಹಿರ ಮಾತ್ರವಲ್ಲ, ಸಂವಿಧಾನ–ವಿರೋಧಿಯೂ ಆಗಿದೆ, ಆದ್ದರಿಂದ ಇದನ್ನು ವಿರೋಧಿಸುವುದು ದೇಶಪ್ರೇಮದ ಕೆಲಸ, ಏಕೆಂದರೆ ಸಂವಿಧಾನದ ರಕ್ಷಣೆ ಅತ್ಯುಚ್ಚ ದೇಶಪ್ರೇಮದ ಕೆಲಸ ಎಂದರು. ಈ ನಾಲ್ವರನ್ನು ಯಾವುದೇ ಸಾಕ್ಷಿಯಿಲ್ಲದೆ ಜೈಲುಗಳಲ್ಲಿ ಇಡಲಾಯಿತು. ಇದು ದೇಶದಲ್ಲೆಲ್ಲ ನಡೆಯುತ್ತಿದೆ.




ಪ್ರತಿಭಟನಾಕಾರರ ಮೇಲೆ ಗೋಲೀಬಾರ್ ಮತ್ತು ಸಾವುಗಳೆಲ್ಲ ನಡೆದಿರುವುದು ಬಿಜೆಪಿ ಆಳ್ವಿಕೆಯ ರಾಜ್ಯಗಳಲ್ಲಿ ಮಾತ್ರ. ಇದನ್ನು ಪಶ್ಚಿಮ ಬಂಗಾಲದ ಬಿಜೆಪಿ ಮುಖ್ಯಸ್ಥರೇ ಈಗ ಒಪ್ಪಿಕೊಂಡಿದ್ದಾರೆ, ಉತ್ತರಪ್ರದೇಶ, ಕರ್ನಾಟಕದಲ್ಲಿ ಪ್ರತಿಭಟನಾಕಾರರನ್ನು ನಾಯಿಗಳನ್ನು ಹೊಡೆದು ಸಾಯಿಸಿದಂತೆ ಸಾಯಿಸಿದ್ದಾರೆ ಎಂದು ಅವರು ಹೆಮ್ಮೆಯಿಂದ ಹೇಳಿಕೊಮಡಿದ್ದಾರೆ. ಇನ್ನೊಬ್ಬ ಮುಖಂಡರು ಪ್ರತಿಭಟನಾಕಾರರನ್ನು ಹೂತು ಹಾಕುತ್ತೇವೆ ಎಂದಿದ್ದಾರೆ.

ಇವೆಲ್ಲ ಬಿಜೆಪಿ ಏನೆಲ್ಲ ಮಾಡಬಲ್ಲದು ಎಂಬುದನ್ನು ತೋರಿಸುತ್ತವೆ. ಬ್ರಿಟಿಶರ ವಸಾಹತುಶಾಹೀ ಆಳರಸರು ಗಾಂಧೀಜಿ ನೇತೃತ್ವದ ನಾಗರಿಕ ಕಾಯಿದೆ ಭಂಗ ಚಳುವಳಿಯಲ್ಲಿ ಭಾಗವಹಿಸಿದವರ ಮೇಲೆ ದಂಡ ಹಾಕಿದಂತೆ ದಂಡದ ನೊಟೀಸುಗಳನ್ನು ಅಮಾಯಕ ಜನಗಳಿಗೆ ಕಳಿಸುತ್ತಿದ್ದಾರೆ ಎಂದು ಯೆಚುರಿ ಟೀಕಿಸಿದರು.

ಶರದ್ ಯಾದವ್ ಈಗಿನದ್ದು ತುರ್ತು ಪರಿಸ್ಥಿತಿಗಿಂತಲೂ ಕೆಟ್ಟದಾಗಿರುವ ಸನ್ನಿವೇಶ ಎಂದರು.

ಕಬೀರ್ ಅಥವ ಅಂಬೇಡ್ಕರ್ ಪುಟ 14 ಕ್ಕೆ

ಸಂಪತ್ತಿನ ವಾರಸುದಾರಿಕೆಯನ್ನು ಬೂರ್ಜ್ವಾ ಅರ್ಥಶಾಸ್ತ್ರಜ್ಞರೂ ಸಮರ್ಥಿಸಲಾರರು



ಸಂಪತ್ತು ಮಕ್ಕಳು–ಮೊಮ್ಮಕ್ಕಳಿಗೆ ವಾರಸುದಾರಿಕೆಯಿಂದ ಪ್ರಾಪ್ತವಾಗುವುದನ್ನು, ಬಂಡವಾಳಶಾಹಿ ತತ್ವಗಳ ಮೂಲಕವೂ ಸಮರ್ಥಿಸಲಾಗದು. ಆಸ್ತಿಯು ಹುಟ್ಟಿನ ಹಕ್ಕಾಗಿರುವುದು ಒಂದು ಸಾಮಾಜಿಕ ಏರ್ಪಾಟಿನ ಮೂಲಕ. ಈ ಏರ್ಪಾಟಿಗೆ, ಬಂಡವಾಳಶಾಹಿ ತತ್ವಗಳ ಪ್ರಕಾರವಾಗಿಯೂ ಸಹ ಯಾವ ಆರ್ಥಿಕ ತರ್ಕಾಧಾರವೂ ಇಲ್ಲ. ಆದರೆ ಈಗ ಇರುವುದು ಇದೇ ಏರ್ಪಾಟು, ಈ ಏರ್ಪಾಟು ಇರಲೇಬೇಕೆಂದು ಬಂಡವಾಳದಾರರು ಹಠ ಹಿಡಿಯುತ್ತಾರೆ. ಆದರೆ, ಒಂದು ಪ್ರಜಾಪ್ರಭುತ್ವ ಸಮಾಜವನ್ನು ಕಟ್ಟುವಾಗ, ಸಂಪತ್ತಿನ ಅಸಮಾನತೆಗಳನ್ನು ಹದ್ದುಬಸ್ತಿನಲ್ಲಿಡಬೇಕಾಗುತ್ತದೆ. ಆದ್ದರಿಂದ, ಅಪಾರ ಸಂಪತ್ತಿನ ಒಡೆಯರ ಮೇಲೆ ಸಾಕಷ್ಟು ಪ್ರಮಾಣದಲ್ಲಿ ತೆರಿಗೆಗಳನ್ನು ವಿಧಿಸುವ ಮೂಲಕ ಅವರನ್ನು ಎದುರಿಸಬೇಕಾಗುತ್ತದೆ ಎಂಬ ಅಂಶವನ್ನು ಬಂಡವಾಳಶಾಹಿ ಸಿದ್ಧಾಂತವೂ ಅಲ್ಲಗಳೆಯಲಾರದು.

ಪ್ರೊ.ಪ್ರಭಾತ್ ಪಟ್ನಾಯಕ್
ಅನು:ಕೆ.ಎಂ.ನಾಗರಾಜ್

ಮೂಟೆ ಹೊರುವ ಹಮಾಲಿಯೊಬ್ಬನು "ಅಂಬಾನಿಯವರ ಬಳಿಯಾದರೂ ಅಷ್ಟೊಂದು ಐಶ್ವರ್ಯವಿದೆ, ನನಗೆ ಏನೂ ಇಲ್ಲವಲ್ಲ, ಯಾಕೆ?" ಎಂಬ ಪ್ರಶ್ನೆಯನ್ನು ಒಬ್ಬ ಬಂಡವಾಳಶಾಹಿ ಅರ್ಥಶಾಸ್ತ್ರಜ್ಞನೊಂದಿಗೆ ಕೇಳಿದರೆ, ಆತನ ಉತ್ತರ ಹೀಗೆ ಇರಬಹುದು: "ಅಂಬಾನಿಯವರಲ್ಲಿ "ವಿಶೇಷ ಗುಣ"ಗಳಿವೆ, ಅವು ನಿನ್ನಲ್ಲಿಲ್ಲ". ಆದರೆ, ಇಂತಹ ಯಾವ "ವಿಶೇಷ ಗುಣ"ಗಳು ಸಂಪತ್ತಿನ ಅಸಮಾನತೆಯನ್ನು ವಿವರಿಸುತ್ತವೆ ಎಂಬುದರ ಬಗ್ಗೆ ಬಂಡವಾಳಶಾಹಿ ಅರ್ಥಶಾಸ್ತ್ರಜ್ಞರ ನಡುವೆ ಒಮ್ಮತವಿಲ್ಲ.

"ವಿಶೇಷ ಗುಣ"ಗಳು ಮತ್ತು ಐಶ್ವರ್ಯದ ನಡುವಿನ ಸಂಬಂಧದ ಈ ವಿವರಣೆಯು ಅರ್ಥಪೂರ್ಣ ತರ್ಕದಿಂದ ಕೂಡಿದೆ ಎಂದು ಒಪ್ಪಿಕೊಂಡರೆ, ಮತ್ತು, ಒಬ್ಬ ವ್ಯಕ್ತಿಯು ಈ "ವಿಶೇಷ ಗುಣ"ಗಳಿಂದಾಗಿ ಐಶ್ವರ್ಯವಂತನಾಗಿದ್ದಾನೆ ಎಂದು ವಿವರಿಸುವುದಾದರೆ, ಆಗ, ಈ "ವಿಶೇಷ ಗುಣ"ಗಳಿಗೂ ಮತ್ತು ಆ ವ್ಯಕ್ತಿಯು ಐಶ್ವರ್ಯವಂತನಾಗಿರುವುದಕ್ಕೂ ಸಂಬಂಧವಿಲ್ಲ ಎಂದೇ ಹೇಳಬೇಕಾಗುತ್ತದೆ. ಉದಾಹರಣೆಯಾಗಿ ಹೇಳುವುದಾದರೆ, ಒಂದು ಬಂಡವಾಳಶಾಹಿ ಅರ್ಥವ್ಯವಸ್ಥೆಯಲ್ಲಿ, ಶೇಖರಣೆಯ ಮೂಲಕ ಬಂಡವಾಳ ಬೆಳೆಯುತ್ತಾ ಹೋಗುವುದು ಸಾಮಾನ್ಯ. ಹಾಗಾಗಿ, ಕಾಲಕ್ರಮದಲ್ಲಿ, ಸಂಪತ್ತು ವೃದ್ಧಿಸುತ್ತದೆ. ಆದರೆ, ದುಡಿಯುವ ಜನರ ವರಮಾನಗಳು ಹೊಟ್ಟೆ ಬಟ್ಟೆ ಮುಂತಾದ ವೆಚ್ಚಗಳಿಗೆ ಎಷ್ಟು ಬೇಕೊ ಅದಕ್ಕಿಂತ ಕೆಳ ಮಟ್ಟದಲ್ಲಿರುವ ಕಾರಣದಿಂದ ಅವರು ಉಳಿತಾಯ ಮಾಡಲು ಸಾಧ್ಯವಾಗುವುದಿಲ್ಲ. ಉಳಿತಾಯದ ಮೂಲಕ ಸಂಪತ್ತಿನ ವೃದ್ಧಿಯಾಗುವುದರಿಂದ, ದುಡಿಯುವ ಜನರು ಹೊಂದಿರುವ ಅಲ್ಪ ಸ್ವಲ್ಪ ಸಂಪತ್ತು ವೃದ್ಧಿಯಾಗುವುದೇ ಇಲ್ಲ. ಹಾಗಾಗಿ, ಮೊಟ್ಟಮೊದಲಿಗೆ, ಅವರು ಸಂಪತ್ತಿನ ಹೆಚ್ಚಳ ಮಾಡಿಕೊಳ್ಳುವ ಸಾಧ್ಯತೆಯೇ ಇಲ್ಲ. ಆದರೆ, ಹೆಚ್ಚು ಉಳಿತಾಯ ಮಾಡುವ ಅಂಬಾನಿಯವರ ಐಶ್ವರ್ಯ ಹೆಚ್ಚುತ್ತದೆ. ಏನೇನೂ ಉಳಿತಾಯ ಮಾಡಲಾಗದ ಹಮಾಲಿಯು ಐಶ್ವರ್ಯವಂತನಾಗುವುದೇ ಇಲ್ಲ ಎಂದು ಹೇಳುವ ಈ ವಿವರಣೆಯು ತಾರ್ಕಿಕವಾಗಿ ದೋಷದಿಂದ ಕೂಡಿದೆ. ಏಕೆಂದರೆ, ಅಂಬಾನಿಯವರ ಬಳಿ ಇರುವಷ್ಟೇ ಐಶ್ವರ್ಯವು ಹಮಾಲಿಯ ಬಳಿಯೂ ಇದ್ದಿದ್ದರೆ ಆತನೂ ಅಂಬಾನಿಯಷ್ಟೇ ಮಿತವ್ಯಯಿಯಾಗಿ ಅವನಷ್ಟೇ ಐಶ್ವರ್ಯವಂತನಾಗುತ್ತಿದ್ದ.

ಇದೇ ವಿಷಯವನ್ನು ಬೇರೆ ಮಾತುಗಳಲ್ಲಿ ಹೇಳುವುದಾದರೆ, ಮಿತವ್ಯಯಿಗಳಾಗಿರುವುದು ಎಲ್ಲ ಐಶ್ವರ್ಯವಂತರ ಒಂದು ಲಕ್ಷಣ. ಏಕೆಂದರೆ, ಅವರು ತಮ್ಮ ಸಂಪತ್ತಿನಿಂದ ಪಡೆಯುವ ವರಮಾನವನ್ನೆಲ್ಲವನ್ನೂ ಖರ್ಚು ಮಾಡಲು ಸಾಧ್ಯವಿಲ್ಲ, ಷ್ಟೊಂದು ಬರುತ್ತದೆ. ಅಂಬಾನಿ ಒಬ್ಬ ಮಿತವ್ಯಯಿಯಾಗಿರುವುದು ಐಶ್ವರ್ಯವಂತರ ಒಂದು ಸ್ವಭಾವ ಅಥವಾ ಅಭ್ಯಾಸ ಎನ್ನಬಹುದು. ಅದು ಒಂದು "ವಿಶೇಷ ಗುಣ" ಅಲ್ಲವೇ ಅಲ್ಲ. ಅಷ್ಟೇ ಅಲ್ಲ, ಈ ಅಂಶವು, ಒಬ್ಬ ಹಮಾಲಿಗಿಂತ ಅಂಬಾನಿ ನಾಮಧೇಯದ ವ್ಯಕ್ತಿಯೇ ಏಕೆ ಐಶ್ವರ್ಯವಂತ ವ್ಯಕ್ತಿಯಾಗಿರಬೇಕು ಎಂಬುದನ್ನು ವಿವರಿಸುವುದಿಲ್ಲ. ಸಂಕ್ಷಿಪ್ತವಾಗಿ ಹೇಳುವುದಾದರೆ, ಅಂಬಾನಿಯವರ ಐಶ್ವರ್ಯಕ್ಕೂ ಮತ್ತು ಈ "ವಿಶೇಷ ಗುಣ"ಕ್ಕೂ ಸಂಬಂಧವಿಲ್ಲ. "ವಿಶೇಷ ಗುಣ" ಮತ್ತು ಐಶ್ವರ್ಯ ಎರಡೂ ಬೇರೆ ಬೇರೆಯೇ.

ಅದೇ ರೀತಿಯಲ್ಲಿ, ಬಂಡವಾಳಗಾರರು "ಸಂಪತ್ತಿನ ಸೃಷ್ಟಿಕರ್ತರು" ಎಂದು ಹೇಳಿದ ನರೇಂದ್ರ ಮೋದಿಯವರ ಅಭಿಪ್ರಾಯದ ಬಗ್ಗೆ ಸ್ವಲ್ಪ ನೋಡೋಣ. ಒಂದು ಸಾಮಾಜಿಕ ಪ್ರಕ್ರಿಯೆಯಾಗಿರುವ ಸಂಪತ್ತಿನ ಸೃಷ್ಟಿಯ ಬಗ್ಗೆ ಮೋದಿಯವರ ಹೇಳಿಕೆ ಬಾಲಿಷವಾಗಿದೆ. ಈ ಅಸಂಬದ್ಧದ ಹೇಳಿಕೆಯನ್ನು ಒಂದು ಕ್ಷಣ ನಿರ್ಲಕ್ಷಿಸಿ, ವಾದಕ್ಕೋಸ್ಕರ ಅದನ್ನು ಒಪ್ಪಿಕೊಳ್ಳೋಣ. ಸಂಪತ್ತು ಸೃಷ್ಟಿಸುವವರು ಅಂಬಾನಿ ಅಥವಾ ಅದಾನಿ ನಾಮಧೇಯದವರೇ ಆಗಿರಬೇಕು ಏಕೆ? ಮತ್ತು ಈಗ ಹಮಾಲಿ ಕೆಲಸ ಮಾಡುತ್ತಿರುವವನೊಬ್ಬನು ಆಗಿರಬಾರದು ಏಕೆ ಎಂಬುದನ್ನು ವಿವರಿಸುವುದಿಲ್ಲ. ವಿಷಯ ಇದು.

ಬಂಡವಾಳಶಾಹಿ ಅರ್ಥಶಾಸ್ತ್ರಜ್ಞ ಜೋಸೆಫ್ ಷುಂಪೀಟರ್ ಅವರು ನಾವೀನ್ಯತೆ ಒಂದು "ವಿಶೇಷ ಗುಣ" ಎಂಬುದನ್ನು ಒತ್ತಿ ಹೇಳಿದ್ದರು. ಉತ್ಪಾದನೆಯಲ್ಲಿ ಹೊಸ ಹೊಸ ವಿಧಾನಗಳ ಅಳವಡಿಕೆ, ಹೊಸ ಹೊಸ ಉತ್ಪನ್ನಗಳನ್ನು ಮಾರುಕಟ್ಟೆಗೆ ತರುವುದು ಮುಂತಾದ ಅಂಶಗಳ ಬಗ್ಗೆ ತೋರುವ ಹೊಸತನವನ್ನು ಷುಂಪೀಟರ್ "ನಾವೀನ್ಯತೆ" ಎಂದು ವ್ಯಾಖ್ಯಾನಿಸಿದ್ದರು. ಅವರು, "ಆವಿಷ್ಕಾರಗಳು" ಮತ್ತು "ನಾವೀನ್ಯತೆ"ಗಳ ನಡುವೆ ವ್ಯತ್ಯಾಸವಿದೆ ಎಂದಿದ್ದರು. ಅವರ ಪ್ರಕಾರ ಹೊಸ ಪ್ರಕ್ರಿಯೆಗಳು ಮತ್ತು ಉತ್ಪನ್ನಗಳ ಬಗ್ಗೆ ಜ್ಞಾನದ ಬೆಳವಣಿಗೆ 'ಆವಿಷ್ಕಾರ'ವಾಗಿದ್ದರೆ, ಆ ಆವಿಷ್ಕಾರಗಳನ್ನು ಕಾರ್ಯತಃ ಬಳಕೆಗೆ ತರುವುದು 'ನಾವೀನ್ಯತ". ಸಮಾಜದಲ್ಲಿ 'ಆವಿಷ್ಕಾರಗಳು' ಸ್ವತಂತ್ರವಾಗಿ ನಡೆಯುತ್ತವೆಯಾದರೂ, ಅವುಗಳ ಮೂಲಕ ಪಡೆದ ಜ್ಞಾನವನ್ನು ಉತ್ಪಾದನಾ ಪ್ರಕ್ರಿಯೆಯಲ್ಲಿ ಅಳವಡಿಸಿಕೊಳ್ಳುವಂತೆ ಮಾಡುವವರಿಗೆ ಒಂದು "ವಿಶೇಷ ಗುಣ" ಇರಬೇಕಾಗುತ್ತದೆ. ಅಂದರೆ, ಇದರಲ್ಲಿ ಒಂದು ಲಾಭದಾಯಕ ಅವಕಾಶವನ್ನು ಗುರುತಿಸಿ, ಅದನ್ನು ಹೆಕ್ಕಿ ತೆಗೆಯುವ ಸಾಮರ್ಥ್ಯ–ಉತ್ಪಾದನಾ ಪ್ರಕ್ರಿಯೆಯಲ್ಲಿ ಹೊಸ ಹೊಸ ವಿಧಾನಗಳನ್ನು ಅಳವಡಿಸಿಕೊಳ್ಳುವುದು ಮತ್ತು ಹೊಸ ಹೊಸ ಉತ್ಪನ್ನಗಳನ್ನು ತಯಾರಿಸುವುದು ಮತ್ತು ಅವುಗಳನ್ನು ಮಾರುಕಟ್ಟೆಗೆ ಪರಿಚಯಿಸಲು ಒಂದು ಹದವಾದ ಸಂದರ್ಭವನ್ನು ಆಯ್ಕೆ ಮಾಡಿಕೊಳ್ಳುವ ಸಾಮರ್ಥ್ಯ. ಇದು ಕೆಲವರಲ್ಲಿ ಮಾತ್ರ ಇರುತ್ತದೆ. ಅಂಥವರನ್ನು "ಉದ್ಯಮಶೀಲರು" ಎಂದು ಷುಂಪೀಟರ್ ಕರೆದರು. ಅವರ ಪ್ರಕಾರ, ಉದ್ಯಮಶೀಲತೆಗೂ ಮತ್ತು ವ್ಯಕ್ತಿಯ ಬಡತನ ಅಥವಾ ಶ್ರೀಮಂತಿಕೆಗೂ ಸಂಬಂಧವಿಲ್ಲ. ಉದ್ಯಮಶೀಲತೆ ಹೊಂದಿರುವ ಕಾರಣದಿಂದ ಒಬ್ಬ ವ್ಯಕ್ತಿಯು ಐಶ್ವರ್ಯ ಸಂಪಾದಿಸಬಹುದು. ಹೇಗೆಂದರೆ, ಒಂದು ಉತ್ಪಾದನಾ ಪ್ರಕ್ರಿಯೆಯಲ್ಲಿ ಯಾರು ಮೊದಲು ಹೊಸತನ ತರುತ್ತಾರೊ ಅಥವಾ ಒಂದು ಉತ್ಪನ್ನವನ್ನು ಯಾರು ಮೊದಲು ಮಾರುಕಟ್ಟೆಗೆ ಪರಿಚಯಿಸುತ್ತಾರೊ ಅವರು ಬೇರೆಯವರನ್ನು ಹಿಂದಿಕ್ಕುತ್ತಾರೆ ಮತ್ತು ಬೇಗ ಶ್ರೀಮಂತರಾಗುತ್ತಾರೆ. ಆದ್ದರಿಂದ, ಷುಂಪೀಟರ್ ಅವರ ಈ ವಿವರಣೆಯು, ತಾರ್ಕಿಕವಾಗಿ, ಮಿತವ್ಯಯದ ಬಗೆಗಿನ ವಾದದಷ್ಟು ದೋಷಯುಕ್ತವಾಗಿಲ್ಲ.

ಷುಂಪೀಟರ್ ಅವರು, ಹಾಲಿ ಉದ್ದಿಮೆಗಳು ತಾವು ಬಳಸುತ್ತಿರುವ ವಿಧಾನಗಳಿಗೆ ಒಗ್ಗಿಕೊಂಡಿರುವುದರಿಂದ ಮತ್ತು ತಮ್ಮ ತಮ್ಮ ಉತ್ಪನ್ನಗಳ ಬಗ್ಗೆ ತಮಗೆ ಸಮಾಧಾನ ಇರುವುದರಿಂದ, ಅವರು ಬೇರೆ ಬೇರೆ ಮತ್ತು ಹೊಸ ಹೊಸ ವಿಧಾನಗಳು ಮತ್ತು ಪ್ರಕ್ರಿಯೆಗಳ ಬಗ್ಗೆ ತಲೆಕೆಡಿಸಿಕೊಳ್ಳುವುದಿಲ್ಲ. ಇಂತಹ ಒಂದು ಪರಿಸ್ಥಿತಿಯ ಪ್ರಯೋಜನ ಪಡೆದು ಅದನ್ನು ಲಾಭದಾಯಕವಾಗಿ ಮಾಡಿಕೊಳ್ಳಲು ಹೊರಗಿನ ಉದ್ಯಮಶೀಲರು ಪ್ರವೇಶಿಸುತ್ತಾರೆ. ಅವರು ತಮ್ಮ ನವ ನವೀನ ಉತ್ಪನ್ನಗಳ ಮೂಲಕ ಯಥೇಚ್ಛ ಹಣ ಸಂಪಾದಿಸುತ್ತಾರೆ. ಆದ್ದರಿಂದ, ಅದಾಗಲೇ ಸಂಪತ್ತಿನ ಅಸಮಾನತೆಗಳು ನೆಲಸಿರುವ ಬಂಡವಾಳಶಾಹಿ ಸಮಾಜದಲ್ಲಿ, ಅತಿ ಶ್ರೀಮಂತರ ಪಟ್ಟಿಯ ಸ್ಥಾನಗಳಲ್ಲಿ ಬದಲಾವಣೆಗಳು ಆಗುತ್ತಾ ಇರುತ್ತವೆ ಎಂಬುದಾಗಿ ಷುಂಪೀಟರ್ ಹೇಳುತ್ತಾರೆ.

ಮಾರ್ಕ್ಸ್‌ರವರ ವಿಶ್ಲೇಷಣೆ/ವಿಚಾರಗಳನ್ನು ಬಹಳವಾಗಿ ಬಳಸಿಕೊಂಡಿರುವ ಷುಂಪೀಟರ್ ಅವರ ಈ ತಾತ್ವಿಕ ವಿಚಾರವು ಮೂಲಭೂತವಾಗಿ ಬುಡ ಭದ್ರವಿಲ್ಲದ್ದಾಗಿದೆ. ಅದರ ವಿವರಣೆಗಳು ಇಲ್ಲಿ ಅಪ್ರಸ್ತುತ. ಬಂಡವಾಳಶಾಹಿ ವ್ಯವಸ್ಥೆಯಲ್ಲಿ, ದೊಡ್ಡ ದೊಡ್ಡ ಉದ್ದಿಮೆಗಳು ತಮ್ಮದೇ ಆದ ಸಂಶೋಧನಾ ಪ್ರಯೋಗಾಲಯಗಳನ್ನು ಹೊಂದಿವೆ. 'ಆವಿಷ್ಕಾರಗಳು' ಮತ್ತು 'ನಾವೀನ್ಯತೆಗಳು' ಈ ಉದ್ದಿಮೆಗಳ ಗಾತ್ರದಿಂದ ಸ್ವತಂತ್ರವಾಗಿಯೇನೂ ಇಲ್ಲ ಎಂದೂ ಷುಂಪೀಟರ್ ಒಪ್ಪುತ್ತಾರೆ. ಅಂದರೆ ಈ ಉದ್ದಿಮೆಗಳ ಮಾಲೀಕರು ಈಗಾಗಲೇ ಎಷ್ಟು ಸಂಪತ್ತು ಹೊಂದಿದ್ದಾರೆ ಎಂಬುದನ್ನು ಅವಲಂಬಿಸಿರುತ್ತದೆ. ಆದ್ದರಿಂದ ಷುಂಪೀಟರ್ ಪ್ರತಿಪಾದಿಸುವ ಈ ತತ್ವಮೀಮಾಂಸೆಯು ಕೆಲವರು ಮಾತ್ರ ಏಕೆ ಐಶ್ವರ್ಯವಂತರಾಗಿದ್ದಾರೆ ಮತ್ತು ಉಳಿದವರು ಏಕೆ ಐಶ್ವರ್ಯವಂತರಾಗಿಲ್ಲ ಎಂಬುದನ್ನು ವಿವರಿಸಲು ಅಸಮರ್ಪಕವಾಗುತ್ತದೆ. ಏಕೆಂದರೆ, ಈಗಾಗಲೇ ಐಶ್ವರ್ಯಕ್ಕೆ ಮತ್ತಷ್ಟು ಸೇರ್ಪಡೆ ಅದಾಗಲೇ ಇರುವ ಐಶ್ವರ್ಯವನ್ನು ಅವಲಂಬಿಸಿರುತ್ತದೆ. ಸಮಸ್ಯೆಯ ಈ ಅಂಶಗಳನ್ನು ಸಧ್ಯಕ್ಕೆ ಬದಿಗಿಟ್ಟು ಐಶ್ವರ್ಯವಂತರು ಐಶ್ವರ್ಯವಂತರಾಗಿರುವುದು ಅವರಲ್ಲೊಂದು "ವಿಶೇಷ ಗುಣ"ವಿರುವುದರಿಂದಾಗಿ, ಅದೆಂದರೆ ಹೊಸತನವನ್ನು ತರುವ ಅವರ ಮನೋಭಾವ, ಅಥವಾ ಷುಂಈಟರ್ ಹೇಳುವ 'ಉದ್ಯಮಶೀಲತೆ'ಯಿಂದಾಗಿ ಎಂದೇ ಇಟ್ಟುಕೊಳ್ಳೊಣ.

ಆದರೆ, ಈ ಅಂಶವು, ಐಶ್ವರ್ಯವಂತರ ಮಕ್ಕಳು ಕೂಡ ಐಶ್ವರ್ಯವಂತರೇ ಆಗಿರಬೇಕು ಏಕೆ ಎಂಬುದನ್ನು ವಿವರಿಸುವುದೂ ಇಲ್ಲ ಮತ್ತು ಸಮರ್ಥಿಸುವುದೂ ಇಲ್ಲ. ಈ ಐಶ್ವರ್ಯವಂತರ ಮಕ್ಕಳು ಅವರಿಗೆ ಪ್ರಾಪ್ತವಾದ ಐಶ್ವರ್ಯವನ್ನು ಹೊಂದಿರಲು ಅವರಿಗೆ ಯಾವುದೇ "ವಿಶೇಷ ಗುಣ"ಗಳಿವೆ ಎಂಬುದನ್ನು ಜಗತ್ತಿಗೆ ತೋರಿಸಿಲ್ಲ. ಅವರು ಅದನ್ನು ಹೊಂದಲು ಇರುವ ಒಂದೇ ಒಂದು ಕಾರಣವೆಂದರೆ, ಅದೊಂದು ಸಾಮಾಜಿಕ ಏರ್ಪಾಟು. ಈ ಏರ್ಪಾಟು, ಸಂಪತ್ತು/ಆಸ್ತಿಯನ್ನು ಮಾತಾ–ಪಿತರಿಂದ ಮಕ್ಕಳಿಗೆ ವರ್ಗಾವಣೆಯಾಗುವುದನ್ನು ಸಮ್ಮತಿಸುತ್ತದೆ. ಆದರೆ, ಈ ಏರ್ಪಾಟಿಗೆ ಯಾವುದೇ ಆರ್ಥಿಕ ತರ್ಕಾಧಾರವಿಲ್ಲ.


ಈ ಅಂಶವನ್ನು ವಿವರಿಸಲು ಷುಂಪೀಟರ್ ಅವರ ವಿವರಣೆಯನ್ನೇ ಮತ್ತೊಮ್ಮೆ ಕೆದಕಬಹುದು. ಅದೇನೆಂದರೆ, ಸಂಪತ್ತು/ಆಸ್ತಿಯನ್ನು ಮಕ್ಕಳಿಗೆ ವರ್ಗಾಯಿಸದಿದ್ದರೆ, ಉದ್ಯಮಶೀಲ ವ್ಯಕ್ತಿಗಳಿಗೆ 'ನಾವೀನ್ಯತೆ'ಯನ್ನು ತರಲು ಯಾವುದೇ 'ಉತ್ತೇಜನೆ' ಇರುವುದಿಲ್ಲ. ಹಾಗಾಗಿ, ಬಂಡವಾಳಶಾಹಿ ವ್ಯವಸ್ಥೆಯಲ್ಲಿ, ವಾರಸುದಾರಿಕೆ ಕಾನೂನುಗಳು 'ಪ್ರಗತಿ'ಗಾಗಿ ತೆರಬೇಕಾದ ಒಂದು ಬೆಲೆ. ಆದರೆ ಈ 'ಉತ್ತೇಜನೆ' ಎಂಬುದು ಷುಂಪಿಟೀರ್ ಅವರ ಅಥವ ಬೇರೆ ಯಾವುದೇ ಇಂತಹ ತತ್ವಮೀಮಾಂಸೆಯಲ್ಲಿ "ನಾವೀನ್ಯತೆ'ಯನ್ನು ವಿವರಿಸುವಲ್ಲಿ ಸಂಪುರ್ಣವಾಗಿ ಅಪ್ರಸ್ತುತವಾದ ಸಂಗತಿ. ಒಂದು ಹೊಸ ಪ್ರಕ್ರಿಯೆ ಲಭ್ಯವಾದಾಗ, ಅದನ್ನು ಉತ್ಪಾದನಾ ವ್ಯವಸ್ಥೆಯಲ್ಲಿ ಒಂದು ಉದ್ದಿಮೆ ಅಳವಡಿಸಿಕೊಳ್ಳದಿದ್ದರೆ, ಅದನ್ನು ಅಳವಡಿಸಿಕೊಳ್ಳುವ ಇನ್ನೊಂದು ಉದ್ದಿಮೆಯು ಮೊದಲನೆಯದ್ದನ್ನು ಸ್ಪರ್ಧೆಯಲ್ಲಿ ಹಿಂದಿಕ್ಕಿ ಅದರ ಸ್ಥಾನವನ್ನು ಪಲ್ಲಟಿಸುತ್ತದೆ. ಹಾಗಾಗಿ, ನಾವೀನ್ಯತೆಯನ್ನು ಆಗು ಮಾಡುವ ಪ್ರೇರಣೆಯು ಸ್ಪರ್ಧೆಯಲ್ಲಿದೆಯೇ ವಿನಃ, 'ಉತ್ತೇಜನೆಯಿಂದ ಬರುವುದಿಲ್ಲ. ಬೇರೆ ಮಾತುಗಳಲ್ಲಿ ಹೇಳುವುದಾದರೆ, ಎಲ್ಲ ಬಂಡವಾಳಶಾಹಿ ತತ್ವಗಳ ಪ್ರಕಾರವಾಗಿಯೂ, ಒಂದು ವೇಳೆ, 'ಉದ್ಯಮಶೀಲ'ರ ಇಡೀ ಸಂಪತ್ತನ್ನು ಅವರ ನಿಧನಾನಂತರ ತೆರಿಗೆ ವಿಧಿಸಿ ತಗೊಂಡರೂ ಸಹ, ನಾವೀನ್ಯತೆಗಳನ್ನು ಪರಿಚಯಿಸುವ ವೇಗವು ಎಳ್ಳಷ್ಟೂ ಕಡಿಮೆಯಾಗುವುದಿಲ್ಲ.

ಏಕಸ್ವಾಮ್ಯದ ಹಿಡಿತದಲ್ಲಿರುವ ಒಂದು


ಪುಟ 14 ಕ್ಕೆ



ಬಂಡವಾಳಗಾರರು "ಸಂಪತ್ತಿನ ಸೃಷ್ಟಿಕರ್ತರು" ಎಂಬ ಮೋದಿಯವರ ಅಸಂಬದ್ಧದ ಹೇಳಿಕೆಯನ್ನು ಒಂದು ಕ್ಷಣ ನಿರ್ಲಕ್ಷಿಸಿ, ವಾದಕ್ಕೋಸ್ಕರ ಅದನ್ನು ಒಪ್ಪಿಕೊಂಡರೂ ಸಂಪತ್ತು ಸೃಷ್ಟಿಸುವವರು ಅಂಬಾನಿ ಅಥವಾ ಅದಾನಿ ನಾಮಧೇಯದವರೇ ಆಗಿರಬೇಕು ಏಕೆ? ಮತ್ತು ಈಗ ಹಮಾಲಿ ಕೆಲಸ ಮಾಡುತ್ತಿರುವವನೊಬ್ಬನು ಆಗಿರಬಾರದು ಏಕೆ ಎಂಬ ಪ್ರಶ್ನೆಗೆ ಉತ್ತರವಾಗಲೀ, ವಿವರಣೆಯಾಗಲೀ ಬಂಡವಾಳಶಾಹಿ ಅರ್ಥಶಾಸ್ತ್ರಜ್ಞರಿಂದ ಸಿಗುವುದಿಲ್ಲ



ಸಂಪತ್ತಿನ ವಾರಸುದಾರಿಕೆಯನ್ನು ಬೂರ್ಜ್ವಾ ಅರ್ಥಶಾಸ್ತ್ರಜ್ಞರೂ ಸಮರ್ಥಿಸಲಾರರು



ಪುಟ 13 ರಿಂದ

ಉದ್ದಿಮೆಯು ಒಂದು ಆವಿಷ್ಕಾರ ಮಾಡಿದ್ದಾಗ, ಅದರ ಫಲವನ್ನು ಮಕ್ಕಳು ಮತ್ತು ಮೊಮ್ಮಕ್ಕಳುಗಳಿಗೆ ವರ್ಗಾಯಿಸುವಂತಹ ಸಾಧ್ಯತೆ ಇಲ್ಲದಿದ್ದರೆ, ಆ ಏಕಸ್ವಾಮ್ಯ ಉದ್ದಿಮೆಯು ತನ್ನ ಆವಿಷ್ಕಾರವನ್ನು ಉತ್ಪಾದನಾ ವ್ಯವಸ್ಥೆಗೆ ಅಳವಡಿಸಲು ಬಿಡುವುದಿಲ್ಲ. ಅಂದರೆ, ಐಶ್ವರ್ಯದ ವಿವರಣೆಯು ನಾವೀನ್ಯತೆಯಿಂದ ಏಕಸ್ವಾಮ್ಯದತ್ತ ಹೊರಳುತ್ತದೆ. ಏಕಸ್ವಾಮ್ಯತೆಯು ಸಂಪತ್ತಿನ ವಿವರಣೆ ಎಂದಾದರೆ, ಆಗ, ಒಂದು ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ, ಅದನ್ನು ಬಂಡವಾಳಶಾಹಿ ತತ್ವಗಳ ಪ್ರಕಾರವೂ ಸಮರ್ಥಿಸಲಾಗದು. ಈ ಕಾರಣದಿಂದಾಗಿಯೇ ಕೆಲವು ದೇಶಗಳಲ್ಲಿ, ಏಕಸ್ವಾಮ್ಯ-ವಿರೋಧಿ ಕ್ರಮಗಳು ಮತ್ತು ವಿಶ್ವಾಸ-ವಿರೋಧಿ(ಆಂಟಿ-ಟ್ರಸ್ಟ್) ಕಾನೂನುಗಳನ್ನು ತರಲಾಗಿದೆ. ಏಕಸ್ವಾಮ್ಯವನ್ನು ಸಂಪತ್ತಿನ ಒಂದು ವಿವರಣೆಯಾಗಿ ಒಪ್ಪಿಕೊಳ್ಳುವುದಾದರೆ, ಆಗ, ಮಿಗುತಾಯ ಮೌಲ್ಯದ ಮೂಲವನ್ನು, ಬಂಡವಾಳಶಾಹಿ ವ್ಯವಸ್ಥೆಯಲ್ಲಿ ಬಂಡವಾಳವು ಹೇಗೆ ಶೇಖರಣೆಯಾಗುತ್ತದೆ ಎಂಬುದರ ಮೂಲದಿಂದ ಹಿಡಿದು, ಬಂಡವಾಳಶಾಹಿಗಳ ಒಂದು ವರ್ಗವು ಉತ್ಪಾದನಾ ಸಾಧನಗಳ ಒಡೆತನವನ್ನು ಏಕಸ್ವಾಮ್ಯಕ್ಕೆ ಒಳಪಡಿಸಿಕೊಂಡಿರುವವರೆಗೂ ಗುರುತಿಸಿರುವ ಮತ್ತು ಅದನ್ನು ಬಯಲು ಮಾಡಿರುವ ಮಾರ್ಕ್ಸ್‌ವಾದಿ ಅರ್ಥಶಾಸ್ತ್ರದ ಸಮಂಜಸತೆ ಮತ್ತು ಅಂಗೀಕಾರಾರ್ಹತೆಯನ್ನು ಬಂಡವಾಳಶಾಹಿ ತತ್ವ ಪರಂಪರೆಯು ಒಪ್ಪಿಕೊಳ್ಳಬೇಕಾಗುತ್ತದೆ.

ಗಾತ್ರ ಹೆಚ್ಚದ್ದಷ್ಟು ಉತ್ಪಾದನಾ ವೆಚ್ಚ ಕಡಿಮೆಯಾಗುತ್ತದೆಯಾದ್ದರಿಂದ ಸಂಶೋಧನಾ ಮತ್ತು ಉತ್ಪಾದನಾ ಸಂಸ್ಥೆಗಳ ಗಾತ್ರವೂ ಬಲು ದೊಡ್ಡದೇ ಆಗಿರಬೇಕಾಗುತ್ತದೆ. ಈ ಕಾರಣದಿಂದಾಗಿಯೇ ಏಕಸ್ವಾಮ್ಯಗಳು ಅಸ್ತಿತ್ವದಲ್ಲಿವೆ. ಆದ್ದರಿಂದ, ಏಕಸ್ವಾಮ್ಯಗಳ ಅಸ್ತಿತ್ವದ ಬಗ್ಗೆ ಕಣ್ಣೀರು ಸುರಿಸುವ ಅಗತ್ಯವಿಲ್ಲ. ಇಂದಿನ ಜಗತ್ತಿನಲ್ಲಿ ಪ್ರಗತಿ ಸಾಧಿಸಲು ಅವು ಅಸ್ತಿತ್ವದಲ್ಲಿರುವುದು ಅವಶ್ಯ ಎಂದು ಕೆಲವು ಬೂರ್ಜ್ವಾ ಅರ್ಥಶಾಸ್ತ್ರಜ್ಞರು ವಾದಿಸಬಹುದು. ಅವರ ಪ್ರಕಾರ ಇದು ಸಂಪತ್ತಿನ ಶಾಶ್ವತ ಅಸಮಾನತೆಗಳನ್ನು ವಿವರಿಸುತ್ತದೆ ಮತ್ತು ಸಮರ್ಥಿಸುತ್ತದೆ. ಆದರೆ, ಇದೊಂದು ದೋಷಪೂರ್ಣ ತರ್ಕ. ದೊಡ್ಡ ಪ್ರಮಾಣದ ಉತ್ಪಾದನೆಯಿಂದ ದೊಡ್ಡ ಪ್ರಮಾಣದ ಖಾಸಗಿ ಸಂಪತ್ತಿನ ಅಸಮಾನತೆಗಳು ಉಂಟಾಗಲೇ ಬೇಕೆಂದೇನಿಲ್ಲ. ಉದ್ದಿಮೆಗಳು ಮತ್ತು ಅದರ ಒಡೆತನ ಚದುರಿದ್ದಾಗಲೂ ಅಥವಾ ಉದ್ದಿಮೆಗಳು ಪ್ರಭುತ್ವದ ಒಡೆತನದಲ್ಲಿದ್ದಾಗಲೂ ದೊಡ್ಡ ಪ್ರಮಾಣದಲ್ಲಿ ಉತ್ಪಾದನೆಯನ್ನು ನಡೆಸಲು ಸಾಧ್ಯವಿದೆ.

ಆದ್ದರಿಂದ, ಈ ಎಲ್ಲ ಕಾರಣಗಳಿಂದಾಗಿ, ಸಂಪತ್ತು ಮಕ್ಕಳು-ಮೊಮ್ಮಕ್ಕಳುಗಳಿಗೆ ವಾರಸುದಾರಿಕೆಯಿಂದ ಪ್ರಾಪ್ತವಾಗುವುದನ್ನು, ಬಂಡವಾಶಾಹಿ ತತ್ವಗಳ ಮೂಲಕವೂ ಸಮರ್ಥಿಸಲಾಗದು. ಆಸ್ತಿಯು ಹುಟ್ಟಿನ ಹಕ್ಕಾಗಿರುವುದು ಒಂದು ಸಾಮಾಜಿಕ ಏರ್ಪಾಟಿನ ಮೂಲಕ. ಈ ಏರ್ಪಾಟಿಗೆ, ಬಂಡವಾಳಶಾಹಿ ತತ್ವಗಳ ಪ್ರಕಾರವಾಗಿಯೂ ಸಹ ಯಾವ ಆರ್ಥಿಕ ತರ್ಕಾಧಾರವೂ ಇಲ್ಲ. ಈ ವರೆಗೆ ನಾವು ಗಮನಿಸಿದ್ದುದು ಷುಂಪೀಟರ್ ಅವರ ತತ್ವಗಳನ್ನಷ್ಟೇ. ಇದೇ ಅಭಿಪ್ರಾಯವು, ಸಂಪತ್ತಿನ ಅಸಮಾನತೆಗಳ ಬಗ್ಗೆ ಕೊಡುವ ಯಾವುದೇ ವಿವರಣೆಗೂ ಅನ್ವಯವಾಗುತ್ತದೆ. ಅಂದರೆ, ಸಮಾಜದಲ್ಲಿರುವ ಸಂಪತ್ತಿನ ಅಸಮಾನತೆಯ ಬಗ್ಗೆ ಕೊಡುವ ಯಾವುದೇ ವಿವರಣೆಯು ಸಂಪತ್ತಿನ ವಾರಸುದಾರಿಕೆಯು ಹುಟ್ಟಿನಿಂದ ಪ್ರಾಪ್ತವಾಗುವುದನ್ನು ಸಮರ್ಥಿಸುವುದಿಲ್ಲ.

ಬಂಡವಾಳಶಾಹಿ ಸಿದ್ಧಾಂತ"ದಿಂದ ವಾರಸುದಾರಿಕೆಯನ್ನು ಸಮರ್ಥಿಸಲಾಗದಿದ್ದರೂ, ಈಗ ಇರುವುದು ಇದೇ ಏರ್ಪಾಟು, ಈ ಏರ್ಪಾಟು ಇರಲೇಬೇಕೆಂದು ಬಂಡವಾಳದಾರರು ಹಠ ಹಿಡಿಯುತ್ತಾರೆ. ಆದರೆ, ಒಂದು ಜನವಾದೀ ಸಮಾಜವನ್ನು ಕಟ್ಟುವಾಗ, ಸಂಪತ್ತಿನ ಅಸಮಾನತೆಗಳನ್ನು ಹದ್ದುಬಸ್ತಿನಲ್ಲಿಡಬೇಕಾಗುತ್ತದೆ. ಆದ್ದರಿಂದ, ಅಪಾರ ಸಂಪತ್ತಿನ ಒಡೆಯರ ಮೇಲೆ ಸಾಕಷ್ಟು ಪ್ರಮಾಣದಲ್ಲಿ ತೆರಿಗೆ ವಿಧಿಸುವ ಮೂಲಕ ಅವರನ್ನು ಎದುರಿಸಬೇಕಾಗುತ್ತದೆ ಎಂಬ ಅಂಶವನ್ನು ಬಂಡವಾಳಶಾಹಿ ಸಿದ್ಧಾಂತವೂ ಅಲ್ಲಗಳೆಯಲಾರದು. ನಮ್ಮಂತಹ ಸಮಾಜಗಳಲ್ಲಿ ವಾರಸುದಾರಿಕೆ ತೆರಿಗೆ ಪದ್ಧತಿ ಸುಮಾರಾಗಿ ಇಲ್ಲವೇ ಇಲ್ಲ ಎಂಬ ಅಂಶವು ನಮ್ಮ ಸರ್ಕಾರಗಳ ಕೆಟ್ಟ ನಂಬಿಕೆಯ ಬಗ್ಗೆ ಬಹಳಷ್ಟು ಹೇಳುತ್ತದೆ.

'ಕರಡು ಕಾರ್ಯಾಚರಣೆಯ ವೇದಿಕೆ' – 1931

ಪುಟ 11 ರಿಂದ

ಯಾವುದೇ ಹಕ್ಕುಗಳು ಶ್ರಮಜೀವಿ ಮಹಿಳೆಯರಿಗೆ ಇಲ್ಲ; ಅನೇಕ ಜಿಲ್ಲೆಗಳಲ್ಲಿ ಗೋಷಾ(ಮುಸುಕು ಹಾಕಿಕೊಳ್ಳುವ) ಪದ್ಧತಿ, ಅವಕುಂಠನಗಳ ಅಡಿಯಲ್ಲಿ ಬದುಕಬೇಕಾದ ಬಲವಂತಕ್ಕೆ ಒಳಗಾಗಿದ್ದಾರೆ; ಸಾರ್ವಜನಿಕ ಸಮಾರಂಭಗಳಲ್ಲಿ ಭಾಗವಹಿಸುವ, ತಮ್ಮ ಒಡನಾಡಿಗಳ ಜತೆ ಮುಕ್ತವಾಗಿ ಹಾಗೂ ಬಹಿರಂಗವಾಗಿ ಬೆರೆಯುವ ಹಾಗೂ ಬೀದಿಗಳಲ್ಲಿ ಓಡಾಡುವ ಹಕ್ಕುಗಳೂ ಅವರಿಗೆ ಇಲ್ಲ."

"ಮಹಿಳೆಯರ ಸಂಪೂರ್ಣ ಸಾಮಾಜಿಕ, ಆರ್ಥಿಕ ಹಾಗೂ ಕಾನೂನುಬದ್ಧ ಸಮಾನತೆಗಾಗಿ ಭಾರತದ ಕಮ್ಯುನಿಸ್ಟ್ ಪಕ್ಷ ಹೋರಾಡುತ್ತದೆ. ಮಹಿಳೆಯರಿಗೆ ರಾತ್ರಿಪಾಳಿಯ ಕೆಲಸಗಳ ಸಂಪೂರ್ಣ ರದ್ದತಿಗಾಗಿ ಮತ್ತು ಮಹಿಳೆಯರಿಗೆ ನೆಲದಡಿಯಲ್ಲಿನ (ಕಲ್ಲಿದ್ದಲು ಗಣಿ) ಕೆಲಸಗಳ ಮತ್ತು ಯಾವ ಕೆಲಸಗಳು ಮಹಿಳೆಯರಿಗೆ ಹಾನಿಕಾರಕವಾಗಿರುತ್ತವೋ ಅಂತಹ ಎಲ್ಲಾ ಶಾಖೆಗಳಲ್ಲಿನ ಕೆಲಸಗಳ ನಿಷೇಧಕ್ಕಾಗಿ ಭಾರತದ ಕಮ್ಯುನಿಸ್ಟ್ ಪಕ್ಷ ಹೋರಾಡುತ್ತದೆ."

"ಹೆರಿಗೆಯ ಎರಡು ತಿಂಗಳು ಮುಂಚೆ ಮತ್ತು ಎರಡು ತಿಂಗಳ ನಂತರದವರೆಗೆ ಪೂರ್ಣ ವೇತನದೊಂದಿಗಿನ ರಜಾಕ್ಕಾಗಿ, ಆ ಸಮಯದಲ್ಲಿ ಉಚಿತ ವೈದ್ಯಕೀಯ ನೆರವಿಗಾಗಿ ಮತ್ತು ಮಹಿಳೆಯರನ್ನು ನೇಮಿಸಿಕೊಳ್ಳುವ ಎಲ್ಲಾ ಕಾರ್ಖಾನೆಗಳಲ್ಲಿ ಮತ್ತು ವರ್ಕ್‌ಶಾಪುಗಳಲ್ಲಿ ಶಿಶುಪಾಲನಾ ಕೇಂದ್ರಗಳನ್ನು ಮಾಲೀಕರ ಖರ್ಚಿನಲ್ಲಿ ಒದಗಿಸಬೇಕೆಂಬ ಒತ್ತಾಯ ಮಾಡಲು ಭಾರತದ ಕಮ್ಯುನಿಸ್ಟ್ ಪಕ್ಷ ಹೋರಾಡುತ್ತದೆ."

"16 ವಯಸ್ಸಿನವರೆಗೆ ವಿದ್ಯಾರ್ಥಿಗಳ ರಾಷ್ಟ್ರೀಯ ಭಾಷೆಗಳಲ್ಲಿ ಸಾರ್ವತ್ರಿಕ, ಉಚಿತ ಹಾಗೂ ಕಡ್ಡಾಯ ಶಿಕ್ಷಣಕ್ಕಾಗಿ, ಸರ್ಕಾರದ ಖರ್ಚಿನಲ್ಲಿ ಉಚಿತ ಆಹಾರ, ಬಟ್ಟೆ ಮತ್ತು ಪಠ್ಯಪುಸ್ತಕಗಳ ಪೂರೈಕೆಗಾಗಿ ಭಾರತದ ಕಮ್ಯುನಿಸ್ಟ್ ಪಕ್ಷ ಹೋರಾಡುತ್ತದೆ. ಸರ್ಕಾರ ಮತ್ತು ಮಾಲೀಕರ ಖರ್ಚಿನಲ್ಲಿ ಯುವಜನರಿಗೆ ಔದ್ಯೋಗಿಕ ತರಬೇತಿಯನ್ನು ಆರಂಭಿಸಲು ಭಾರತದ ಕಮ್ಯುನಿಸ್ಟ್ ಪಕ್ಷ ಒತ್ತಾಯಿಸುತ್ತದೆ."

ಸರಿಯಾದ ಕಾರ್ಯಕ್ರಮವನ್ನು ಮಂಡಿಸುವಾಗಲೇ, ಈ ಕಾರ್ಯಾಚರಣೆಯ ವೇದಿಕೆಯು ಕೆಲವು ದೋಷಗಳನ್ನು ಮತ್ತು ತಪ್ಪು ತಿಳುವಳಿಕೆಯನ್ನು ಒಳಗೊಂಡಿತ್ತು. ಸಾಮ್ರಾಜ್ಯಶಾಹಿ, ಭೂಮಾಲೀಕರು, ಲೇವಾದೇವಿಗಾರರು ಮತ್ತ ಬಂಡವಳಿಗರ ವಿರುದ್ಧ ಒಂದು ಸಂಯುಕ್ತ ರಂಗವನ್ನು ರಚಿಸಬೇಕೆಂದು ಅದು ಶ್ರಮಜೀವಿಗಳಿಗೆ ಕರೆ ಕೊಟ್ಟಿತ್ತು. ಆದ್ದರಿಂದ, ಸಾಮ್ರಾಜ್ಯಶಾಹಿ- ವಿರೋಧಿ ಸಂಯುಕ್ತ ರಂಗದಿಂದ ಅದು ಸಾಮ್ರಾಜ್ಯಶಾಹಿ, ಪಾಳೇಗಾರಿ ಪದ್ಧತಿ ಮತ್ತು ಬಂಡವಾಳಶಾಹಿಯ ವಿರುದ್ಧ ರಂಗದ ರಚನೆಗೆ ಬಂದು ಮುಟ್ಟಿತು. ಈ ತಿಳುವಳಿಕೆಯಿಂದ ಅದು ಸೋವಿಯತ್ ಅಧಿಕಾರದ ಸ್ಥಾಪನೆಗೆ ಕರೆ ನೀಡಿತು. ನಂತರದಲ್ಲಿ 1934 ರಲ್ಲಿ ಕಾರ್ಯಕ್ರಮಾತ್ಮಕ ದಸ್ತಾವೇಜನ್ನು ಅಂಗೀಕರಿಸುವುದರೊಂದಿಗೆ ಈ ತಪ್ಪುಗಳನ್ನು ಸರಿಪಡಿಸಲಾಯಿತು. ಆದರೆ ಬಿ.ಟಿ.ರಣದೀವೆ ಹೇಳಿದಂತೆ:"ನೇರವಾಗಿ ಭಾರತೀಯ ಜನಗಳ ಎಲ್ಲಾ ವಿಭಾಗಗಳ ಸಮಸ್ಯೆಗಳನ್ನು ಮತ್ತು ಕ್ರಾಂತಿಕಾರಿ ಹೋರಾಟದ ತಕ್ಷಣದ ಅಗತ್ಯಗಳನ್ನು ಉದ್ದೇಶಿಸಿದ ಇಂತಹ ಒಂದು ಕ್ರಾಂತಿಕಾರಿ ದಸ್ತಾವೇಜನ್ನು ಭಾರತವು ಹಿಂದೆಂದಿಗೂ ಕಂಡಿರಲಿಲ್ಲ."

ಇಂದಿನ ಪ್ರಧಾನಿಗಳಿಗೆ ರಾಜಧರ್ಮವನ್ನು ಜನಗಳೇ ನೆನಪಿಸಬೇಕಾಗಿದೆ

ಪುಟ 12 ರಿಂದ

ಎಂಬ ಹೆಸರು ಇರುವುದೇ ಘೋರ ಅಪರಾಧವಾಗುವ ಪರಿಸ್ಥಿತಿ ಈಗ ನಿರ್ಮಾಣವಾಗಿದೆ ಎಂದರು. ಒಬ್ಬ ನಿವೃತ್ತ ಐಜಿಯ ಮೇಲೆಯೇ ಇಂತಹ ಚಿತ್ರಹಿಂಸೆ ಮಾಡುತ್ತಾರಾದರೆ ಸಾಮಾನ್ಯ ಜನಗಳ ಪರಿಸ್ಥಿತಿಯೇನು ಎಂದು ಯಾರಾದರೂ ಊಹಿಸಿಕೊಳ್ಳಬಹುದು ಎಂದು ಅವರು ಹೇಳಿದರು.

ಡಿ. ರಾಜ ಮಾತಾಡುತ್ತ ಪ್ರತಿಪಕ್ಷಗಳು ಸುಳ್ಳು ಹರಡಿಸುತ್ತಿವೆ ಎಂದು ಸರಕಾರ ಹೇಳುತ್ತಿದೆ, ಆದರೆ ಪ್ರತಿಪಕ್ಷಗಳು ಎತ್ತಿರುವ ಪ್ರಶ್ನೆಗಳಲ್ಲಿ ಒಂದಕ್ಕೂ ಉತ್ತರ ನೀಡುವುದು ಅವರಿಗೆ ಆಗಿಲ್ಲ ಎಂದರು.

ಬೃಂದಾ ಕಾರಟ್ ಮಾತಾಡುತ್ತ ಒಂದು ಚುನಾಯಿತ ಸರಕಾರ ಭಿನ್ನಮತವನ್ನು ದಬಾಯಿಸಲು ಫ್ಯಾಸಿಸ್ಟ್ ತೆರನ ದಮನಕ್ಕೆ ಇಳಿದಿರುವಾಗ ನಾಗರಿಕರಿಗೆ ಪರಿಹಾರ ಹೇಗೆ ಎಂಬುದೀಗ ನಮ್ಮ ಮುಂದಿರುವ ಪ್ರಶ್ನೆ ಎಂದರು. ಗುಜರಾತ್ ಹತ್ಯಾಕಾಂಡ ನಡೆದಾಗ ಮಾನವ ಹಕ್ಕುಗಳ ಆಯೋಗ ಸ್ವಲ್ಪವಾದರೂ ಪರಿಹಾರವನ್ನು ಒದಗಿಸಿತು. ಆದರೆ ಇಂದು ಆ ಆಯೋಗ ಎಲ್ಲಿದೆ, ಈ ಹಿಂದೆ ಮಾನವ ಹಕ್ಕುಗಳ ದಮನದ ಸಂದರ್ಭಗಳಲ್ಲಿ ಮಧ್ಯಪ್ರವೇಶಿಸಿದ್ದ ಸುಪ್ರಿಂ ಕೋರ್ಟ್ ಕೂಡ ಇಷ್ಟೆಲ್ಲ ನಡೆಯುತ್ತಿರುವಾಗ ಸುಮ್ಮನಿದ್ದರೆ ಸಾಮಾನ್ಯ ನಾಗರಿಕರು ಯಾರನ್ನು ಕೇಳಬೇಕು ಎಂದು ಖಾರವಾಗಿ ಪ್ರಶ್ನಿಸಿದರು.

ಗುಜರಾತಿನಲ್ಲಿ ಹತ್ಯಾಕಾಂಡ ನಡೆದಾಗ ಅಲ್ಲಿನ ಮುಖ್ಯಮಂತ್ರಿ ಮೋದಿಗೆ 'ರಾಜಧರ್ಮ' ಪಾಲಿಸಿ ಎಂದು ನೆನಪಿಸುವ ಒಬ್ಬ ಪ್ರಧಾನ ಮಂತ್ರಿಗಳಿದ್ದರು. ಇಂದು ಆ ಮೋದಿಯವರೇ ಪ್ರಧಾನ ಮಂತ್ರಿಯಾಗಿದ್ದಾರೆ. ಅವರಿಗೆ ಈಗ ಈ ರೀತಿ ನೆನಪಿಸುವವರು ಯಾರೂ ಇಲ್ಲ, ಅದನ್ನು ಜನಗಳೇ, ನಾವು, ನೀವು ಮಾಡಬೇಕಾಗಿದೆ, ಒಟ್ಟಾಗಿ ಮಾಡೋಣ ಎಂದು ಕೊನೆಯಲ್ಲಿ ಯೆಚುರಿ ಹೇಳಿದರು.

ಮುಷ್ಕರ ನಿರತ ಫ್ರೆಂಚ್ ಕಾರ್ಮಿಕ : 2019 'ವರ್ಷದ ವ್ಯಕ್ತಿ' ಆಗಬೇಕಿತ್ತು

ಅಮೆರಿಕದ 'ಟೈಮ್' ಪತ್ರಿಕೆ ಕಳೆದ ವಾರ ಹವಾಮಾನ ಕಾರ್ಯಕರ್ತೆ ಗ್ರೇಟಾ ಥನ್ ಬರ್ಗ್‌ರನ್ನು 2019 ವರ್ಷದ ವ್ಯಕ್ತಿ ಎಂದು ಹೆಸರಿಸಿದೆ. ಆದರೆ, ವಾಸ್ತವದಲ್ಲಿ ಈ ಬಾರಿ ಜಾಗತಿಕ ಅಶಾಂತಿಯ ವರ್ಷವಾಗಿತ್ತು ಮತ್ತು ವಿಶ್ವದಾದ್ಯಂತ ಕಾರ್ಮಿಕರು ತಮ್ಮ ಜೀವನೋಪಾಯಕ್ಕಾಗಿ ಬೀದಿಗಿಳಿದು, ಹೆಚ್ಚು ಹೆಚ್ಚು ದಬ್ಬಾಳಿಕೆ ಮತ್ತು ಅತ್ಯಾಚಾರವೆಸಗಿದ ನವ-ಉದಾರವಾದಿ ಬಂಡವಾಳಶಾಹಿ ಧೋರಣೆಗಳ ದುಷ್ಪರಿಣಾಮಗಳನ್ನು ಎದುರಿಸಲು ಹೋರಾಟ ನಡೆಸಿದ ವರ್ಷವಾಗಿತ್ತು ಎಂಬುದನ್ನು 'ಟೈಮ್' ಕಡೆಗಣಿಸಿದೆ ಎಂದು ಅಮೆರಿಕನ್ ಕಮ್ಯುನಿಸ್ಟ್ ಪಕ್ಷದ ವಾರಪತ್ರಿಕೆ 'ಪೀಪಲ್ಸ್ ವಿಕ್ಲೀ ವರ್ಲ್ಡ್' ಟೀಕಿಸಿದೆ. ಈ ನಿಟ್ಟಿನಲ್ಲಿ ನಿಜವಾದ ವರ್ಷದ ವ್ಯಕ್ತಿ "ಫ್ರೆಂಚ್ ಕಾರ್ಮಿಕ" ಆಗಬೇಕಾಗಿತ್ತು. ಈ ಕಾರ್ಮಿಕರು ಫ್ರೆಂಚ್ ಪಿಂಚಣಿ ವ್ಯವಸ್ಥೆಯನ್ನು ಉಳಿಸಲು ಕಳೆದ ಜುಲೈ ತಿಂಗಳಿನಿಂದ ಸತತ ಧೀರ್ಘ ಹೋರಾಟಗಳಲ್ಲಿ ನಿರತರಾಗಿದ್ದಾರೆ ಮಾತ್ರವಲ್ಲದೆ ಇನ್ನೂ ಈ ಹೋರಾಟ 2020ರಲ್ಲಿ ಮುಂದುವರಿಯುತ್ತಿದೆ ಎಂಬುದನ್ನು ಗಮನಿಸಬೇಕಾಗಿದೆ ಎಂದಿದೆ.

ನವ ಉದಾರವಾದದ ವಿರುದ್ಧ ಭುಗಿಲೆದ್ದ ಕ್ಷಿಪ್ರ ಪ್ರತಿಭಟನೆಗಳು

ಬೊಲಿವಿಯಾ ದಲ್ಲಿ ಕ್ಷಿಪ್ರ-ಕ್ರಾಂತಿಯ ನಂತರದ ಹಾಗೂ ಅಲ್ಜೀರಿಯಾ, ಇರಾನ್, ಇರಾಕ್, ಲೆಬನಾನ್, ಚಿಲಿ, ಕೊಲಂಬಿಯಾ ಗಳಲ್ಲಿ ಜನರ ಚಳುವಳಿಗಳು, ನವ-ಉದಾರವಾದದ ವಿರುದ್ಧ ಆಯಾ ಸರ್ಕಾರಗಳಿಗೆ ಸವಾಲು ಎಸೆದಿವೆ ಮತ್ತು ಸಮಾನತೆಗಾಗಿ ಹೋರಾಟ ನಡೆಸುತ್ತಾ ಬೀದಿಗಿಳಿದಿವೆ. ಚಿಲಿಯಲ್ಲಿ ಮೆಟ್ರೋ ಶುಲ್ಕದಲ್ಲಿ ಶೇ.4 ರಷ್ಟು ಹೆಚ್ಚಳದಿಂದ ಮೊದಲು ಶಾಂತಿಯುತವಾಗಿ ಆರಂಭಗೊಂಡಿತು. ಅಲ್ಲಿನ ಸರ್ಕಾರ ಈ ಹೋರಾಟವನ್ನು ನಿಷ್ಕ್ರಿಯಗೊಳಿಸಲು, ತೀವ್ರವಾಗಿ ಸದೆಬಡೆಯಿತು. ಚಿಲಿಯ ಸರ್ಕಾರ ಹೋರಾಟಗಾರರನ್ನು ಸದೆಬಡಿದು ಬೆಲೆ ಹೆಚ್ಚಳದಿಂದ ಶ್ರೀಮಂತರಿಗೆ ಉಡುಗೊರೆ ನೀಡುವಂತಿತ್ತು. ಇದೀಗ ಈ ಚಳುವಳಿ ಹೊಸ ಸ್ವರೂಪ ಪಡೆದು ಚಿಲಿಯಲ್ಲಿ ಕ್ರಾಂತಿಗೆ ಕಾರಣವಾಗುತ್ತಿದೆ.

ಫ್ರಾನ್ಸ್ ನಲ್ಲಿಯೂ ಕೂಡಾ, ಕಳೆದ ಜುಲೈನಿಂದ ನಿರಂತರವಾಗಿ ಬೀದಿಗಿಳಿದು ಅಲ್ಲಿನ ಕಾರ್ಮಿಕರು, ಸರ್ಕಾರದ ಯೋಜಿತ ವಿವಾದಾತ್ಮಕ ಪಿಂಚಣಿ ಯೋಜನೆಯ ಪ್ರಸ್ತಾವನೆಗಳ ವಿರುದ್ಧ ಪ್ರತಿಭಟನೆ ನಡೆಸಿಕೊಂಡು ಬಂದಿದ್ದರು. ಆದಾಗ್ಯೂ ಸರ್ಕಾರ ಬಗ್ಗಲಿಲ್ಲ. ಕೊನೆಗೆ ಜನವರಿ 11 ರಂದು, 10 ಲಕ್ಷಕ್ಕೂ ಮೀರಿದ ಜನಸ್ತೋಮ ಬೀದಿಗಿಳಿದು ಪ್ರತಿಭಟನೆಯಲ್ಲಿ ಪಾಲ್ಗೊಂಡಿತು. ಬೆದರಿದ ಮ್ಯಾಕ್ರಾನ್ ಸರ್ಕಾರ ಮರುದಿನವೇ ರಿಯಾಯಿತಿಗಳನ್ನು ಮಂಡಿಸಿತು.

ಹಲವಾರು ದಿನಗಳಿಂದ ಪ್ರತಿಭಟನೆ ನಡೆಸುತ್ತಿರುವ ಸಾರಿಗೆ ಕಾರ್ಮಿಕರನ್ನು, ವಾಯು ಸಂಚಾರ ನಿಯಂತ್ರಕರು ಮತ್ತು ಆಸ್ಪತ್ರೆ ಸಿಬ್ಬಂದಿ ನೌಕರರು ಕೂಡ ಸೇರಿಕೊಂಡಿದ್ದಾರೆ. ಮ್ಯಾಕ್ರಾನ್ ರ ವಿಭಜಿಸುವ ನೀತಿಗಳಿಂದಾಗಿ ಕೆಟ್ಟದಾಗಿ ವಿಂಗಡಿಸಲ್ಪಟ್ಟಿದ್ದ ಹಲವಾರು ಕಾರ್ಮಿಕ ಒಕ್ಕೂಟಗಳು ಇದೀಗ ಒಗ್ಗಟ್ಟಾಗಿ ಪಿಂಚಣಿ ಹೋರಾಟದ ಭಾಗವಾಗಿದ್ದಾರೆ. ಇತ್ತೀಚಿನ ಯುರೋಪಿಯನ್ ಪಾರ್ಲಿಮೆಂಟ್ ಚುನಾವಣೆಗಳಲ್ಲಿ ಎಡ-ಪ್ರಗತಿಪರ ಪಕ್ಷಗಳಲ್ಲಿ ಅತ್ಯಂತ ಹೆಚ್ಚಿನ ಮತಗಳನ್ನು ಗಳಿಸಿದ್ದ ಎಡಪಂಥೀಯ ನಿಯಂತ್ರಣದಲ್ಲಿರುವ ➚

ಕಾರ್ಮಿಕರ ದೀರ್ಘ ಬೃಹತ್ ಹೋರಾಟ

ಫ್ರೆಂಚ್ ಪಿಂಚಣಿ ಬದಲಾವಣೆಗಳು: ಸಂಪೂರ್ಣ ಹಿಂಪಡೆತಕ್ಕೆ ಒತ್ತಾಯ



ಫ್ರೆಂಚ್ ಕಾರ್ಮಿಕರ ಒಕ್ಕೂಟ ಹಲವಾರು ತಿಂಗಳುಗಳ ಕಾಲ ನಡೆಸಿದ ಮುಷ್ಕರ, ಪ್ರತಿಭಟನೆಗಳು ಮುಂತಾದ ಹೋರಾಟಗಳ ಫಲದಿಂದಾಗಿ, ಅಧ್ಯಕ್ಷ ಎಮ್ಯಾನುಯೆಲ್ ಮ್ಯಾಕ್ರಾನ್ ರವರ ಸರ್ಕಾರವು, ಪಿಂಚಣಿ ವ್ಯವಸ್ಥೆಯಲ್ಲಿ ಪ್ರಮುಖ ಬದಲಾವಣೆಯ ಪ್ರಸ್ತಾವಗಳಲ್ಲಿ ರಿಯಾಯಿತಿಯನ್ನು ಘೋಷಿಸುವಂತೆ ಮಾಡಿದೆ. ಇದು ಹೋರಾಟಕ್ಕೆ ಸಂದ ಜಯವೆಂದೇ ಕೆಲವರು ಪರಿಗಣಿಸಿದ್ದಾಗ್ಯೂ, ಕಮ್ಯುನಿಸ್ಟ್ ನಾಯಕತ್ವದ ಸಿಜಿಟಿ ಸೇರಿದಂತೆ ಪ್ರಮುಖ ಕಾರ್ಮಿಕ ಸಂಘಟನೆಗಳು ಇದನ್ನು ತಿರಸ್ಕರಿಸಿವೆ. ಸಾಕಷ್ಟು ವಿವಾದಾತ್ಮಕ ಅಂಶಗಳನ್ನು ಹೊಂದಿರುವ ಪಿಂಚಣಿ ವ್ಯವಸ್ಥೆಯಲ್ಲಿನ ಬದಲಾವಣೆಗಳನ್ನು ಪೂರ್ಣವಾಗಿ ಹಿಂಪಡೆಯಬೇಕೆಂದು ಆಗ್ರಹಪಡಿಸಿವೆ.

ಸರಕಾರದ ಮೊದಲಿನ ಪ್ರಸ್ತಾವಿತ ಬದಲಾವಣೆಗಳ ಪ್ರಕಾರ ಪೂರ್ಣಪ್ರಮಾಣದ ಪ್ರಯೋಜನಗಳೊಂದಿಗೆ ಪಿಂಚಣಿ ನೀಡಲು ಬೇಕಾದ ವಯಸ್ಸನ್ನು 64 ಎಂದು ಮಾಡಲಾಗಿತ್ತು. ಈಗ ನಿವೃತ್ತಿ ವಯಸ್ಸು 62 ಇದೆ. ಪೂರ್ಣ ಪಿಂಚಣಿಗೆ 2 ವರ್ಷ ಹೆಚ್ಚು ಕೆಲಸ ಮಾಡಬೇಕು ಅಥವಾ ಪಿಂಚಣಿಯಲ್ಲಿ ಕಡಿತವಾಗುತ್ತದೆ ಎಂಬುದು ಇದರರ್ಥ. ಸರ್ಕಾರದ ಘೋಷಿಸಿರುವ ರಿಯಾಯಿತಿ ಪ್ರಕಾರ, ಪೂರ್ಣಪ್ರಮಾಣದ ಪ್ರಯೋಜನಗಳೊಂದಿಗೆ ಪಿಂಚಣಿ ನೀಡಲು ಬೇಕಾದ ವಯಸ್ಸನ್ನು 64 ರಿಂದ (ಹಿಂದೆ ಇದ್ದಂತೆ) 62 ಕ್ಕೆ ಇಳಿಸಲಾಗಿದೆ. ಇದೊಂದು ಸಕಾರಾತ್ಮಕ ಬೆಳವಣಿಗೆಯಾದರೂ ಸಹಾ, ಪಿಂಚಣಿ ವ್ಯವಸ್ಥೆಯ ಬದಲಾವಣೆಗಳಲ್ಲಿ ಇನ್ನೂ ಹಲವು ವಿವಾದಾತ್ಮಕ ಅಂಶಗಳು ಇವೆ. ಅವನ್ನೂ ಹಿಂಪಡೆಯಬೇಕು ಎಂದು ಪ್ರಮುಖ ಫ್ರೆಂಚ್ ಕಾರ್ಮಿಕ ಸಂಘಟನೆಗಳು ವಾದಿಸಿವೆ.

ಫ್ರಾನ್ಸಿನಲ್ಲಿ ಪ್ರಸ್ತುತ ವಿವಿಧ ವೃತ್ತಿಗಳಿಗೆ ಅನುಗುಣವಾಗಿ, 42 ವಿವಿಧ ಪಿಂಚಣಿ ಯೋಜನೆಗಳಿವೆ. ಯೋಜಿತ ಹೊಸ ಪಿಂಚಣಿ ಸೌಲಭ್ಯಗಳನ್ನು ನೀಡುವಾಗ, ಇವೆಲ್ಲವೂಗಳನ್ನು ಒಂದು ಕೇಂದ್ರಿಕೃತ ಅಂಕ–ಆಧಾರಿತ ಪಿಂಚಣಿ ವ್ಯವಸ್ಥೆಯನ್ನು ತರಲು ಮ್ಯಾಕ್ರಾನ್ ಸರ್ಕಾರ ಯೋಜಿಸಿತ್ತು. ಈ ಯೋಜನೆ ಪ್ರಕಾರ ನೌಕರರು ತಮ್ಮ ವೃತ್ತಿ ಜೀವನದ ಅವಧಿಯಲ್ಲಿ ನೀಡಿದ ಕೊಡುಗೆಗಳನ್ನು ಅಂಕಗಳಾಗಿ ವರ್ಗೀಕರಿಸಲಾಗುತ್ತದೆ. ಇದನ್ನು 'ಯುರೋ' ಗಳಲ್ಲಿ ಅವರ ಪಿಂಚಣಿ ಮೊತ್ತವನ್ನು ಲೆಕ್ಕ ಹಾಕಲು ಬಳಸಲಾಗುತ್ತದೆ. ಈವರೆಗೆ ಪ್ರತಿ ಮೌಲ್ಯದ ಅಂಕಕ್ಕೂ ನಿರ್ದಿಷ್ಟ ಮೌಲ್ಯ ಮಾಪನವನ್ನು ನೀಡಲಾಗಿಲ್ಲ. ಏಕೆಂದರೆ, ಅದು ಆರ್ಥಿಕತೆಯ ಏರಿಳಿತಗಳಿಗೆ ಒಳಪಟ್ಟಿರುತ್ತದೆ. ಈ ಇಡೀ ಲೆಕ್ಕಾಚಾರ ಪಿಂಚಣಿಯ ಮೊತ್ತವನ್ನು ಅನಿಶ್ಚಿತಗೊಳಿಸುತ್ತದೆ, ಕಡಿತಗೊಳಿಸುತ್ತದೆ ಮತ್ತು ಕ್ರಮೇಣ ಕಳಚಿ ಹಾಕಿ ಬಿಡುತ್ತದೆ ಎಂಬುದು ಮುಖ್ಯ ವಿವಾದಾತ್ಮಕ ಅಂಶ. 2019 ರ ಜುಲೈನಲ್ಲಿ ಇದನ್ನು ಪ್ರಸ್ತಾಪಿಸಲಾಗಿತ್ತು ಹಾಗೂ 2020 ರಿಂದ ಈ ಹೊಸ ವಿವಾದಾತ್ಮಕ ಪಿಂಚಣಿ ಯೋಜನೆಯನ್ನು ಜಾರಿಗೆ ತರಲು ಸರ್ಕಾರ ನಿರ್ಧರಿಸಿತ್ತು.

ಕಾರ್ಮಿಕ ಸಂಘಟನೆಗಳಾದ ಸಿಜಿಟಿ, ವರ್ಕರ್ಸ್ ಫೋರ್ಸ್, ಸಾಲಿಡೈರ್ಸ್, ಎಫ್.ಎಸ್.ಯು, ಯು.ಎನ್.ಇ.ಎಫ್, ಎಂ.ಎನ್.ಎಲ್ ಸೇರಿದಂತೆ ಎಲ್ಲಾ ಪ್ರಮುಖ ಕಾರ್ಮಿಕ ಸಂಘಟನೆಗಳ ಒಕ್ಕೂಟ, ಕಳೆದ ಜುಲೈನಲ್ಲಿ ಈ ಹೊಸ ವಿವಾದಾತ್ಮಕ ಪಿಂಚಣಿ ಘೋಷಣೆಯಾದ ನಂತರದಿಂದ ಪ್ರತಿಭಟನೆ, ಮುಷ್ಕರಗಳನ್ನು ನಡೆಸುತ್ತಾ ಬಂದಿವೆ. ಸರ್ಕಾರ ಇವರ ಮುಷ್ಕರಕ್ಕೆ ಕಿವಿಗೊಡದ ಕಾರಣ, ಡಿಸೆಂಬರ್ ತಿಂಗಳು ಪೂರ್ತಿ ಮುಷ್ಕರಗಳ ಮೂಲಕ ಪ್ರತಿಭಟನೆಗಳನ್ನು ತೀವ್ರಗೊಳಿಸಲಾಗಿತ್ತು. ಪ್ರತಿಭಟನೆಯ 38 ನೇ ದಿನವಾದ ಜನವರಿ 11ರಂದು ಸುಮಾರು 5 ಲಕ್ಷಕಿಂತ ಮಿಗಿಲಾಗಿ ಕಾರ್ಮಿಕರು ಫ್ರಾನ್ಸ್ ನ ಬೀದಿಗಳಲ್ಲಿ ಜಮಾಯಿಸಿದ್ದರು ಎಂದು ವರದಿಯಾಗಿದೆ. ಒಟ್ಟು 163 ಪ್ರತಿಭಟನೆಗಳನ್ನು ಆಯೋಜಿಸಲಾಗಿತ್ತು. ಈ ಹೊಸ ವಿವಾದಾತ್ಮಕ ಪಿಂಚಣಿ ಯೋಜನೆಯನ್ನು ಸಂಪೂರ್ಣವಾಗಿ ಹಿಂಪಡೆಯಬೇಕೆಂದು, ಜನವರಿ 14–16 ರ 3 ದಿನಗಳ ಕಾಲ ಮತ್ತಷ್ಟು ಬೃಹತ್ತಾದ ಪ್ರತಿಭಟನೆಗಳು ನಡೆದಿವೆ.

ಫ್ರೆಂಚ್ ಕಾರ್ಮಿಕರ ಪ್ರತಿಭಟನೆಗಳು 40 ದಿನ ದಾಟಿದ್ದು 2019ರ ಕೊನೆಯ ತ್ರೈಮಾಸಿಕ ಆರ್ಥಿಕದ ಯೋಜಿತ ಶೇ. 0.2 ಬೆಳವಣಿಗೆಯ ಏರಿಕೆಯಲ್ಲಿ ಶೇ. 0.1ನ್ನು ಕಡಿತಗೊಳಿಸಿದೆ ಎಂದು ಅಧ್ಯಯನಗಳು ತಿಳಿಸಿವೆ. ಆದರೂ ಫ್ರೆಂಚ್ ಸರಕಾರ ಈ ಪಿಂಚಣಿ ವ್ಯವಸ್ಥೆಯ ಬದಲಾವಣೆಯ ಪ್ರಸ್ತಾವವನ್ನು ಹಿಂಪಡೆಯಲು ಸಿದ್ಧವಿಲ್ಲ. ಫ್ರೆಂಚ್ ಕಾರ್ಮಿಕ ವರ್ಗ ಸಹ ಇದನ್ನು ಒಪ್ಪಲು ಸಿದ್ಧವಿಲ್ಲ.

ಜಗದ ಸುತ್ತ

ನಾಗರಾಜ ನಂಜುಂಡಯ್ಯ

➘ ಗ್ರೀನ್ ಪಕ್ಷ ಒಳಗೊಂಡಂತೆ ಎಲ್ಲಾ ಎಡಪಂಥೀಯ ಪಕ್ಷಗಳು ಈ ಹೋರಾಟದಲ್ಲಿ ಸೇರಿಕೊಂಡಿದ್ದಾರೆ.

ಮ್ಯಾಕ್ರಾನ್ ಸರ್ಕಾರದ ಒಟ್ಟಾರೆ ನೀತಿಗಳು ನವ ಉದಾರವಾದ ನೀತಿಗಳ ಭಾಗವಾಗಿದೆ ಎಂಬುದರಲ್ಲಿ ಯಾವುದೇ ಸಂಶಯವಿಲ್ಲ. ಸಾರ್ವಜನಿಕ ವ್ಯವಸ್ಥೆಗಳನ್ನು ಸಂಪೂರ್ಣವಾಗಿ, ಖಾಸಗಿಕರಣಗೊಳಿಸುವುದೇ ಇದರ ಮೂಲ ಉದ್ದೇಶವಾಗಿದೆ. ಮ್ಯಾಕ್ರಾನ್ ಸರ್ಕಾರ ಈಗಾಗಲೇ ದೇಶದ ಎರಡು ಪ್ರಮುಖ ಹಣಕಾಸು ಉತ್ಪನ್ನ ತಯಾರಕರಾದ, ಮೊದಲಿಗೆ, ಪ್ಯಾರಿಸ್ ವಿಮಾನ ನಿಲ್ದಾಣದ ಜಮೀನುಗಳನ್ನು ರಿಯಾಯಿತಿ ದರಗಳಲ್ಲಿ, ಹಾಗೆಯೇ ಎರಡನೆಯದಾಗಿ, ಸರ್ಕಾರದ ಲೊಟ್ಟೊ ಅಥವಾ ಗೇಮಿಂಗ್ ಫ್ರ್ಯಾಂಚೈಸ್ ಗಳನ್ನು ಮಾರಾಟ ಮಾಡಲು ಅಥವಾ ಶಾಶ್ವತವಾಗಿ ಗುತ್ತಿಗೆ ನೀಡಲು ಯೋಜನೆಗಳನ್ನು ಸಿದ್ದಗೊಳಿಸಿದೆ. ಖಾಸಗೀಕರಣಕ್ಕೆ ಮೊದಲು ಕಾರ್ಮಿಕರ ಸವಲತ್ತುಗಳನ್ನು ಸಾಧ್ಯವಿದ್ದಷ್ಟು ಕಡಿತ ಮಾಡುವ ನಿಟ್ಟಿನಲ್ಲಿ ಹೊಸ ಪಿಂಚಣಿ ಯೋಜನೆಯನ್ನು ರೂಪಿಸಲಾಗಿದೆ. ಸಾಲದ್ದಕ್ಕೆ ಹೊಸ ಪಿಂಚಣಿ ವ್ಯವಸ್ಥೆಯನ್ನು ರೂಪಿಸಿದ 'ಪರಿಣತ' ದೈತ್ಯ ವಿಮಾ ಕಂಪನಿಯಿಂದ ಹಣ ಪಡೆಯುತ್ತಿದ್ದ ಎಂಬುದು ಬಯಲಾಗಿ ಆತ ರಾಜೀನಾಮೆ ಕೊಡಬೇಕಾಗಿ ಬಂದಿದೆ. ಪಿಂಚಣಿ ವ್ಯವಸ್ಥೆ ದುರ್ಬಲವಾಗುವುದರಿಂದ ವಿಮಾ ಕಂಪನಿಗಳ ವಹಿವಾಟು ಹೆಚ್ಚುತ್ತದೆ ಎನ್ನುವುದು ಸರ್ವ ವಿದಿತ ಸಂಗತಿ. ಹೀಗೆ ಫ್ರೆಂಚ್ ಸರಕಾರದ ಹುನ್ನಾರ ಬಯಾಗಿದೆ.


ಪ್ಯಾರಿಸಿನಾದ್ಯಂತ, ಕಾರ್ಮಿಕರೊಂದಿಗೆ ಲಕ್ಷಾಂತರ ಜನರು ದಿನದಿಂದ ದಿನಕ್ಕೆ ಹೋರಾಟದ ಕಣಕ್ಕೆ ಹೆಚ್ಚು ಹೆಚ್ಚಾಗಿ ಧುಮುಕುತ್ತಿದ್ದಾರೆ. ಎಲ್ಲ ಕಾರ್ಮಿಕರಿಗಾಗಿ ಜನತೆಗಾಗಿ, ಅಕ್ಷರಶಃ ತಮ್ಮ ಜೀವನ ಮತ್ತು ತಮ್ಮ ಮಕ್ಕಳ ಭವಿಷ್ಯದ ಜೀವನಕ್ಕಾಗಿ ಕಾರ್ಮಿಕರು ಹೋರಾಡುತ್ತಿದ್ದಾರೆ ಎಂದು ಬಹುಸಂಖ್ಯಾತ ಜನ ಭಾವಿಸಿದ್ದಾರೆ. ಮುಷ್ಕರದಿಂದ ಪ್ಯಾರೀಸಿನ ಜನ ಅತ್ಯಂತ ಕಷ್ಟಕ್ಕೆ ಒಳಗಾಗಿದ್ದರೂ ಕಾರ್ಮಿಕರಿಗೆ ಬೆಂಬಲವಾಗಿ ನಿಂತಿದ್ದಾರೆ.

ಫ್ರಾನ್ಸ್ ನ ಈಗಿರುವ ಉತ್ತಮ ಪಿಂಚಣಿ ವ್ಯವಸ್ಥೆಯಿಂದಾಗಿ, ಅಲ್ಲಿನ ಜನರ ಜೀವಿತಾವಧಿಯು ಹೆಚ್ಚುತ್ತಲೇ ಇದೆ. ಆದರೆ, ಯುಎಸ್ ನಲ್ಲಿ ಕ್ಷೀಣಿಸುತ್ತಿರುವ ಪಿಂಚಣಿ ವ್ಯವಸ್ಥೆಯಿಂದಾಗಿ ಜೀವಿತಾವಧಿಯು ಕೂಡ ಕ್ಷೀಣಿಸುತ್ತಿರುವುದು ವರದಿಯಾಗಿದೆ. ಫ್ರಾನ್ಸ್ ನಲ್ಲಿ 65 ವರ್ಷಕ್ಕಿಂತ ಮೇಲ್ಪಟ್ಟವರಲ್ಲಿ ಬಡತನದ ರೇಖೆಯ ಅಡಿಯಲ್ಲಿ ವಾಸಿಸುವವರ ಸಂಖ್ಯೆ ಕೇವಲ ಶೇ.5 ರಷ್ಟಿದ್ದರೆ, ಯುಎಸ್ ನಲ್ಲಿ ಶೇ. 20 ಇದೆ. ಇದೀಗ ಫ್ರಾನ್ಸ್ ನಲ್ಲಿ ಕಾರ್ಮಿಕರು ಸರಾಸರಿಯಾಗಿ ತಮ್ಮ ವೇತನದ ಶೇ. 67 ರಷ್ಟನ್ನು ಪಿಂಚಣಿಯಾಗಿ ಪಡೆಯುತ್ತಿದ್ದಾರೆ. ನೆರೆಯ ಜರ್ಮನಿಯಲ್ಲಿ ಈ ಪಾಲು ಕೇವಲ ಶೇ. 48. ಹೀಗೆ ಫ್ರೆಂಚ್ ಪಿಂಚಣಿ ಸೌಲಭ್ಯ ಸಾಮಾಜಿಕ ಭದ್ರತೆಯನ್ನು ಒದಗಿಸುವ ಪ್ರಮುಖ ಯೋಜನೆಯಾಗಿದೆ. ಇದರಿಂದ ಸರ್ಕಾರದ ಬೊಕ್ಕಸದ ಮೇಲೆ ಹೆಚ್ಚು ಹೊರೆಯಾಗುತ್ತಿಲ್ಲ.



ಮುಷ್ಕರದ ಆರಂಭದಲ್ಲಿ ನಡೆದ ಒಂದು ಸಮೀಕ್ಷೆಯಂತೆ, ಶೇ.59 ರಷ್ಟು ಫ್ರೆಂಚ್ ಜನರು, ಮುಷ್ಕರಕ್ಕೆ ಮ್ಯಾಕ್ರಾನ್ ಸರ್ಕಾರವೇ ಹೊಣೆ ಎಂದು ದೂಷಿಸಿದ್ದಾರೆ. ಸಾಮಾಜಿಕ ಕಲ್ಯಾಣ ಕಾರ್ಯಕ್ರಮಗಳ ಮೂಲಕ ಹಣಕಾಸನ್ನು ಜವಾಬ್ದಾರಿಯುತವಾಗಿ ನಿರ್ವಹಣೆ ಮಾಡುತ್ತಿರುವ ಸ್ವೀಡನ್ ದೇಶದ ಮಾದರಿಯನ್ನು ಫ್ರಾನ್ಸ್ ಅನುಸರಿಸುತ್ತದೆ ಎಂದು ಭರವಸೆ ಕೊಟ್ಟು ಮ್ಯಾಕ್ತಾನ್ ಅಧಿಕಾರಕ್ಕೆ ಬಂದರು. ಕಳೆದ 15 ವರ್ಷಗಳಲ್ಲಿ, ಸ್ವೀಡನ್‌ನಲ್ಲಿನ ಪಿಂಚಣಿದಾರರ ಸಂಖ್ಯೆ ದ್ವಿಗುಣಗೊಂಡಿದೆ. ಆದಾಗ್ಯೂ, ಮ್ಯಾಕ್ರಾನ್ ಸರ್ಕಾರ ಹೊಸ ಪಿಂಚಣಿ ಯೋಜನೆಯ ಮೂಲಕ ಈ ಸಾಮಾಜಿಕ ವ್ಯವಸ್ಥೆಯ ಮೇಲೆ ದಾಳಿ ಮಾಡಲು ಹೊರಟಿದೆ. ದೀರ್ಘ ಕಾಲ ಎಳೆದರೆ ಕಾರ್ಮಿಕರು ಜನ ಬೇಸತ್ತು ಇದಕ್ಕೆ ಒಪ್ಪಿಕೊಳ್ಳುತ್ತಾರೆ ಎಂಬುದು ಅವರ ಎಣಿಕೆ. ಆದರೆ ಇದನ್ನು ಫ್ರಾನ್ಸ್ ನ ಕಾರ್ಮಿಕರು ಅದ್ಭುತವಾದ ಒಗ್ಗಟ್ಟಿನ ಹೋರಾಟದ ಮೂಲಕ ಎದುರಿಸುತ್ತಿದ್ದಾರೆ. ಜನತೆ ಸಹ ನೂರಾರು ವರ್ಷಗಳ ಕಾರ್ಮಿಕರ–ಜನತೆಯ ಹೋರಾಟದ ಫಲವಾದ ಸಾಮಾಜಿಕ ಭದ್ರತೆಯ ಯೋಜನೆಗಳನ್ನು ಕಳಚುವುದರ ವಿರುದ್ಧ ಗಟ್ಟಿ ಸೌಹಾರ್ದತೆ ಪ್ರದರ್ಶಿಸುತ್ತಿದ್ದಾರೆ. ಹೀಗಾಗಿ ನಿಜ ಅರ್ಥದಲ್ಲಿ ವರ್ಷದ ವ್ಯಕ್ತಿ 'ಫ್ರಾನ್ಸ್ ನ ಕಾರ್ಮಿಕ' ಆಗಬೇಕಿತ್ತು.

JANASHAKTHI KANNADA VARA PATRIKE JANUARY 20-26, 2020 Price: Rs. 10/- Date of Publication: 17 JANUARY 2020 RNI No. KARKAN /2006/17926 Posted on every Saturday
"REGISTERD" Postal Reg. No. RNP/KA/BGS/2078/2019-21 Posted at Bangalore PSO, BG - 560026 Licensed to Post without prepayment License No. WPP-283



ಮಹಾರಾಷ್ಟ್ರದ ಆದಿವಾಸಿಗಳಾದ ವಾರಲೀಯರ ಏಳು ದಶಕಗಳ ಹಿಂದಿನ ಹೋರಾಟದ ಕತೆ ಹೇಳುವ ಗೋದಾವರಿ ಪರುಳೇಕರ್ ಅವರ ಚಾರಿತ್ರಿಕ ಪುಸ್ತಕ 'ಮಾನವ ಎಚ್ಚೆತ್ತಾಗ'ದ ಪ್ರತಿಗಳು ಕೆಲವು ವರ್ಷಗಳಿಂದ ಲಭ್ಯವಿರಲಿಲ್ಲ. ಈಗ ಕ್ರಿಯಾ ಮಾಧ್ಯಮ ಇದನ್ನು ಮರುಮುದ್ರಿಸಿ ಪ್ರಕಟಿಸಿದೆ. ಅದರ ಕಿರು ಪರಿಚಯ ಕೊಡುವ ಪ್ರಕಾಶಕರ ಮಾತು ಮತ್ತು ಪುಸ್ತಕದಿಂದ ಆಯ್ದ ಎರಡು ಘಟನೆಗಳು ಇಲ್ಲಿವೆ.

ಮಾನವ ಎಚ್ಚೆತ್ತಾಗ

ಮೂಲತಃ ಇದು ಏಳು ದಶಕಗಳ ಹಿಂದೆ ಜೀತಪದ್ಧತಿಯನ್ನು ನಿರ್ಮೂಲಗೊಳಿಸುವಲ್ಲಿ ಯಶಸ್ವಿಯಾದ ವಾರಲೀ ಆದಿವಾಸಿ ಜನಗಳ ಹೋರಾಟದ ಕತೆ. ತಹಸೀಲ್ದಾರ್ ಕಚೇರಿಯನ್ನು 30 ಸಾವಿರ ಆದಿವಾಸಿಗಳು ಸುತ್ತುವರಿಯುತ್ತಿರುವದನ್ನು ಕಂಡ, ಅದುವರೆಗೆ ಭಂಡತನವನ್ನು ಪ್ರದರ್ಶಿಸುತ್ತಿದ್ದ ತಹಸೀಲ್ದಾರ ಓಡಿ ಹೋದ. ಆದಿವಾಸಿಗಳು ಗೋದಾವರಿ ಪರುಳೇಕರ್ ನೇತೃತ್ವದಲ್ಲಿ ಜೀತಪದ್ಧತಿಯನ್ನು ಎಂದೆಂದಿಗೂ ನಿರ್ಮೂಲಗೊಳಿಸಲಾಗಿದೆ ಎಂದು ಘೋಷಿಸಿದರು. ಇದು ಇನ್ನೂ ಹಲವಾರು ಘೋಷಣೆಗಳ ಆರಂಭವಾಗಿತ್ತು.

ಚಾರಿತ್ರಿಕವಾಗಿ ಹೇಳುವುದಾದರೆ, ವಾರಲೀ ಆದಿವಾಸಿ ಹೋರಾಟ ಜೀತಪದ್ಧತಿ, ಭೂಮಿ, ಅರಣ್ಯ, ಕೂಲಿಶ್ರಮ ಮುಂತಾದ ಜ್ವಲಂತ ಪ್ರಶ್ನೆಗಳನ್ನು ಎತ್ತುವಲ್ಲಿ ಸಾಧಿಸಿದ ವಿಜಯಗಳು ಕನಿಷ್ಟ ಕೂಲಿ ಮುಂತಾದ ಹಲವು ಶಾಸನಗಳು ರೂಪುಗೊಳ್ಳಲು ಕಾರಣವಾದವು.

'ಮಾನವ ಎಚ್ಚೆತ್ತಾಗ' ತನಗೆ ಹಾಕಿದ ಕೋಳವನ್ನು ಕಿತ್ತೆಸೆಯಬಲ್ಲ, ಶೋಷಣೆಯ ನೊಗವನ್ನು ಮುರಿದೊಗೆಯಬಲ್ಲ, ಜೀವ ಹಿಂಡುವ ವ್ಯವಸ್ಥೆಯನ್ನು ಬದಲಿಸಬಲ್ಲ ಎಂಬುದನ್ನು ಚರಿತ್ರೆಯುದ್ದಕ್ಕೂ ನೋಡುತ್ತೇವೆ. ಹೀಗೆ ನೂರಾರು ವರ್ಷಗಳಿಂದ ಜಮೀನುದಾರ, ಭೂಮಾಲಿಕರ ಕ್ರೌರ್ಯವನ್ನು ಬಾಯ್ಮುಚ್ಚಿ ಒಪ್ಪಿಕೊಂಡ ಆಗಿನ ಮುಂಬಯಿ ಪ್ರಾಂತದ (ಈಗಿನ ಮಹಾರಾಷ್ಟ್ರ ರಾಜ್ಯದ) ಠಾಣೆ ಜಿಲ್ಲೆಯ ಈ ವಾರಲೀ ಆದಿವಾಸಿ ಸಮುದಾಯ ಎಚ್ಚರಗೊಳ್ಳುವವರೆಗಿನ ಹೋರಾಟದ ಕತೆಯನ್ನು ಗೋದಾವರಿ ಪರುಳೇಕರ ಈ ಪುಸ್ತಕದಲ್ಲಿ ಸಶಕ್ತವಾಗಿ ಹಿಡಿದಿಟ್ಟಿದ್ದಾರೆ.

ಈ ಹೋರಾಟದಲ್ಲಿ ತನ್ನನ್ನು ಸಂಪೂರ್ಣವಾಗಿ ತೊಡಗಿಸಿಕೊಂಡು ಅನೇಕ ಕಷ್ಟನಷ್ಟಗಳನ್ನು ಅನುಭವಿಸಿದ ಗೋದಾವರಿ ಪರುಳೇಕರ ಅಪರ ಬದುಕು–ಬರವಣಿಗೆ ಎಂಥವರಲ್ಲೂ ಸ್ಫೂರ್ತಿ ತುಂಬಬಲ್ಲದು. ಮೂಲ ಮರಾಠಿಯಲ್ಲಿ ಪ್ರಕಟವಾಗಿ, ಸಾಹಿತ್ಯ ಅಕಾಡೆಮಿಯ ಬಹುಮಾನವನ್ನು ಕೂಡ ಗಳಿಸಿರುವ ಈ ಪುಸ್ತಕದ ಅನುವಾದ ಇದು. ದೇಶದ ಹತ್ತಾರು ಭಾಷೆಗಳಿಗೆ ಅನುವಾದಗೊಂಡ ಈ ಪುಸ್ತಕವನ್ನು ಶ್ರೀಮತಿ ಸರಸ್ವತಿ ರಿಸಬುಡ್ ಕನ್ನಡಕ್ಕೆ ಅನುವಾದಿಸಿದ್ದಾರೆ. 18ವರ್ಷಗಳ ಹಿಂದೆ 'ಅಧ್ಯಯನ ಪ್ರಕಾಶನ' ಇದನ್ನು ಪ್ರಕಟಿಸಿದ್ದು, ದೇಶಾದ್ಯಂತ ಐಕ್ಯ ರೈತ ಹೋರಾಟ ಭುಗಿಲೆದ್ದಿರುವ ಸಂದರ್ಭದಲ್ಲಿ, ಈ ಆವೃತ್ತಿ ಪ್ರಕಟವಾಗುತ್ತಿದೆ.

ಯಾವ ಜಾದು ಮಾಡಿದಿರಿ?

ಚಳುವಳಿಯ ಕಾಲದಲ್ಲಿ ಯಾವುದೊಂದು ನೆವದಲ್ಲಿ ಅನೇಕ ಆದಿವಾಸಿಯರನ್ನು ಬಂಧಿಸಿಟ್ಟಿದ್ದರು. ಮೊಕದ್ದಮೆಗಳನ್ನು ದಾಖಲ ಮಾಡಿದ್ದರು. ಅವರನ್ನು ಸಂತೈಸಲು, ಇಲ್ಲವೇ ಜಾಮೀನಿನ ಮೇಲೆ ಬಿಡಿಸಿ ತರಲು 1945ರ ಗೋಲಿಬಾರಿನ ನಂತರ ಅನೇಕ ಬಾರಿ ನಾನು ಖುದ್ದಾಗಿ ಕೋರ್ಟಿನಲ್ಲಿ ಹಾಜರಿರುತ್ತಿದ್ದೆ. ದಿನವೆಲ್ಲ ಫೌಜದಾರ ಕಛೇರಿ, ತಹಸಿಲ್ದಾರರ ಕಛೇರಿಗಳಲ್ಲಿ ಕಾಯಬೇಕಾಗುತ್ತಿತ್ತು. ಕಛೇರಿಗಳ ಆವಾರಗಳಲ್ಲಿ ರೈತರ ಅನೇಕ ಗುಂಪುಗಳು ಅಲ್ಲಲ್ಲಿ ಕಾದುಕೊಂಡು ಕುಳಿತಿರುತ್ತಿದ್ದುವು. ಬೇರೆ ಬೇರೆ ಗ್ರಾಮಗಳ ಅನೇಕ ರೈತರ ಭೇಟಿಯಾಗುತ್ತಿತ್ತು. ಈ ಕಾಲಕ್ಕೆ ಆದಿವಾಸಿಯರಲ್ಲಿ ಆದ ಬದಲಾವಣೆಯ ಬಗ್ಗೆ ಮೋಜಿನ ಅನುಭವಗಳು ಬರುತ್ತಿದ್ದವು.

ಒಂದು ಮಧ್ಯಾಹ್ನ ಉಂಬರಗಾಂವದಲ್ಲಿ ಶ್ರೀ ಮುಳೆ ಅವರ ಮನೆಯ ಬಳಿ ಇದ್ದ ತಹಸೀಲ್ದಾರರ ಕಛೇರಿಯತ್ತ ನಾನು ಹೊರಟಿದ್ದೆ. ಸಾಮಾನ್ಯವಾಗಿ ಪಟ್ಟಣದ ಸ್ಥಾನಿಕ ಜನರು ನಮ್ಮೊಡನೆ ಮಾತನಾಡುತ್ತಿರಲಿಲ್ಲ. ಅವರು ನಮ್ಮನ್ನು ಅಸ್ಪೃಶ್ಯರೆಂದೇ ಬಗೆದಿದ್ದರು. ಅಂದು ನಡುದಾರಿಯಲ್ಲಿ ಕನ್ನಡಕದ ಧರಿಸಿದ ಮಧ್ಯಮ ವಯಸ್ಸಿನ ಸುಸಂಸ್ಕೃತ ಗೃಹಸ್ಥರೊಬ್ಬರು ನನ್ನ ಎದುರು ಬಂದು ನಿಂತರು.

"ಏನ್ರಿ ಜಾದು ಮಾಡಿದಿರಿ? ಮ್ಯಾಜಿಸ್ಟ್ರೇಟ್ ಸಾಹೇಬರ ಎದುರು ಕೋರ್ಟಿನಲ್ಲಿ ನಿಲ್ಲುವುದೆಂದರೇ ಆದಿವಾಸಿಯರು ಗಡಗಡ ನಡುಗುತ್ತಿದ್ದರು; ಬಾಯಿಯಿಂದ ಮಾತೇ ಹೊರಡುತ್ತಿರಲಿಲ್ಲ; ಎಷ್ಟೋ ವರುಷಗಳಿಂದ ಇದನ್ನು ನಾವು ಕಂಡಿದ್ದೇವೆ. ಆದರೆ ಈಗೇನು? ಖಡಾಖಡಿ ಜವಾಬು ಕೊಡುತ್ತಾರೆ. ಪೊಲೀಸರಿಗೆ ಅಂಜುವುದಂತೂ ಇರಲಿ, ನ್ಯಾಯಾಧೀಶರನ್ನೂ ಲೆಕ್ಕಿಸುವುದಿಲ್ಲವಲ್ಲ! ಶ್ರೀ ಶೇಟ್ ಮ್ಯಾಜಿಸ್ಟ್ರೇಟ್ ಅವರಿಗೂ ಕೂಡ ಮುಖಕ್ಕೆ ತಿವಿದ ಹಾಗೆ ಉತ್ತರ ಕೊಟ್ಟರಲ್ಲ. ಏನ್ ಚಮತ್ಕಾರ ಇದು ನೀವು ಮಾಡಿರೋದು?"

ಎಂದು ಒಂದೇ ಉಸಿರಿಗೆ ನುಡಿದರು. ಈ ರೀತಿ ಹೇಳುವ ಗೃಹಸ್ಥರು ತಹಶೀಲ್ದಾರ ಕ್ಛಭೇರಿಯಲ್ಲಿ ಕೆಲಸದಲ್ಲಿದ್ದರು. ಅವರ ಹೇಳಿಕೆಯ ಅರ್ಥವು ಕೂಡಲೇ ನನಗೆ ಹೊಳೆಯಲಿಲ್ಲ. ವಿಚಾರಣೆಯ ನಂತರ ಎಲ್ಲವೂ ತಿಳಿದುಬಂತು. ಬಂಧಿಸಲ್ಪಟ್ಟ ಅನೇಕ ಆದಿವಾಸಿಯರನ್ನು ಉಂಬರಗಾಂವದಲ್ಲಿ ಲಾಕಪ್‌ನಲ್ಲಿ ಇಟ್ಟಿದ್ದರು. ಅವರಲ್ಲಿ ಚತುರ ತರುಣ ವಾರಲೀಯನೊಬ್ಬನಿದ್ದನು. ಲಾಕಪ್ಪಿನಲ್ಲಿ ಆದಿವಾಸಿಯರು ಇದ್ದಾಗ ಮ್ಯಾಜಿಸ್ಟ್ರೇಟರು ಒಮ್ಮೆ ಅಲ್ಲಿಗೆ ಬಂದರು. ಲಾಕಪ್ಪಿನ ಗೇಟಿನ ಆಚೆ ನಿಂತು ಒಂದೆರಡು ಮಾತುಗಳನ್ನು ಹೇಳಲು ಖುದ್ದಾಗಿ ಅವರು ಆದಿವಾಸಿಯರೊಡನೆ ಮಾತನಾಡಹತ್ತಿದರು. ಇಂಥ ಪ್ರಸಂಗವನ್ನು ಆದಿವಾಸಿಯರು ಅಪೇಕ್ಷಿಸಿರಲಿಲ್ಲ. ಮ್ಯಾಜಿಸ್ಟ್ರೇಟರು ಜೇಠ್ಯಾ ಎಂಬ ವಾರಲೀಗೆ ಕೆಂಪು ಬಾವುಟವನ್ನು ತ್ಯಜಿಸಿ ಚಳುವಳಿಯ ಹವ್ಯಾಸವನ್ನು ಬಿಟ್ಟುಕೊಡಲು ಹೇಳಿದರು. ಒಳ್ಳೆಯ ಕೆಲಸ ಕೊಡಿಸುವ ಆಕರ್ಷಣೆಯನ್ನು ಮುಂದಿಟ್ಟರು. ಈ ರೀತಿ ಜೈಲಿನಲ್ಲಿ ಕೊಳೆ ಬೀಳುವುದಕ್ಕಿಂತ ಒಳ್ಳೆಯ ನೌಕರಿಯಿಂದ ಸುಖವಾಗಿ ಬಾಳುವುದು ಮೇಲು ಎಂದು ಉಪದೇಶವಿತ್ತರು. ಇದಕ್ಕೆ ಜೇಠ್ಯ ಆದಿವಾಸಿಯು ಕೊಟ್ಟ ಉತ್ತರ ಬರೆದಿಡುವಂತಿದೆ. ಸ್ವಲ್ಪ ತಡೆದು ಆತನು,

"ಎಷ್ಟು ಕಾಲದವರೆಗೆ ಸರಕಾರ ನಮ್ಮನ್ನು ಸೆರೆಯಲ್ಲಿ ಇಟ್ಟೀತು? ವರುಷ ತಪ್ಪಿದರೆ ಎರಡು ವರುಷ. ಒಂದಲ್ಲಾ ಒಂದು ಸಾರಿ ಬಿಡುಗಡೆ ಮಾಡಲೇಬೇಕಲ್ಲವೆ? ನಮ್ಮ ರಾಜ್ಯ ಬಂದಿತೆಂದರೆ ಆ ಕಾಲಕ್ಕೆ ಇದೇ ಕೊಠಡಿಗಳನ್ನು ನಿಮಗಾಗಿ ಕಾದಿಡುವುದಿದೆ"

ಎಂಬ ಉತ್ತರ ಮ್ಯಾಜಿಸ್ಟ್ರೇಟರಿಗೆ ಕೊಟ್ಟನು.

ಅಶಿಕ್ಷಿತ ಲಂಗೋಟಿಧಾರಿ ಆದಿವಾಸಿಯ ಉತ್ತರ ಕೇಳಿ ಮ್ಯಾಜಿಸ್ಟ್ರೇಟರು ಬೆರಗಾದರು. ಇಂಥ ಉತ್ತರವು ಅನಪೇಕ್ಷಿತವಿತ್ತು. ಅಲ್ಲದೆ ಆಶ್ಚರ್ಯಕರವೂ, ಅಪಮಾನಕಾರಿಯೂ ಆಗಿತ್ತು. ಮ್ಯಾಜಿಸ್ಟ್ರೇಟರು ವಾಪಸು ಹೊರಟುಬಿಟ್ಟರು. ಈ ಮೊದಲು ಹೇಳಿದಂತೆ ನನಗೆ ಭೇಟಿಯಾದ ಗೃಹಸ್ಥರು,

"ವಾರಲೀಯನ ಇಂಥ ಉತ್ತರ ಕೇಳಿ ಕ್ಛಭೇರಿಯ ಜನರೆಲ್ಲರು ತಣ್ಣಗಾದರು. ಈಗ ನೀವು ಹೋಗುವುದನ್ನು ಕಂಡೆ, ನಿಮಗೆ ಹೇಳಲೇಬೇಕೆಂದೆನಿಸಿತು. ಕಾರಣ ತಮ್ಮನ್ನು ತಡೆದು, ನಾವು ಕಂಡದ್ದನ್ನು, ಕೇಳಿದ್ದನ್ನು ಹೇಳಿದೆ ಅಷ್ಟೆ. ಇದನ್ನೇ ಬೇರೆ ಯಾರದರೂ ಹೇಳಿದ್ರೆ ನಾವು ಖಂಡಿತಾ ನಂಬುತ್ತಿರಲಿಲ್ಲ. ಅದಕ್ಕಾಗಿ ಕೇಳಿದೆ ಏನ್ ಜಾದು ಮಾಡಿದ್ರಿ ಅಂತ"

ಎಂದು ಮಾತು ಮುಗಿಸಿದರು. ಜಾದು ಮಾಡಿದ್ದು ನಾನಲ್ಲ. ಜಾದು ನಡೆದದ್ದು ಮಾರ್ಕ್ಸ್‌ವಾದದಿಂದ, ಕಮ್ಯೂನಿಸ್ಟ್ ಪಕ್ಷದಿಂದ. ಕ್ರಾಂತಿಕಾರ ಚಳುವಳಿಯ ಒತ್ತಡದ ಅಲ್ಪಾವಧಿಯಲ್ಲಿ ಸಮಾಜದಲ್ಲಿ ಎಷ್ಟೊಂದು ಪರಿವರ್ತನೆಯಾಗಬಹುದು ಎಂಬುದರ ಕಲ್ಪನೆ ಪಾಪ ಈ ಗೃಹಸ್ಥರಿಗೆ ಎಲ್ಲಿಂದ ಬರಬೇಕು? ಈ ಪ್ರಸಂಗವೆಲ್ಲ ನನ್ನ ಹೃದಯದ ವೇದಿಕೆಯಲ್ಲಿ ಕೆತ್ತಿದಂತಿದೆ.

ಗೋದಾವರಿ ಪರುಳೇಕರ್

(1907–1996)



ಮಹಾರಾಷ್ಟ್ರದ ಮೊದಲ ಮಹಿಳಾ ಕಾನೂನು ಪದವೀಧರೆಯೆಂಬ ಖ್ಯಾತಿ ಪಡೆದರೂ ವಕೀಲ ವೃತ್ತಿಗಿಳಿಯದೆ ಸ್ವಾತಂತ್ರ್ಯ ಹೋರಾಟಕ್ಕೆ ಧುಮುಕಿ ತನ್ನ 25ನೇ ವರ್ಷದಲ್ಲಿ ಜೈಲುವಾಸ ಅನುಭವಿಸಿದರು. ಜೈಲಿನಿಂದ ಬಿಡುಗಡೆಯಾದ ಅವರು ಸಮಾಜಸೇವೆಯತ್ತ ಹೆಚ್ಚಿನ ಗಮನ ಹರಿಸಿದರು. ಈ ಅನುಭವ ಅವರನ್ನು ಸಮಾಜ ಸುಧಾರಣೆಯತ್ತ, ನಂತರ ಸಮಾಜ ಬದಲಾವಣೆಯತ್ತ ಒಯ್ಯಿತು. ರೈತಾಪಿ ಜನಗಳ ಚಳುವಳಿಯತ್ತ, ಕಮ್ಯುನಿಸ್ಟ್ ಚಳುವಳಿಯತ್ತ ಆಕರ್ಷಿತರಾದ ಅವರು ಮಹಾರಾಷ್ಟ್ರದಲ್ಲಿ, ನಂತರ ದೇಶದಲ್ಲಿಯೂ ರೈತ ಆಂದೋಲನದ ಒಬ್ಬ ಪ್ರಮುಖ ಮುಖಂಡರಾಗಿ ಬೆಳೆದರು. ವಾರಲೀ ಆದಿವಾಸಿ ಜನರ ನಡುವಿನ ಜಾಗೃತಿಯನ್ನು, ಅವರು ನಡೆಸಿದ ಚಾರಿತ್ರಿಕ ಬಂಡಾಯವನ್ನು ಸಶಕ್ತವಾಗಿ ಹಿಡಿದಿಟ್ಟಿರುವ ಅವರ ಈ ಕೃತಿಗೆ ಮೂಲ ಮರಾಠಿ ಭಾಷೆಯಲ್ಲಿ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ದೊರೆತು ದೇಶದ ಹಲವು ಭಾಷೆಗಳಲ್ಲಿ ಅನುವಾದಗೊಂಡಿದೆ.

ಬೆಲೆ: ರೂ. 150

ದಿಟ್ಟ ಪ್ರತಿಭಟನೆ

ಸರಕಾರಿ ಅಧಿಕಾರಿ ಅದರಲ್ಲೂ ಪೊಲೀಸ್ ಅಧಿಕಾರಿಯೆಂದರೆ ಸರ್ವಶಕ್ತಾಧೀಶ ಎಂದು ಭಾವಿಸುತ್ತಿದ್ದ ಆದಿವಾಸಿಯರು ಈ ಚಳುವಳಿಯ ಕಾಲದಲ್ಲಿ ಒಬ್ಬ ಪೋಲಿಸ್ ಸಬ್‌ಇನ್ಸ್‌ಪೆಕ್ಟರ್ ಮಾಡಿದ ಮಹಜರನ್ನು ಆತನೇ ರದ್ದುಗೊಳಿಸುವಂತೆ ಮಾಡಿದರು. ರಾಯತಳಿ ಗ್ರಾಮದ ಕೆಲ ಆದಿವಾಸಿಯರು ಹೆಂಡಕುಡಿದು ಡಹಾಣುವಿನಿಂದ ತಮ್ಮ ಗ್ರಾಮಕ್ಕೆ ಮರಳುತ್ತಿದ್ದರು. ಅಮಲಿನಲ್ಲಿದ್ದ ಅವರು ದಾರಿಯ ಮಧ್ಯದಲ್ಲಿ ನಡೆದಿದ್ದರು. ಅವರ ಹಿಂದಿನಿಂದ ಜಮೀನುದಾರನ ಟಾಂಗಾ ಬಂದಿತು. ದಾರಿಯ ಮಧ್ಯದಲ್ಲಿ ನಡೆದ ವಾರಲೀಯರನ್ನು ಕಂಡು ವಾಡಿಕೆಯಂತೆ ಜಮೀನುದಾರನು ಅಶ್ಲೀಲ ಬೈಗಳನ್ನು ಬೈದು ಅವರನ್ನು ಬದಿಗೆ ಹೋಗಲು ಗದರಿಸಿ ಟಾಂಗಾವನ್ನು ಮುಂದೆ ಸಾಗಿಸಹತ್ತಿದನು. ಬೈಗುಳದಿಂದ ವಾರಲೀಯರಿಗೆ ಕೋಪವೇರಿತು. ಅವರು ಟಾಂಗಾವನ್ನು ನಿಲ್ಲಿಸಿದರು. ಜಮೀನುದಾರನಿಗೆ ಚೆನ್ನಾಗಿ ಪಾಠ ಕಲಿಸಿದರು. ಜಮೀನುದಾರನ ಹಾಗೂ ಆದಿವಾಸಿಯರ ವಾಗ್ಯುದ್ಧ ಮುಗಿದ ನಂತರ ಟಾಂಗಾ ಮುಂದೆ ಹೋಯಿತು.

ಇಷ್ಟಕ್ಕೆ ಮುಗಿಯದೆ ಜಮೀನುದಾರನೂ, ಆತನ ಆಪ್ತನೊಬ್ಬನೂ ಆದಿವಾಸಿಯರ ಮೇಲೆ ಸೇಡು ತೀರಿಸಲು ಯೋಚಿಸಿದರು. ಐವತ್ತು ರೂಪಾಯಿಗಳನ್ನು ಕದ್ದರೆಂದು ಪೋಲೀಸ್ ಸಬ್‌ಇನ್ಸ್‌ಪೆಕ್ಟರ್‌ರನ್ನು ಕರೆದುಕೊಂಡು ರಾಯತಳಿ ಗ್ರಾಮಕ್ಕೆ ಹೋದರು. ಜಪ್ತಿ ಮಾಡುವ ನೆವದಲ್ಲಿ ಅವರ ಮನೆಗಳಿಗೆ ನುಗ್ಗಿದರು. ಅಷ್ಟರಲ್ಲಿ ಸುತ್ತಲಿನ ಜನರೆಲ್ಲರೂ ನೆರೆದರು. ಆ ಜಮೀನುದಾರ ಆಪ್ತನು ಹೊರಗೆಯೇ ಉಳಿದಿದ್ದನು. ಆತನು ಜೋಪಡಿಯ ಬಾಗಿಲಿನ ಮೇಲಿನ ಸಂದಿನಲ್ಲಿ 10 ರೂಪಾಯಿಗಳ ಐದು ನೋಟುಗಳಿದ್ದ ಪೊಟ್ಟಣವನ್ನು ಆ ಜಾಗದಿಂದ ತೆಗೆದುಕೊಟ್ಟ. ಕಳುವಿನ ಮಾಲು ದೊರಕಿತೆಂದು ಸಬ್‌ಇನ್ಸ್‌ಪೆಕ್ಟರ್ ಮಹಜರನ್ನು ತಯಾರಿಸಿದ. ಇಷ್ಟಾಗುವವರೆಗೆ ಸುಮಾರು ಆದಿವಾಸಿಯರು ಅಲ್ಲಿ ಸೇರಿದ್ದರು. ಮಹಜರನ್ನು ಪೂರ್ತಿಗೊಳಿಸಿ, ಅದನ್ನು ಪುನಃ ಓದಿ ತೋರಿಸಿದ ನಂತರ ವಾರಲೀಯರು ತಮ್ಮ ಹೊಸ ರೂಪವನ್ನು ಪ್ರಕಟಮಾಡಿದರು. ಬಾಗಿಲು ಸಂದಿಯಲ್ಲಿ ಈ ನೋಟುಗಳನ್ನು ತೂರಿಸುವಾಗ ಜನರನ್ನು ಅದನ್ನು ನೋಡಿದ್ದರು. ಆದ್ದರಿಂದ ಈ ಮಹಜರು ಖೊಟ್ಟಿ ಎಂದು ಒಮ್ಮೆಲೇ ಎಲ್ಲರೂ ಗುಡುಗೆಬ್ಬಿಸಿದರು. ಪರಿಸ್ಥಿತಿಯು ಬಿಕ್ಕಟ್ಟಾಯಿತು. ಕೊನೆಗೆ ಆ ಸಬ್‌ಇನ್ಸ್‌ಪೆಕ್ಟರ್ ಖೊಟ್ಟಿಯೆಂದು ಗೊತ್ತಾದ ಆ ಮಹಜರಿನ ಕಾಗದವನ್ನು ವಾರಲೀಯರಿಗೆ ಒಪ್ಪಿಸಿ ಬರಿಗೈಯಿಂದ ಡಹಾಣುವಿಗೆ ಮರಳಬೇಕಾಯಿತು.

JANASHAKTHI KANNADA VARA PATRIKE: Printed, Published by **G.N.NAGARAJ**, No. 12, 18th Cross, Sampangirama Nagar, Bangalore 560027, Karnataka on behalf of **COMMUNIST PARTY OF INDIA (MARXIST)** and **Printed at : Kriya Prakashana,** No. 12, 18th Cross, Sampangirama Nagar, Bangalore 560027
Editor : **G.V.SRIRAMA REDDY**